ಶುಕ್ರವಾರ, ಏಪ್ರಿಲ್ 17, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಕ್ವಿಂಟನ್ ಶತಕ

ಮುಂಬೈ ಇಂಡಿಯನ್ಸ್ ತಂಡದ ಬ್ಯಾಟರ್ ಕ್ವಿಂಟನ್ ಡಿ ಕಾಕ್ (ಔಟಾಗದೇ 112) ಗುರುವಾರ ಪಂಜಾಬ್ ಕಿಂಗ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಶತಕ ಬಾರಿಸಿದರು



ಸಹಭೋಜನ

ಆಂಧ್ರಪ್ರದೇಶದ ದರಣಿಕೋಟಾ ಗ್ರಾಮದಲ್ಲಿ ಅಣ್ಣಾ ಕ್ಯಾಂಟೀನ್‌ಗೆ ಚಾಲನೆ ನೀಡಿದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಜನರ ಜೊತೆಗೆ ಊಟ ಸವಿದರು



ಮುಕುಂದ ರಾಮಸ್ವಾಮಿ, ದಿಯಾ ಕೀರ್ತಿ



ಚಂದನ್ ಶೆಟ್ಟಿ

‘ನಿರಂತರ ಯಶಸ್ಸು ಇರಬೇಕು’

ಚಂದನ್ ಶೆಟ್ಟಿ ನಾಯಕನಾಗಿ ನಟಿಸಿರುವ ‘ಎಲ್ರ ಕಾಲೆಳೆಯುತ್ತೆ ಕಾಲ’ ಚಿತ್ರ ಮುಂದಿನ ವಾರ ತೆರೆ ಕಾಣುತ್ತಿದೆ. ಜತೆಗೆ ತಮ್ಮ ಹೊಸ ರ್‍ಯಾಪ್ ಸಾಂಗ್ ಬಿಡುಗಡೆ ಖುಷಿಯಲ್ಲಿದ್ದಾರೆ. ತಮ್ಮ ನಟನೆ ಹಾಗೂ ಸಂಗೀತ ಪಯಣ ಕುರಿತು ಅವರು ಮಾತನಾಡಿದ್ದಾರೆ.

• ವಿನಾಯಕ ಕೆ.ಎಸ್.

• ಈ ಚಿತ್ರದ ಮೂಲಕ ನೀವು ಯಾರ ಕಾಲೆಳೆಯಲು ಹೊರಟಿದ್ದೀರಿ?

ಇದು ನನ್ನ ಮೊದಲ ಸಿನಿಮಾ. ಈ ಸಿನಿಮಾ ಪ್ರಾರಂಭವಾಗುವ ಮೊದಲು ನಾನು ರಾಜ್‌ಕುಮಾರ್ ಅವರ ಸಮಾಧಿಗೆ ಹೋಗಿ, ಕೈ ಮುಗಿದು ನಟನಾಗಲು ಅವರ ಆಶೀರ್ವಾದ ಬೇಡಿದ್ದೆ. ನಾಲ್ಕು ವರ್ಷಗಳ ಬಳಿಕ ಅಂತಿಮವಾಗಿ ಅವರ ಹುಟ್ಟುಹಬ್ಬದ ದಿನವೇ ಸಿನಿಮಾ ತೆರೆ ಕಾಣುತ್ತಿದೆ ಎಂಬುದು ಖುಷಿಯ ವಿಷಯ. ವಿಜಯ್ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಕಾಲೇಜಿನ ಪ್ರಾಧ್ಯಾಪಕ. ಯಾರ ಕಾಲನ್ನೂ ಎಳೆಯುವುದಿಲ್ಲ. ಇಲ್ಲಿ ಕಾಲವೇ ನನ್ನ ಕಾಲು ಎಳೆಯುತ್ತದೆ.

• ಸಂಪೂರ್ಣ ಹಾಸ್ಯಮಯ ಕಥೆಯಾ?

ಪ್ರಾಧ್ಯಾಪಕನಾಗಿ ಒಂದು ಊರಿಗೆ ಹೋಗಿ ಸಿಕ್ಕಿಹಾಕಿಕೊಳ್ಳುತ್ತೇನೆ. ವಾಪಾಸ್ ಬೆಂಗಳೂರಿಗೆ ಬರುವ ಸ್ಥಿತಿ ಬರುತ್ತದೆ. ಏಕೆ ಆ ಸ್ಥಿತಿ ಬರುತ್ತದೆ ಎಂಬುದೇ ಕಥೆ. ಸಸ್ಪೆನ್ಸ್, ಮಿಸ್ಟ್ರಿ ಜಾನರ್ ಸಿನಿಮಾ ಎನ್ನಬಹುದು. ಜತೆಗೆ ಕಥೆಯಲ್ಲಿ ಹಾಸ್ಯವೂ ಬರುತ್ತದೆ. ಆದರೆ ಪೂರ್ತಿ ಹಾಸ್ಯಮಯ ಕಥೆಯಲ್ಲ. 80ರ ದಶಕದ ಹಳ್ಳಿ ಜೀವನವನ್ನು ಕಟ್ಟಿಕೊಡಲಾಗಿದೆ.

• ನಿಮ್ಮ ‘ಕ್ಯಾಂಡಿಕ್ರಶ್’ ಸಿನಿಮಾ ಈಗ ಯಾವ ಹಂತದಲ್ಲಿದೆ?

ಅದರ ಬಗ್ಗೆ ಹೆಚ್ಚು ಮಾಹಿತಿ ಇಲ್ಲ. ಅದರಲ್ಲಿ ಕೇವಲ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿರುವೆ. ಚಿತ್ರದಲ್ಲಿ ತೆರೆಯ ಮೇಲೆ ಐದು ನಿಮಿಷ ಕಾಣಿಸಿಕೊಳ್ಳಬಹುದಷ್ಟೆ.

• ಹೊಸ ಸಿನಿಮಾಗಳನ್ನು ಒಪ್ಪಿಕೊಂಡಿದ್ದೀರಾ?

ಇಲ್ಲ, ನಾನು ಕೂಡ ಹೆಚ್ಚು ಆಸಕ್ತಿ ತೋರಿಸಿಲ್ಲ. ಸಂಗೀತದ ಮೇಲೆ ಹೆಚ್ಚು ಗಮನಹರಿಸಿರುವೆ. ಒಳ್ಳೆಯ ಕಥೆ ಬಂದರೆ ನಟಿಸುವೆ.

• ಸಂಗೀತದ ಪಯಣ ಹೇಗೆ ಸಾಗಿದೆ?

‘ಕ್ರಿಮಿನಲ್’ ಚಿತ್ರಕ್ಕೆ ಸಂಗೀತ ನೀಡುತ್ತಿರುವೆ. ನನ್ನ ‘ಡಯಾನಾಮೈಟ್’ ಎಂಬ ರ್‍ಯಾಪ್ ಸಾಂಗ್ ಏ.23ಕ್ಕೆ ಯೂಟ್ಯೂಬ್‌ನಲ್ಲಿ ಬಿಡುಗಡೆಗೊಳ್ಳುತ್ತಿದೆ. ಮೈಸೂರಿನ ಹೊಸ ಕಲಾವಿದೆಯನ್ನು ಈ ಹಾಡಿನ ಮೂಲಕ ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದೇನೆ. ಇಂಗ್ಲಿಷ್‌ನಲ್ಲಿ ಸಿದ್ಧಗೊಂಡಿರುವ ಹಾಡಿದು. ಮೊದಲ ಸಲ ವಿಶ್ವದ ಮಾರುಕಟ್ಟೆಗೆ ಪ್ರವೇಶಿಸುತ್ತಿರುವೆ. ತುಂಬ ಪೈಪೋಟಿ ಇರುವ ಮಾರುಕಟ್ಟೆ. ಆದರೂ ಒಂದು ಪ್ರಯತ್ನ ಮಾಡೋಣ ಎಂದು ಹೊರಟಿರುವೆ.

• ಕನ್ನಡದಲ್ಲಿಯೂ ಸ್ವತಂತ್ರ ಮ್ಯೂಸಿಕ್ ಆಲ್ಬಂಗಳು ಬರುತ್ತಿವೆ. ಅವುಗಳಿಂದ ಹಾಕಿದ ಬಂಡವಾಳ ಮರಳಿ ತೆಗೆಯಬಹುದಾ?

ಬಂಡವಾಳ ಮರಳಿ ತೆಗೆಯುವುದು ಬಹಳ ಕಷ್ಟವಿದೆ. ನಿರ್ಮಾಪಕರಿದ್ದರೆ ಸರಿ. ಕಲಾವಿದನೇ ಬಂಡವಾಳ ಹಾಕಿ ಹಾಡು ಮಾಡಿದರೆ ಕಷ್ಟ. ಎಲ್ಲ ಹಾಡುಗಳು ಜನಪ್ರಿಯ ಆಗುತ್ತವೆ ಎನ್ನಲು ಸಾಧ್ಯವಿಲ್ಲ. ಅಪರೂಪಕ್ಕೆ ಒಂದೊಂದು ಹಾಡು ಹಿಟ್ ಆಗುತ್ತವೆ. ಜನಪ್ರಿಯ ಹಾಡು ನೀಡಬೇಕಾದರೆ ನೀವು ಸಾಕಷ್ಟು ಸಮಯ ಹಾಗೂ ಹಣ ಹೂಡಿಕೆ ಮಾಡಲೇಬೇಕು. ಆ ದೃಷ್ಟಿಕೋನದಲ್ಲಿ ನೋಡಿದರೆ ಈಗಿನ್ನೂ ಈ ವೃತ್ತಿ ಶುರು ಮಾಡುವವರಿಗೆ ಆರ್ಥಿಕ ಯಶಸ್ಸು ಬಹಳ ಕಷ್ಟವಿದೆ. ನಾನು ಯೂಟ್ಯೂಬ್ ಶುರುಮಾಡಿ 16 ವರ್ಷವಾಯ್ತು. ನನ್ನ ‘ತ್ರೀಪೆಗ್’ ಹಾಡು 190 ದಶಲಕ್ಷ ವೀಕ್ಷಣೆ ಪಡೆದಿದೆ. ಆ ರೀತಿ ಹಿಟ್ ಆದರೆ ಉತ್ತಮ ಆದಾಯ ಬರುತ್ತದೆ. ಇವತ್ತು ನಾನೇ ಹಾಡುಗಳನ್ನು ನಿರ್ಮಿಸುತ್ತಿರುವೆ ಎಂದರೆ, ಅದು ಯೂಟ್ಯೂಬ್‌ನಿಂದಲೇ ಸಾಧ್ಯವಾಗಿದ್ದು. ಹಾಗಂತ ಎಲ್ಲ ಹಾಡುಗಳು ಅದೇ ರೀತಿ ಆಗುತ್ತವೆ ಎನ್ನಲು ಸಾಧ್ಯವಿಲ್ಲ.

• ಈಗಲೂ ಪಾರ್ಟಿ ಹಾಡುಗಳಿಗೆ ಅದೇ ರೀತಿ ಬೇಡಿಕೆ ಇದೆಯಾ?

ಇವತ್ತಿನ ಮಾರುಕಟ್ಟೆ ಪೂರ್ಣ ಭಿನ್ನವಾಗಿದೆ. ಈಗಿನ ವೀಕ್ಷಕರು ಸುಮಧುರವಾದ, ನಿಧಾನಗತಿಯ ಸಂಗೀತವನ್ನು ಇಷ್ಟಪಡುತ್ತಿದ್ದಾರೆ. ಜೆನ್‌ಜಿಗಳಲ್ಲಿ ಮದ್ಯ ಸೇವನೆ ಪ್ರಮಾಣ ಕಡಿಮೆಯಾಗಿದೆ ಎಂದು ಸಮೀಕ್ಷೆಗಳು ಹೇಳುತ್ತಿವೆ. ಹೀಗಾಗಿ ಪಾರ್ಟಿ ಹಾಡುಗಳಿಗೆ ಮೊದಲಿನ ರೀತಿ ಬೇಡಿಕೆ ಉಳಿದಿಲ್ಲ. ಇವತ್ತು ಪಾರ್ಟಿಗಳು ನಡೆಯುತ್ತಿಲ್ಲ ಎಂದಲ್ಲ, ಆದರೆ ಅವುಗಳಿಗೆ ಒಗ್ಗುವ ರೀತಿಯ ಹಾಡುಗಳು ಬೇಕಿವೆ.

• ಸಿನಿಮಾಕ್ಕೆ ಹೋಲಿಸಿದರೆ ರ್‍ಯಾಪ್ ಮಾರುಕಟ್ಟೆಯಲ್ಲಿ ಪೈಪೋಟಿ ಹೇಗಿದೆ?

ರ್‍ಯಾಪ್‌ನಲ್ಲಿ ಅವಕಾಶ ಹೆಚ್ಚಿದೆ. ಪ್ರೇಕ್ಷಕ ವರ್ಗವೂ ದೊಡ್ಡದಿದೆ. ಆದರೆ ನಿರೀಕ್ಷೆಯೂ ಹೆಚ್ಚಿದೆ. ಇವತ್ತು ಜನಕ್ಕೆ ವಿಶ್ವದ ಸಂಗೀತ ಸುಲಭವಾಗಿ ಸಿಗುತ್ತದೆ. ಹೀಗಾಗಿ ನೀವು ಏನೇ ಮಾಡಿದರೂ ಅದೇ ಗುಣಮಟ್ಟದಲ್ಲಿ ಮಾಡಬೇಕೆಂಬ ನಿರೀಕ್ಷೆ ಜನರದ್ದು. ವಿಶ್ವದರ್ಜೆಯ ಸಂಗೀತವಿದ್ದರೆ ಮಾತ್ರ ಇಲ್ಲಿ ಉತ್ತಮ ಗಳಿಕೆ ಸಾಧ್ಯ. ಇಲ್ಲವಾದಲ್ಲಿ ಕಂಟೆಂಟ್ ಕ್ರಿಯೇಟರ್‌ಗಳ ರೀತಿ ಸಣ್ಣಪ್ರಮಾಣದಲ್ಲಿ ಹಾಡು ಮಾಡಬೇಕು. ಈಗ ಕಂಟೆಂಟ್ ಕ್ರಿಯೇಟರ್‌ಗಳ ಯುಗ. ಇಂಟರ್‌ನೆಟ್ ಬಳಕೆದಾರರಿಗೆ ಇವತ್ತು ಇವರೇ ದೊಡ್ಡ ಮೂಲ. ಕಂಟೆಂಟ್ ನೋಡಲು ಇವತ್ತು ಹೆಚ್ಚು ಇಂಟರ್‌ನೆಟ್ ಬಳಕೆಯಾಗುತ್ತಿದೆ. ಅಲ್ಲಿಂದ ಕೂಡ ಆದಾಯ ನಿರೀಕ್ಷಿಸಬಹುದು.

• ಒಟ್ಟಾರೆಯಾಗಿ ನಟನೆ ಮತ್ತು ಸಂಗೀತ, ನಿರ್ಮಾಣದಲ್ಲಿ ಹೆಚ್ಚು ಸವಾಲು ಯಾವುದು?

ನಿರ್ಮಾಣದಲ್ಲಿ ಹೆಚ್ಚಿನ ಅಪಾಯವಿದೆ. ಹಾಂಗತ ತಂತ್ರಜ್ಞನಾಗಿಯೂ ವೃತ್ತಿ ಸುಲಭವಿಲ್ಲ. ನಿರಂತರ ಯಶಸ್ಸು ಇರಬೇಕು. ಇಲ್ಲವಾದರೆ ಬೇಡಿಕೆ ಕಡಿಮೆಯಾಗುತ್ತದೆ. ‘ಒಗ್ಗಟ್ಟಿನಲ್ಲಿ ಬಲವಿದೆ’ ಎಂಬಂತೆ ನಾವು ತಂಡಗಳಾಗಿ ಬೆಳೆಯಬೇಕು. ಒಂದು ತಂಡ ನಾಲ್ಕೈದು ಸಿನಿಮಾಗಳಾಗುವವರೆಗಾದರೂ ಒಟ್ಟಿಗೆ ಇರಬೇಕು. ಆದರೆ ನಮ್ಮಲ್ಲಿ ಹಾಗಾಗುತ್ತಿಲ್ಲ. ಒಂದೆರಡು ಸಿನಿಮಾಗಳಿಗೆ ತಂಡಗಳು ವಿಭಜನೆಗೊಳ್ಳುತ್ತವೆ. ಆಗ ತಂತ್ರಜ್ಞರಾಗಿ ನೆಲೆ ನಿಲ್ಲುವುದು ಕಷ್ಟ.

‘ಲವ್ ಸೀಸನ್ಸ್’ನಲ್ಲಿ ಪ್ರೇಮಕಥೆ



ರಾಜೇಶ್ ನಟರಂಗ

ಬಹುತೇಕ ಹೊಸಬರಿಂದಲೇ ಕೂಡಿರುವ ‘ಲವ್ ಸೀಸನ್ಸ್’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕೃತ್ವಿಕ್ ಈ ಚಿತ್ರದ ಮೂಲಕ ನಿರ್ದೇಶಕರಾಗುತ್ತಿದ್ದಾರೆ.

‘ಕನ್ನಡ ಚಿತ್ರರಂಗಕ್ಕೆ ಮತ್ತೊಂದು ಹೊಸಬರ ತಂಡದ ಆಗಮನವಾಗಿದೆ. ಮೂಲತಃ ರಂಗಭೂಮಿಯಿಂದ ಬಂದವನು. ‘ಬುದ್ಧಿವಂತ–2’, ‘ಗುರುದೇವ ಹೊಯ್ಸಳ’ ಮುಂತಾದ ಚಿತ್ರಗಳಲ್ಲಿ ಕೆಲಸ ಮಾಡಿದ್ದೆ. ಆ ಅನುಭವದಿಂದ ನಿರ್ದೇಶನ ಮಾಡಿರುವೆ. ಇದೊಂದು ಪ್ರೇಮಕಥೆ ಹೊಂದಿರುವ ಚಿತ್ರ. ಯಾರು ಯಾರನ್ನೂ ನಂಬಲು ಕಷ್ಟವಾಗುವಂಥ ಕಾಲಮಾನವಿದು. ಇಂಥ ಹೊತ್ತಿನಲ್ಲಿ ನಂಬಿಕೆಯೆಂಬ ಚುಂಬಕಶಕ್ತಿಯ ಸುತ್ತ ಹೆಣೆದ ಕಥೆಯಿದು’ ಎಂದರು ನಿರ್ದೇಶಕ.

ಮುಕುಂದ ರಾಮಸ್ವಾಮಿಗೆ ದಿಯಾ ಕೀರ್ತಿ ಜೋಡಿಯಾಗಿದ್ದಾರೆ. ರಾಜೇಶ್ ನಟರಂಗ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ‘ನಾನು ಜವಾಬ್ದಾರಿಯುತ ತಂದೆಯ ಪಾತ್ರದಲ್ಲಿ ನಟಿಸಿರುವೆ. ಪ್ರೀತಿಯೆಂಬುದು ಯಾವ ಕಾಲಕ್ಕೂ ಹಳತಾಗದ ವಿಚಾರ. ಇದರ ಸುತ್ತಲೇ ಸುತ್ತುವ ಕಥೆ. ನಿರ್ದೇಶಕರ ಕೆಲಸ ಬಹಳ ಅಚ್ಚುಕಟ್ಟಾಗಿದೆ. ಈ ತಂಡಕ್ಕೆ ಎಲ್ಲರ ಪ್ರೋತ್ಸಾಹವಿರಲಿ’ ಎಂದರು ರಾಜೇಶ್ ನಟರಂಗ.

ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಎನ್.ಆರ್. ಮಂಜುನಾಥ (ನೀಲೇರಿ) ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ‘ತಿಂಗಳ ಹಿಂದಷ್ಟೇ ಚಿತ್ರೀಕರಣ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಜೂನ್ ತಿಂಗಳಲ್ಲಿ ಚಿತ್ರ ಬಿಡುಗಡೆ ಆಲೋಚನೆಯಿದೆ. ಅದಕ್ಕೂ ಮೊದಲು ಟ್ರೇಲರ್ ಹಾಗೂ ಹಾಡುಗಳನ್ನು ಬಿಡುಗಡೆ ಮಾಡುತ್ತೇವೆ’ ಎಂದರು ನಿರ್ಮಾಪಕ.

ವೀರ್ ಸಮರ್ಥ್ ಸಂಗೀತ, ಅವಿನಾಶ ಶಾಸ್ತ್ರಿ ಛಾಯಾಚಿತ್ರಗ್ರಹಣ, ಮಧು ತುಂಬಕೆರೆ ಸಂಕಲನವಿದೆ. ಚಂದನಾ ಗೌಡ ಮತ್ತು ಶ್ವೇತಾ ಕೊಗ್ಗೂರು, ಮಂಡ್ಯ ರಮೇಶ್, ಸಂಗೀತಾ ಅನಿಲ್, ಜಯತೀರ್ಥ, ಚೇತನ್ ದುರ್ಗ, ಕಾಮಿಡಿ ಕಿಲಾಡಿ ಸದಾನಂದ, ಹುಲಿ ಕಾರ್ತಿಕ್, ಬೇಬಿ ರಿತು ಸಿಂಗ್ ಮುಂತಾದವರ ತಾರಾಗಣವಿದೆ.

‘ಸೆಪ್ಟೆಂಬರ್ 21’ ಶೀಘ್ರದಲ್ಲಿ ತೆರೆಗೆ



ಪ್ರಿಯಾಂಕಾ ಉಪೇಂದ್ರ

ಪ್ರಿಯಾಂಕಾ ಉಪೇಂದ್ರ ನಾಯಕಿಯಾಗಿ ನಟಿಸಿರುವ ‘ಸೆಪ್ಟೆಂಬರ್ 21’ ಚಿತ್ರ ಮೇ ತಿಂಗಳ ಅಂತ್ಯಕ್ಕೆ ತೆರೆಗೆ ಬರಲಿದೆ. ಕರೆನ್ ಕ್ರಿಷ್ಟಿ ಸುವರ್ಣ ನಿರ್ದೇಶನದ ಚಿತ್ರ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿ ಪ್ರಚಾರ ಕಾರ್ಯ ಪ್ರಾರಂಭಿಸಿದೆ.

ಈ ಚಿತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ಮೊದಲ ಬಾರಿಗೆ ಮಧ್ಯಮ ವರ್ಗದ ಮಹಿಳೆಯ ಪಾತ್ರ ಮಾಡಿದ್ದಾರೆ. ‘ಇತ್ತೀಚೆಗಷ್ಟೇ ಚಿತ್ರದ ಟೀಸರ್ ಬಿಡುಗಡೆಗೊಂಡಿದ್ದು ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಆಲ್ಝೈಮರ್ ಕಾಯಿಲೆಗೆ ತುತ್ತಾದ ರೋಗಿಗಳನ್ನು ಪಾಲನೆ ಮಾಡುವ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವೆ. ವೃತ್ತಿ ಜೀವನದಲ್ಲಿ ಬಹಳ ತೃಪ್ತಿ ನೀಡಿದ ಪಾತ್ರವಿದು. ಅತ್ಯಂತ ಸವಾಲಿನ ಪಾತ್ರ ಕೂಡ ಆಗಿತ್ತು. ಅದನ್ನು ಅಷ್ಟೇ ಸೊಗಸಾಗಿ ಯುವ ನಿರ್ದೇಶಕಿ ಕಟ್ಟಿಕೊಟ್ಟಿದ್ದಾರೆ. ಕೆಲ ಪ್ರಮುಖ ಚಿತ್ರೋತ್ಸವಗಳಲ್ಲಿಯೂ ಈ ಚಿತ್ರ ಪ್ರದರ್ಶನ ಕಂಡು ಮೆಚ್ಚುಗೆ ಗಳಿಸಿದೆ’ ಎಂದು ಪ್ರಿಯಾಂಕಾ ಉಪೇಂದ್ರ ಹೇಳಿದ್ದಾರೆ.

21ರ ಹರೆಯದ ಕರೆನ್ ಕ್ರಿಷ್ಟಿ ಅವರ ಚೊಚ್ಚಲ ನಿರ್ದೇಶನದ ಸಿನಿಮಾವಿದು. ಮುಖ್ಯ ಪಾತ್ರದಲ್ಲಿ ಪ್ರವೀಣ್ ಸಿಂಗ್ ಸಿಸೋಡಿಯಾ, ಝರಿನ ವಾಹಬ್, ಅಮಿತ್ ಬೇಲ್, ಅಜಿತ್ ಶಿದಾಯೆ, ಸಚಿನ್ ಪಾಟೇಕರ್ ನಟಿಸಿದ್ದಾರೆ.

‘ರೋಗಿಗಿಂತ ಅವನ ಪಾಲನೆ ಮಾಡುವವರು ತೆಗೆದುಕೊಳ್ಳುವ ನಿರ್ಧಾರ ತುಂಬಾ ಮುಖ್ಯ’ ಎಂಬುದು ಚಿತ್ರದ ಅಡಿಬರಹವಾಗಿದೆ.

ರಾಜಶೇಖರ್ ಕಥೆ, ವಿನಯ್ ಚಂದ್ರ ಸಂಗೀತವಿದ್ದು, ಅನಿಲ್ ಕುಮಾರ್ ಛಾಯಾಚಿತ್ರಗ್ರಹಣವಿದೆ.

ತೆರೆಗೆ ಬರಲು ಸಜ್ಜಾದ ‘ರುದ್ರಾಭಿಷೇಕಂ’



ವಿಜಯ ರಾಘವೇಂದ್ರ
ಪ್ರಿಯಾಂಕಾ ತಿಮ್ಮೇಶ್

ವಿಜಯ ರಾಘವೇಂದ್ರ, ಪ್ರಿಯಾಂಕಾ ತಿಮ್ಮೇಶ್ ಜೋಡಿಯಾಗಿ ನಟಿಸಿರುವ ‘ರುದ್ರಾಭಿಷೇಕಂ’ ಚಿತ್ರ ಮೇನಲ್ಲಿ ತೆರೆಗೆ ಬರಲಿದೆ. ಕರ್ನಾಟಕದ ಸಾಂಸ್ಕೃತಿಕ ಪರಂಪರೆಗಳಲ್ಲಿ ಒಂದಾದ ವೀರಗಾಸೆ ಕಲೆ ಹಾಗೂ ವೀರಭದ್ರ ದೇವರ ಇತಿಹಾಸವನ್ನು ತೆರೆದಿಡುವ ಚಿತ್ರಕ್ಕೆ ವಸಂತ್‌ಕುಮಾರ್ ನಿರ್ದೇಶನವಿದೆ.

‘ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡು ಸೆನ್ಸಾರ್ ಹಂತದಲ್ಲಿದೆ. ಸದ್ಯದಲ್ಲಿಯೇ ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡುತ್ತೇವೆ. ಎಲ್ಲವೂ ಅಂದುಕೊಂಡಂತೆ ಆದರೆ ಮೇ ತಿಂಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ’ ಎಂದು ನಿರ್ದೇಶಕರು ತಿಳಿಸಿದ್ದಾರೆ.

ವೀರಗಾಸೆ ಕುಟುಂಬವೊಂದರ ಹಿನ್ನೆಲೆ ಇಟ್ಟುಕೊಂಡು ಆ ಕಲೆಯ ಮೂಲ, ಇತಿಹಾಸವನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಇದೇ ಮೊದಲ ಬಾರಿಗೆ ವಿಜಯ ರಾಘವೇಂದ್ರ ತಂದೆ, ಮಗನಾಗಿ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂದಿದೆ ಚಿತ್ರತಂಡ.

ಮಂಜುನಾಥ ಕೆ.ಎನ್ ಹಾಗೂ ಅವರ ಗೆಳೆಯರು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ದೇವನಹಳ್ಳಿ ಸುತ್ತಮುತ್ತ ಹಾಗೂ ಕರಾವಳಿಯ ಗೋಕರ್ಣ, ಹೊನ್ನಾವರ, ಕುಮಟಾ ಮೊದಲಾದೆಡೆ ಚಿತ್ರೀಕರಣ ನಡೆಸಲಾಗಿದೆ.

ಬಲ ರಾಜವಾಡಿ, ವಿ.ಮನೋಹರ್, ಮನು, ಸನತ್, ಬುಲೆಟ್ ವಿನು, ಮಮತಾ ತುರುವೆಕೆರೆ, ನವನಿತಾ ಶೆಟ್ಟಿ, ಮಂಜುಳಾ ಹಾಗೂ ಇತರರು ಪ್ರಮುಖ ಪಾತ್ರಗಳಲ್ಲಿದ್ದಾರೆ. ವಿ.ಮನೋಹರ್ ಸಂಗೀತ, ಮುತ್ತುರಾಜ್ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

‘ಐ ಆ್ಯಮ್ ಗೇಮ್’ ಚಿತ್ರೀಕರಣ ಪೂರ್ಣ



ದುಲ್ಕರ್ ಸಲ್ಮಾನ್

ದುಲ್ಕರ್ ಸಲ್ಮಾನ್ ನಟನೆಯ ‘ಐ ಆ್ಯಮ್ ಗೇಮ್’ ಮಲಯಾಳ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ. ನಹಾಸ್ ಹಿದಾಯತ್ ನಿರ್ದೇಶನದ ಸಿನಿಮಾ ಆ.20ರಂದು ತೆರೆ ಕಾಣುವ ನಿರೀಕ್ಷೆಯಿದೆ.

‘ಕಿಂಗ್ ಆಫ್ ಕೋಥಾ’ ಸೋಲಿನ ಬಳಿಕ ದುಲ್ಕರ್ ಮಲಯಾಳ ಚಿತ್ರರಂಗದಿಂದ ದೂರ ಉಳಿದು, ಬೇರೆ ಭಾಷೆಗಳಲ್ಲಿ ಹೆಚ್ಚು ಸಕ್ರಿಯರಾಗಿದ್ದರು. ‘ಸೀತಾ ರಾಮಂ’, ‘ಲಕ್ಕಿ ಭಾಸ್ಕರ’ ಯಶಸ್ಸಿನ ಬಳಿಕ ತೆಲುಗಿನಲ್ಲಿ ಅವರಿಗೆ ಬೇಡಿಕೆ ಹೆಚ್ಚಾಗಿದೆ. ತಮಿಳಿನ ‘ಕಾಂತಾ’ ಚಿತ್ರವೂ ಹೆಚ್ಚು ಯಶಸ್ಸು ನೀಡಲಿಲ್ಲ. ಬಳಿಕ ಮಲಯಾಳದಲ್ಲಿ ‘ಲೋಕಾ ಚಾಪ್ಟರ್–1’ ಚಿತ್ರ ನಿರ್ಮಾಣ ಮಾಡಿ ವ್ಯಾಪಕ ಯಶಸ್ಸು ಕಂಡರು. ಇದೀಗ ಮತ್ತೆ ಮಲಯಾಳ ಚಿತ್ರೋದ್ಯಮಕ್ಕೆ ಮರಳಿದ್ದು, ಆ್ಯಕ್ಷನ್, ಕ್ರೀಡಾ ಕಥೆಯನ್ನು ಹೊಂದಿರುವ ‘ಐ ಆ್ಯಮ್ ಗೇಮ್’ ಚಿತ್ರ ನಿರೀಕ್ಷೆ ಹೆಚ್ಚಿಸಿದೆ.

ಹಿದಾಯತ್ ‘ಆರ್‌ಡಿಎಕ್ಸ್’ ಚಿತ್ರದ ಯಶಸ್ಸಿನ ಬಳಿಕ ಕೈಗೆತ್ತಿಕೊಂಡಿರುವ ಚಿತ್ರವಿದು. ದುಲ್ಕರ್ ಮಾಸ್, ಆ್ಯಕ್ಷನ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ ಎಂಬುದು ಚಿತ್ರದ ಪೋಸ್ಟರ್‌ಗಳಿಂದ ಗೊತ್ತಾಗುತ್ತಿದೆ. ಆ್ಯಂಟೋನಿ ವರ್ಗೀಸ್, ಸಂಯುಕ್ತ ವಿಶ್ವನಾಥನ್ ಮುಂತಾದವರು ಪ್ರಮುಖ ಪಾತ್ರದಲ್ಲಿದ್ದಾರೆ.

ಮಾರ್ಗೋಸ ಮಹಲ್ ಹಿಂದೆ ಗಿರಿರಾಜ್



ದೀಪಿಕಾ ದಾಸ್



ಬಿ.ಎಂ.ಗಿರಿರಾಜ್

ನಿರ್ದೇಶಕ ಬಿ.ಎಂ.ಗಿರಿರಾಜ್ ಅವರ ‘ರಾಮರಸ’ ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಅದರ ಬೆನ್ನಲ್ಲೇ ‘ಮಾರ್ಗೋಸ ಮಹಲ್’ ಎಂಬ ಥ್ರಿಲರ್ ಜಾನರ್ ಸಿನಿಮಾಕ್ಕೆ ಅವರು ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ರಾಮರಸ’ ಅಂತಿಮ ಹಂತದಲ್ಲಿದ್ದು ಗ್ರಾಫಿಕ್ಸ್ ಕೆಲಸ ನಡೆಯುತ್ತಿದೆ. ಅದರ ಬಳಿಕ ಶುರು ಮಾಡಿದ ಸಿನಿಮಾ ‘ಮಾರ್ಗೋಸ ಮಹಲ್’. ನಮ್ಮ ನಾಟಕ ತಂಡದವರೇ ಸೇರಿದ ಮಾಡಿದ ಸಿನಿಮಾವಿದು. ಕನ್ನಡದವರೇ ಆಗಿ ಸದ್ಯ ತೆಲುಗು ಚಿತ್ರೋದ್ಯಮದಲ್ಲಿ ಸಕ್ರಿಯರಾಗಿರುವ ಧನ್ಯಾ ಬಾಲಕೃಷ್ಣ ಪ್ರಮುಖ ಪಾತ್ರದಲ್ಲಿದ್ದಾರೆ. ಥ್ರಿಲ್ಲರ್ ಜಾನರ್‌ನ ಸಿನಿಮಾ. ಮಾಮೂಲಿ ನಾಯಕ–ನಾಯಕಿ ಕಥೆಯಲ್ಲ. ಕೌಂಡಿನ್ಯ, ಸ್ಟೀಫನ್ ಕಿಂಗ್ ಅವರ ಕಾದಂಬರಿಗಳ ರೀತಿ ಸಿನಿಮಾ. ಪತ್ತೆದಾರಿ ಕಾದಂಬರಿ ಓದಿದ ಅನುಭವ ನೀಡುವ ಕಥೆ’ ಎಂದರು ಗಿರಿರಾಜ್.

ಸಾಮ್ರಾಟ್ ಮತ್ತು ಶೈಲೇಂದ್ರ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಶೈಲೇಂದ್ರ ಪ್ರೊಡಕ್ಷನ್ ಬಂಡವಾಳ ಹೂಡಿದ್ದು, ರಂಗು ಸಮರ್ಪಣ ಛಾಯಾಚಿತ್ರಗ್ರಹಣ, ಭರತ್ ಬಿ.ಜೆ ಸಂಗೀತ, ಅರ್ಜುನ್ ಕಿಟ್ಟು ಸಂಕಲನವಿದೆ.

‘ಈಗ ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಚಿತ್ರದ ಆ್ಯಕ್ಷನ್ ಸನ್ನಿವೇಶಗಳ ಚಿತ್ರೀಕರಣ ಬಾಕಿ ಉಳಿಸಿಕೊಂಡಿದ್ದೇವೆ. ಪೋಸ್ಟ್ ಪ್ರೊಡಕ್ಷನ್ ಮುಗಿದ ಬಳಿಕ ಎರಡು ದಿನಗಳ ಚಿತ್ರೀಕರಣ ಮಾಡುತ್ತೇವೆ. ಈ ವರ್ಷವೇ ಸಿನಿಮಾ ತೆರೆಗೆ ಬರುವ ಆಲೋಚನೆಯಿದೆ’ ಎಂದು ಅವರು ಮಾಹಿತಿ ನೀಡಿದರು.

ಈ ವಾರ ಮೂರು ಚಿತ್ರಗಳು ತೆರೆಗೆ



ಭೂಮಿ ಶೆಟ್ಟಿ

ಕೆಂಡದ ಸೆರಗು

‘ಬಿಗ್‌ಬಾಸ್’ ಖ್ಯಾತಿಯ ಭೂಮಿ ಶೆಟ್ಟಿ ನಟಿಸಿರುವ ಕಾದಂಬರಿ ಆಧಾರಿತ ಸಿನಿಮಾವಿದು. ಭೂಮಿ ಕುಸ್ತಿಪಟು ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಾಕಿ ಸೋಮ್ಲಿ ನಿರ್ದೇಶನವಿದೆ. ಮಾಲಾಶ್ರೀ ಪೊಲೀಸ್ ಅಧಿಕಾರಿ ಪಾತ್ರದಲ್ಲಿದ್ದಾರೆ. ‘ಸಾಮಾಜಿಕ ಸಂದೇಶ ಹೊಂದಿರುವ ಕ್ರೈಂ ಜಾನರ್ ಚಿತ್ರ. ಮಹಿಳೆಯ ಆತ್ಮಗೌರವ ಮತ್ತು ಹೋರಾಟದ ಕಥೆಯ ಜೊತೆಗೆ ಇಂದಿನ ಸಮಾಜದಲ್ಲಿ ಯುವತಿಯರಿಗೆ ಆಗುತ್ತಿರುವ ಮೋಸ ಮತ್ತು ಅಪಾಯಗಳನ್ನು ತೋರಿಸಲಾಗಿದೆ’ ಎಂದಿದೆ ಚಿತ್ರತಂಡ.

ಶ್ರೀ ಮುತ್ತು ಟಾಕೀಸ್ ಬ್ಯಾನರ್‌ನಲ್ಲಿ ಕೊಟ್ರೇಶ್ ಗೌಡ ನಿರ್ಮಿಸಿರುವ ಈ ಚಿತ್ರದಲ್ಲಿ ಶೋಭಿತ, ಪ್ರತಿಮಾ ಠಾಕೂರ್, ಮೋಹನ್ ಕುಮಾರ್, ವರ್ಧನ್, ಯಶ್ ಶೆಟ್ಟಿ, ಸಿಂಧು ಲೋಕನಾಥ್, ಹರೀಶ್ ಅರಸು ಮುಂತಾದವರು ನಟಿಸಿದ್ದಾರೆ. ಚಿತ್ರಕ್ಕೆ ವಿಪಿನ್ ಛಾಯಾಚಿತ್ರಗ್ರಹಣ, ವೀರೇಶ್ ಕಂಬಳಿ ಸಂಗೀತ ನಿರ್ದೇಶನವಿದೆ.

ಬೆಂಗಳೂರು ಇನ್



ಧರ್ಮ ಕೀರ್ತಿರಾಜ್

ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸಿರುವ ಚಿತ್ರವಿದು. ಮರ್ಡರ್ ಮಿಸ್ಟರಿ, ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಚಿತ್ರಕ್ಕೆ ಕಾರ್ತಿಕ್ ಕೆ. ಮೂರ್ತಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ರಿಷಾ ಗೌಡ ಮತ್ತು ಅನುಷಾ ರೈ ನಾಯಕಿಯರು. ಶಶಿಕುಮಾರ್ ಚಿತ್ರದಲ್ಲಿ ಸಹಾಯಕ ಪೊಲೀಸ್ ಆಯುಕ್ತರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

‘ಈ ಸಿನಿಮಾದಲ್ಲಿ ಪೋಷಕರಿಗೆ ಒಂದು ಸಂದೇಶವಿದೆ. ಜತೆಗೆ ಕಮರ್ಷಿಯಲ್ ಅಂಶಗಳಿವೆ. ಸಸ್ಪೆನ್ಸ್, ಥ್ರಿಲ್ಲರ್‌ನೊಂದಿಗೆ ಮನರಂಜನೆಯನ್ನು ಹೊಂದಿರುವ ಚಿತ್ರ’ ಎಂದಿದ್ದಾರೆ ನಿರ್ದೇಶಕ. ವೆಂಕಟೇಶಮೂರ್ತಿ ಬಂಡವಾಳ ಹೂಡಿದ್ದಾರೆ. ಬಲ ರಾಜವಾಡಿ ಮತ್ತೊಂದು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಚಿತ್ರಕ್ಕೆ ನವೀನ್ ಪಂಚಾಕ್ಷರಿ ಛಾಯಾಚಿತ್ರಗ್ರಹಣ, ಆಸಿಫ್ ಎ. ಖಾದರ್, ಅರವಿಂದ್ ಮುರಳಿ ಸಂಗೀತ, ಕುಮಾರ್ ಸಿ.ಕೆ ಸಂಕಲನವಿದೆ.

ಇದರೊಂದಿಗೆ ಹೊಸಬರ ‘ಊರಬ್ಬ’ ಚಿತ್ರ ಕೂಡ ಇಂದೇ ತೆರೆ ಕಾಣುತ್ತಿದೆ.

ಬರಲಿದೆ ‘ಅಮೆರಿಕಾ! ಅಮೆರಿಕಾ!!–2’



ನಾಗತಿಹಳ್ಳಿ ಚಂದ್ರಶೇಖರ

ನಾಗತಿಹಳ್ಳಿ ಚಂದ್ರಶೇಖರ ನಿರ್ದೇಶನದ ‘ಅಮೆರಿಕಾ! ಅಮೆರಿಕಾ!!’ ಚಿತ್ರ ಬಿಡುಗಡೆಗೊಂಡು 29 ವರ್ಷಗಳು ಕಳೆದಿವೆ. ರಮೇಶ್ ಅರವಿಂದ್, ಹೇಮಾ ಪಂಚಮುಖಿ, ಅಕ್ಷಯ್ ಆನಂದ್ ನಟನೆಯ ಚಿತ್ರ ಆ ಕಾಲಕ್ಕೆ ಮೋಡಿ ಮಾಡಿತ್ತು. ಇದೀಗ ಚಿತ್ರದ ಮುಂದುವರಿದ ಭಾಗವನ್ನು ನಾಗತಿಹಳ್ಳಿ ಘೋಷಿಸಿದ್ದಾರೆ.

‘ಸಹನಾ ವಿಜಯಕುಮಾರ್ ಅವರ ‘ಕ್ಷಮೆ’ ಕಾದಂಬರಿ ಆಧಾರಿತ ಚಿತ್ರ. ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ನಿರೂಪ್ ಭಂಡಾರಿ, ಪೃಥ್ವಿ ಅಂಬಾರ್, ಸಾನ್ವಿ ಶ್ರೀವಾಸ್ತವ್, ಅಚ್ಯುತ್ ಕುಮಾರ್, ಮಂಡ್ಯ ರಮೇಶ್, ಮಾನಸಿ ಸುಧೀರ್ ಸೇರಿದಂತೆ ಅಮೆರಿಕದ ಕೆಲ ಕಲಾವಿದರೂ ನಟಿಸಿದ್ದಾರೆ. ಅಮೆರಿಕದ ಸಿಯಾಟಲ್ ನಗರದಲ್ಲಿ ಎಪ್ಪತ್ತೈದು ಭಾಗ ಚಿತ್ರೀಕರಣಗೊಂಡಿದೆ. ಹಂಗೇರಿಯ ಬುಡಾಪೆಸ್ಟ್‌ನಲ್ಲಿ ಸಿಂಫೋನಿ ಸಂಗೀತವನ್ನು ವಿಶೇಷವಾಗಿ ಧ್ವನಿಮುದ್ರಿಸಲಾಗಿದೆ’ ಎಂದು ಚಿತ್ರ ಕುರಿತು ನಾಗತಿಹಳ್ಳಿ ಮಾಹಿತಿ ನೀಡಿದ್ದಾರೆ.

‘ಮೊದಲ ಚಿತ್ರ ನಾನು ರೂಪಿಸಿದ್ದಲ್ಲ; ನನ್ನನ್ನೇ ರೂಪಿಸಿದ ಸಿನಿಮಾ! ಕೋಟಿ ಕೋಟಿ ಕಂಗಳಿಗೆ ಕನಸು ಕೊಟ್ಟ ಸಿನಿಮಾ. ಕೋಟಿ ಕೋಟಿ ಮನಗಳಿಗೆ ಮಮಕಾರವಿತ್ತ ಸಿನಿಮಾ. ಕನ್ನಡ ಜನತೆಗೆ ಕೋಟಿ ಕೋಟಿ ಕೃತಜ್ಞತೆಗಳು. ಸದ್ಯದಲ್ಲೇ ನಿಮ್ಮೆದುರು ‘ಅಮೆರಿಕಾ! ಅಮೆರಿಕ!!–2 ಬರಲಿದೆ’ ಎಂದು ಅವರು ಹೇಳಿದ್ದಾರೆ.

ಚಿತ್ರಕ್ಕೆ ಮನೋಮೂರ್ತಿ ಸಂಗೀತವಿದೆ. ಮೊದಲ ಭಾಗಕ್ಕೂ ಅವರದ್ದೇ ಸಂಗೀತವಿದ್ದು, ಹಾಡುಗಳು ಮೋಡಿ ಮಾಡಿದ್ದವು. ಎಸ್.ಕೆ.ರಾವ್ ಛಾಯಾಚಿತ್ರಗ್ರಹಣ, ಶ್ರೀ ಕ್ರೇಜಿ ಮೈಂಡ್ ಸಂಕಲನವಿದೆ.

ಸದ್ಯ ಟೆಂಟ್ ಸಿನಿಮಾ ಮೂಲಕ ಸಿನಿಮಾ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿರುವ ನಾಗತಿಹಳ್ಳಿ ನಿರ್ದೇಶನ ಕಡಿಮೆ ಮಾಡಿದ್ದಾರೆ. 2020ರಲ್ಲಿ ತೆರೆಕಂಡ ‘ಇಂಡಿಯಾ vs ಇಂಗ್ಲೆಂಡ್’ ಅವರ ಹಿಂದಿನ ಸಿನಿಮಾ.

‘ಜಿನುಗೋ ಮಳೆ’ ಎಂದ ಧನುಷ್ ಗೌಡ



ಧನುಷ್ ಗೌಡ
ಸ್ಪಂದನಾ ಸೋಮಣ್ಣ

ಬಿಗ್‌ಬಾಸ್ ಖ್ಯಾತಿಯ ಧನುಷ್ ಗೌಡ ಹಾಗೂ ಸ್ಪಂದನಾ ಸೋಮಣ್ಣ ಅಭಿನಯದ ‘ಜಿನುಗೋ ಮಳೆ’ ಎಂಬ ಆಲ್ಬಂ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಆಕಾಶ್ ನಿರ್ಮಾಣ ಹಾಗೂ ನಿರ್ದೇಶನ ಮಾಡಿರುವ ಹಾಡು ಪಿಆರ್‌ಕೆ ಯೂಟ್ಯೂಬ್ ಚಾನೆಲ್‌ನಲ್ಲಿ ಲಭ್ಯವಿದೆ.

‘ಮೂಡಿಗೆರೆಯಲ್ಲಿ ಮೂರು ದಿನಗಳ ಕಾಲ ಈ ಹಾಡನ್ನು ಚಿತ್ರೀಕರಣ ಮಾಡಿದ್ದೇವೆ. ಇದೊಂದು ರೊಮ್ಯಾಂಟಿಕ್ ಹಾಡು’ ಎಂದರು ಧನುಷ್.

‘ನಾನು ಉಪೇಂದ್ರ ಜತೆ ಕೆಲಸ ಮಾಡಿದ್ದೇನೆ. ಈ ಕಥೆ ಇಟ್ಟುಕೊಂಡು ಕಿರುಚಿತ್ರ ಮಾಡೋಣ ಎಂದುಕೊಂಡಿದ್ದೆವು. ಆದರೆ ಆಲ್ಬಂ ಹಾಡು ಮಾಡಿದರೆ ಸೂಕ್ತ ಎನ್ನಿಸಿತು. ಅವಿನಾಶ್ ಸಂಗೀತ ನಿರ್ದೇಶನ, ನಾಗಾರ್ಜುನ ಶರ್ಮಾ ಸಾಹಿತ್ಯವಿದೆ’ ಎಂದರು ನಿರ್ದೇಶಕ.

ಪ್ರಜಾವಾಣಿ


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ





ಹಸ್ತಾಕ್ಷರ

ಪಶ್ಚಿಮ ಬಂಗಾಳದ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದ ನಟ ಮಿಥುನ್ ಚಕ್ರವರ್ತಿ ಅಭಿಮಾನಿಗಳಿಗೆ ಹಸ್ತಾಕ್ಷರ ನೀಡಿದರು



ಗುಲಾಬಿ ಮಾರ್ಗ: ಮೆಟ್ರೊ ಇನ್ನಷ್ಟು ವಿಳಂಬ

ಎತ್ತರಿಸಿದ ಮಾರ್ಗದಲ್ಲಿ ಇನ್ನೂ ಆರಂಭವಾಗದ ಪರೀಕ್ಷೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ಗುಲಾಬಿ ಮಾರ್ಗದಲ್ಲಿ ಪರೀಕ್ಷಾ ಸಂಚಾರ ಇನ್ನೂ ಆರಂಭವಾಗಿಲ್ಲ. ಹಾಗಾಗಿ ಮೇ ತಿಂಗಳಲ್ಲಿ ಭಾಗಶಃ ಮೆಟ್ರೊ ಸಂಚಾರ ಆರಂಭಿಸುವ ಬಿಎಂಆರ್‌ಸಿಎಲ್ ಗುರಿ ಈಡೇರುವುದು ಅನುಮಾನವಾಗಿದೆ.


ಕಾಳೇನ ಅಗ್ರಹಾರ-ನಾಗವಾರ ನಡುವಿನ ಗುಲಾಬಿ ಮಾರ್ಗವು ಒಟ್ಟು 21.26 ಕಿ.ಮೀ. ಉದ್ದ ಹೊಂದಿದೆ. ಅದರಲ್ಲಿ 13.76 ಕಿ.ಮೀ. ಸುರಂಗ ಮಾರ್ಗವಾಗಿದ್ದು, ಇದರ ಕಾಮಗಾರಿ ಮುಕ್ತಾಯಗೊಳ್ಳಲು ಇನ್ನೂ ಏಳೆಂಟು ತಿಂಗಳು ಬೇಕಾಗಿದೆ. ಎತ್ತರಿಸಿದ ಮಾರ್ಗ 7.5 ಕಿ.ಮೀ. ಇದ್ದು, ಹಳಿ ಅಳವಡಿಕೆ, ನಿಲ್ದಾಣ ನಿರ್ಮಾಣ ಸಹಿತ ಎಲ್ಲ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ.

ಎತ್ತರಿಸಿದ ಮಾರ್ಗದಲ್ಲಿ ಮೇಯಿಂದ ಹಾಗೂ ಸುರಂಗ ಮಾರ್ಗದಲ್ಲಿ ಈ ವರ್ಷದ ಡಿಸೆಂಬರ್‌ನಿಂದ ಮೆಟ್ರೊ ಸಂಚರಿಸಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದರು. ಅಲ್ಲದೇ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿ.ಕೆ. ಶಿವಕುಮಾರ್ ಕೂಡ ಈ ಬಗ್ಗೆ ತಮ್ಮ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದರು.

ಮುಖ್ಯಾಂಶಗಳು

- ಗುಲಾಬಿ ಮಾರ್ಗವು ಒಟ್ಟು 21.26 ಕಿ.ಮೀ. ಉದ್ದ ಹೊಂದಿದೆ
- ಕಾಳೇನ ಅಗ್ರಹಾರ–ನಾಗವಾರ ನಡುವೆ ಸಂಪರ್ಕ
- ಎತ್ತರಿಸಿದ ಮಾರ್ಗದ ಕಾಮಗಾರಿ ಬಹುತೇಕ ಪೂರ್ಣ

ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ ಎತ್ತರಿಸಿದ ಮಾರ್ಗದಲ್ಲಿ ಚಾಲಕರಹಿತ ಎಂಜಿನ್ ಹೊಂದಿರುವ ಪ್ರೊಟೋಟೈಪ್ (ಮೂಲ ಮಾದರಿ) ರೈಲಿನಲ್ಲಿ ರೋಲಿಂಗ್ ಸ್ಟಾಕ್ (ರೈಲು) ತಜ್ಞರು, ಹಳಿ ತಂತ್ರಜ್ಞರು, ಬ್ರೇಕ್ ತಂತ್ರಜ್ಞರು ಸೇರಿದಂತೆ ವಿವಿಧ ವಿಭಾಗದ ತಂತ್ರಜ್ಞರಿಂದ ಪರೀಕ್ಷೆಗಳು ನಡೆಯಬೇಕಿವೆ. ರೈಲ್ವೆ ಸಚಿವಾಲಯದ ಅಡಿಯಲ್ಲಿರುವ ಸಂಶೋಧನಾ



ನಮ್ಮ ಮೆಟ್ರೊ ಗುಲಾಬಿ ಮಾರ್ಗ

ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (ಆರ್‌ಡಿಎಸ್‌ಒ) ಪರೀಕ್ಷೆ ನಡೆಸಬೇಕು ಎಂದು ಬಿಎಂಆರ್‌ಸಿಎಲ್‌ನಿಂದ ಆರ್‌ಡಿಎಸ್‌ಒಗೆ ಪತ್ರ ಬರೆದಿದ್ದರೂ ಅಲ್ಲಿಂದ ಪ್ರತಿಕ್ರಿಯೆ ಬಂದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ವಿವಿಧ ಪ್ರಾಯೋಗಿಕ ಪರೀಕ್ಷೆ


ಗುಲಾಬಿ ಮಾರ್ಗದ ಮೆಟ್ರೊ

ಗಳನ್ನು ನಡೆಸಲು 45 ದಿನಗಳು ಬೇಕು. ಪರೀಕ್ಷೆ ನಡೆಸಿ ಆರ್‌ಡಿಎಸ್‌ಒ ವರದಿ ನೀಡಿದ ಬಳಿಕ ಇಂಡಿಪೆಂಡೆಂಟ್ ಸೇಫ್ಟಿ ಅಸೆಸರ್ (ಐಎಸ್‌ಎ) ಎಲ್ಲ ದಾಖಲೆ, ಅಂಕಿಅಂಶಗಳನ್ನು ಪರಿಶೀಲಿಸಿ ಪ್ರಮಾಣಪತ್ರ ನೀಡುತ್ತಾರೆ. ಅದನ್ನು ರೈಲ್ವೆಯ ಮೆಟ್ರೊ ರೈಲು ಸುರಕ್ಷತಾ ಆಯೋಗಕ್ಕೆ (ಸಿಎಂಎಸ್‌ಆರ್) ಸಲ್ಲಿಸಲಾಗುತ್ತದೆ. ಸಿಎಂಎಸ್‌ಆರ್ ಆಯುಕ್ತರು ಬಂದು ಅಂತಿಮ ಪರಿಶೀಲನೆ ನಡೆಸುತ್ತಾರೆ. ಅವರು ಸಂಚಾರಕ್ಕೆ ಒಪ್ಪಿಗೆ ನೀಡಿದರೆ ರಾಜ್ಯ ಮತ್ತು ಕೇಂದ್ರ ಸರ್ಕಾರ ನಿಗದಿಪಡಿಸಿದ ದಿನ ಸಂಚಾರ ಆರಂಭವಾಗುತ್ತದೆ. ಈ ಎಲ್ಲ ಪ್ರಕ್ರಿಯೆ ಮುಗಿಯಲು ಕನಿಷ್ಠ ಮೂರು ತಿಂಗಳು ಬೇಕು ಎಂದು ಮಾಹಿತಿ ನೀಡಿದ್ದಾರೆ.

ನಾಲ್ಕು ಕೋಚ್: ಗುಲಾಬಿ ಮಾರ್ಗಕ್ಕೆ ನಾಲ್ಕು ಕೋಚ್‌ಗಳು (ರೈಲು) ಬೆಮೆಲ್‌ನಿಂದ ಪೂರೈಕೆಯಾಗಿವೆ. ಇನ್ನೆರಡು ತಿಂಗಳಲ್ಲಿ ಮತ್ತೆ ಎರಡು ಕೋಚ್‌ಗಳು ಬರಲಿವೆ. ಸಂಚಾರ ಆರಂಭಗೊಂಡರೆ ದಟ್ಟಣೆ ಅವಧಿಯಲ್ಲಿ 5 ನಿಮಿಷ-10 ನಿಮಿಷಕ್ಕೊಂದು, ದಟ್ಟಣೆ ಇಲ್ಲದ ಅವಧಿಯಲ್ಲಿ 15 ನಿಮಿಷಕ್ಕೊಂದು ರೈಲು ಓಡಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಲಾಬಿ ಮಾರ್ಗದಲ್ಲಿ ತಾವರೆಕೆರೆವರೆಗೆ ಅಷ್ಟೇ ಅಲ್ಲದೆ ನಾಗವಾರದ ವರೆಗೂ ರೈಲು ಸಂಚಾರ ಆರಂಭವಾದರೆ ಬನ್ನೇರುಘಟ್ಟ ರಸ್ತೆ, ಡೇರಿ ಸರ್ಕಲ್ ಸಹಿತ ಸುತ್ತಮುತ್ತ ವಾಹನ ದಟ್ಟಣೆ ಕಡಿಮೆಯಾಗಲಿದೆ. ಜನರಿಗೂ ಅನುಕೂಲವಾಗಲಿದೆ. ಈಗಾಗಲೇ ವಿಳಂಬ ಆಗಿದ್ದು, ನಮ್ಮ ಮೆಟ್ರೊ ಅಧಿಕಾರಿಗಳು ನೆಪ ಹೇಳಿಕೊಂಡು ಇನ್ನಷ್ಟು ವಿಳಂಬ ಮಾಡದೇ ಕೂಡಲೇ ಮೆಟ್ರೊ ಸಂಚಾರ ಆರಂಭಿಸಬೇಕು ಎಂದು ಡೇರಿ ಸರ್ಕಲ್‌ನ ಕಾರ್ತಿಕ್‌ಪ್ರಭು ಒತ್ತಾಯಿಸಿದರು.

ಆರು ಎತ್ತರಿಸಿದ ನಿಲ್ದಾಣಗಳು

ಗುಲಾಬಿ ಮಾರ್ಗದಲ್ಲಿ ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆ.ಪಿ. ನಗರ ನಾಲ್ಕನೇ ಹಂತ, ಜಯದೇವ ಆಸ್ಪತ್ರೆ, ಸ್ವಾಗತ್ ರೋಡ್ ಕ್ರಾಸ್ (ತಾವರೆಕೆರೆ) ನಿಲ್ದಾಣಗಳಿವೆ. ಮೈಸೂರು ಲೈಟ್ ಅಂಡ್ ಇಂಟೀರಿಯರ್ಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯು ಹುಳಿಮಾವು, ಐಐಎಂಬಿ, ಜೆ.ಪಿ ನಗರ 4ನೇ ಹಂತ ಮತ್ತು ತಾವರೆಕೆರೆ ನಿಲ್ದಾಣ ನಿರ್ಮಿಸುತ್ತಿದೆ. ಕಾಳೇನ ಅಗ್ರಹಾರದ ಕೆಲಸವನ್ನು ಎಎನ್‌ಯು ಕನ್ಸ್ಟ್ರಕ್ಷನ್ಸ್ ಮಾಡುತ್ತಿದೆ. ಜಯದೇವ ಆಸ್ಪತ್ರೆ ನಿಲ್ದಾಣವನ್ನು ಹಳದಿ ಮಾರ್ಗ ಕಾಮಗಾರಿಯ ಸಂದರ್ಭದಲ್ಲಿಯೇ ನಿರ್ಮಿಸಲಾಗಿತ್ತು.

ಆನ್‌ಲೈನ್‌ನಲ್ಲಿ ತಿದ್ದುಪಡಿ ಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಆಸ್ತಿ ಮಾಲೀಕರಿಗೆ ಆನ್‌ಲೈನ್‌ನಲ್ಲಿ ಇ-ಖಾತಾ ತಿದ್ದುಪಡಿ ಮಾಡಿಕೊಳ್ಳುವ ಅವಕಾಶವನ್ನು ಶೀಘ್ರದಲ್ಲೇ ಪರಿಚಯಿಸಲಾಗುವುದು ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

'ನಾಗರಿಕರು ತಮ್ಮ ಇ-ಖಾತಾ ವಿವರಗಳಲ್ಲಿರುವ ದೋಷಗಳನ್ನು ಯಾವುದೇ ವಿಳಂಬವಿಲ್ಲದೆ ಸುಲಭವಾಗಿ ತಿದ್ದಿಕೊಳ್ಳಬಹುದು. ಇದರಿಂದ ವ್ಯವಸ್ಥೆ ಹೆಚ್ಚು ಪರಿಣಾಮಕಾರಿ, ಪಾರದರ್ಶಕ ಮತ್ತು ಬಳಕೆದಾರ ಸ್ನೇಹಿಯಾಗಿ ರೂಪುಗೊಳ್ಳಲಿದೆ. ಮಾಲೀಕರ ಹೆಸರು ಮತ್ತು ಆಸ್ತಿಯ ಅಳತೆ ಹೊರತುಪಡಿಸಿ, ಸ್ಥಳ, ವಾರ್ಡ್ ಸಂಖ್ಯೆ ಸೇರಿದಂತೆ ಇತರ ವಿವರಗಳನ್ನು ನಾಗರಿಕರು ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

ಸುಮಾರು 25 ಲಕ್ಷ ಡ್ರಾಫ್ಟ್ ಖಾತಾ ಅರ್ಜಿಗಳು ಆನ್‌ಲೈನ್‌ನಲ್ಲಿದ್ದು, 10 ಲಕ್ಷಕ್ಕೂ ಹೆಚ್ಚು ನಾಗರಿಕರಿಗೆ ಈಗಾಗಲೇ ಅಂತಿಮ ಇ-ಖಾತಾ ನೀಡಲಾಗಿದೆ. ಎಲ್ಲಾ ದಾಖಲೆಗಳು ಸರಿಯಾಗಿದ್ದಲ್ಲಿ ಸರಾಸರಿ ಐದು ದಿನಗಳೊಳಗೆ ಅಂತಿಮ ಇ-ಖಾತಾ ನೀಡಲಾಗುತ್ತಿದೆ. ಡ್ರಾಫ್ಟ್ ಖಾತೆಯಿಂದ ಅಂತಿಮ ಖಾತೆಗೆ ಪರಿವರ್ತನೆಯ ಪ್ರಕ್ರಿಯೆ

ಮತದಾರರಿಗೆ ಭಾವಚಿತ್ರವಿರುವ ಗುರುತಿನ ಚೀಟಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ಮತದಾರರಿಗೆ ಭಾವಚಿತ್ರವಿರುವ ಗುರುತಿನ ಚೀಟಿ ನೀಡಲು ರಾಜ್ಯ ಚುನಾವಣಾ ಆಯೋಗ ನಿರ್ಧರಿಸಿದೆ.

ಐದು ನಗರ ಪಾಲಿಕೆಗಳ ಚುನಾವಣೆ ಸಂದರ್ಭದಲ್ಲಿ ಮತದಾರರ ಗುರುತನ್ನು ಸುಗಮಗೊಳಿಸುವ ಉದ್ದೇಶದಿಂದ ಪ್ರತಿ ಮತದಾರರಿಗೆ ಭಾವಚಿತ್ರ ಇರುವ ಗುರುತಿನ ಚೀಟಿ ನೀಡಲಾಗುತ್ತದೆ.

ಐದು ನಗರ ಪಾಲಿಕೆಗಳ ಒಟ್ಟು 369 ವಾರ್ಡ್‌ಗಳ ಎಲ್ಲ ಮತದಾರಿಗೆ ಮತದಾರರ ಗುರುತಿನ ಚೀಟಿ ನೀಡಲು ಅದರ ಮುದ್ರಣ ಮತ್ತು ವಿತರಣೆ ವ್ಯವಸ್ಥೆಯನ್ನು ಮಾಡಿಕೊಳ್ಳಲು ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿಯವರು ಅಧಿಸೂಚನೆ ಹೊರಡಿಸಿದ್ದಾರೆ. ರಾಜ್ಯ ಚುನಾವಣಾ ಆಯೋಗದ ವೇಳಾಪಟ್ಟಿಯಂತೆ ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಏಪ್ರಿಲ್ 18ರಂದು ಪ್ರಕಟವಾಗಲಿದೆ.

ಜೂನ್ 4, 5ಕ್ಕೆ ಬೆಂಗಳೂರು ಹವಾಮಾನ ಶೃಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹವಾಮಾನ ಕ್ರಮಗಳನ್ನು ಬಲಪಡಿಸುವ 'ಬೆಂಗಳೂರು ಹವಾಮಾನ ಶೃಂಗ ಸಮಾವೇಶ' ಜೂನ್ 4 ಮತ್ತು 5ರಂದು ನಡೆಯಲಿದೆ.

ಶೃಂಗ ಸಮಾವೇಶದ ವೆಬ್‌ಸೈಟ್ (www.bengaluruclimatesummit.com) ಹಾಗೂ 'ಆಲ್ಟರ್ನೇಟಿವ್-26' ಲೋಗೊವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗುರುವಾರ ಅನಾವರಣ ಮಾಡಿದರು.

ಅನಾವರಣದ ನಂತರ ಮಾತನಾಡಿದ ವಿಮೋವೇ ಪ್ರತಿಷ್ಠಾನದ ಸಂಸ್ಥಾಪಕ ವಿನಯ್ ಶಿಂಧೆ, 'ಬೆಂಗಳೂರಿನ ವೈಟ್‌ಫೀಲ್ಡ್ ಮಾಹಿತಿ ತಂತ್ರಜ್ಞಾನ ಕಾರಿಡಾರ್‌ನ ಸಿಎಂಆರ್ ಐಟಿಯ ಎಸಿಇಎಸ್ ಕ್ಯಾಂಪಸ್‌ನಲ್ಲಿ ನಡೆಯಲಿದ್ದು, ವಿಶ್ವ ಪರಿಸರ ದಿನದ ಅಂಗವಾಗಿ ನಡೆಯುವ ಈ ಕಾರ್ಯಕ್ರಮದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ. ಪರಿಸರ ಸಂರಕ್ಷಣೆಗಾಗಿ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು ಒಂದೇ ವೇದಿಕೆಯಲ್ಲಿ ಸೇರಲಿದ್ದಾರೆ. ಇದು ವಿಮೋವೇ



ಬೆಂಗಳೂರು ಹವಾಮಾನ ಶೃಂಗದ ವೆಬ್‌ಸೈಟ್, ಲೋಗೊವನ್ನು ಡಿ.ಕೆ.ಶಿವಕುಮಾರ್ ಗುರುವಾರ ಅನಾವರಣ ಮಾಡಿದರು. ವಿಮೋವೇ ಪ್ರತಿಷ್ಠಾನದ ಸಂಸ್ಥಾಪಕ ವಿನಯ್ ಶಿಂಧೆ ಉಪಸ್ಥಿತರಿದ್ದರು

ಫೌಂಡೇಷನ್ ನಡೆಸುತ್ತಿರುವ ಜಾಗೃತಿ ಕಾರ್ಯಕ್ರಮಗಳ 7ನೇ ಆವೃತ್ತಿಯಾಗಿದೆ' ಎಂದರು.

'ಹವಾಮಾನ ತಂತ್ರಜ್ಞಾನ ಮತ್ತು ನಾವೀನ್ಯದ ಪ್ರದರ್ಶನಗಳು, ವಿವಿಧ ವಿಷಯಾಧಾರಿತ ಚರ್ಚೆಗಳು, ಹವಾಮಾನ ಮತ್ತು ಪರಿಸರ ಕುರಿತ ಸೃಜನಾತ್ಮಕ ಕಲಾ ಪ್ರದರ್ಶನಗಳು ನಡೆಯಲಿವೆ. ಬೆಂಗಳೂರಿನ ಬದಲಾವಣೆಯ ಹರಿಕಾರರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಯುವಜನರಿಗೆ ತಂತ್ರಜ್ಞಾನ ಆಧಾರಿತ ಹ್ಯಾಕಥಾನ್ ಹಮ್ಮಿಕೊಳ್ಳಲಾಗುವುದು. ನಾಗರಿಕರು, ಪರಿಸರ ತಜ್ಞರು, ಯುವಕರು, ನಿವಾಸಿ ಸಂಘಗಳು ಮತ್ತು ಕೈಗಾರಿಕಾ ವಲಯದ ನಾಯಕರನ್ನು ಒಗ್ಗೂಡಿಸಿ, ಶಾಶ್ವತ ಭವಿಷ್ಯದತ್ತ ಅರ್ಥಪೂರ್ಣ ಚರ್ಚೆ ನಡೆಸಲಾಗುವುದು' ಎಂದು ಮಾಹಿತಿ ನೀಡಿದರು.

200 ಮನೆಗೆ ಒಬ್ಬ ಗಣ

ಒಂದು ವಾರದ ನಂತರ ಮುಂಜಾನೆ, ರಾತ್ರಿಯೂ ಜನಗಣತಿ: ಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಜನಗಣತಿ ಆರಂಭವಾಗಿದ್ದು, ಪ್ರತಿ 200 ಮನೆಗೆ ಒಬ್ಬ ಗಣತಿದಾರನ್ನು ನಿಯೋಜಿಸಲಾಗಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಜನಗಣತಿ-2027ರ ಭಾಗವಾಗಿ ಮೊದಲ ಹಂತದಲ್ಲಿ 'ಮನೆ ಪಟ್ಟಿ ಮತ್ತು ಮನೆಗಳ ಗಣತಿ' ಕಾರ್ಯ ಏಪ್ರಿಲ್ 16ರಿಂದ ಮೇ 15 ರವರೆಗೆ ನಡೆಯಲಿದೆ. ಗಣತಿದಾರರು ಜನಗಣತಿ ಕಾರ್ಯಕ್ಕಾಗಿ ಮನೆ-ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಈ ಸಂದರ್ಭದಲ್ಲಿ ಎಲ್ಲಾ ನಾಗರಿಕರು ಸಿಬ್ಬಂದಿಗೆ ಸಹಕಾರ ನೀಡಿ, ಅವರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಿದರೆ 5-8 ನಿಮಿಷಗಳಲ್ಲಿ ಮನೆ ಗಣತಿ ಕಾರ್ಯ ಪೂರ್ಣಗೊಳ್ಳಲಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.



ಮನೆ ಪಟ್ಟಿ ಮತ್ತು ಮನೆಗಳ ಗಣತಿ ಕಾರ್ಯಕ್ಕಾಗಿ 23,000ಕ್ಕೂ ಹೆಚ್ಚು ಗಣತಿದಾರರು ಮತ್ತು ಸುಮಾರು 2,500 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ. ಈ ಕಾರ್ಯ ಮುಗಿದ ನಂತರ ಎರಡನೇ ಹಂತದಲ್ಲಿ ಏಪ್ರಿಲ್ 2027ರಲ್ಲಿ ಜನಗಣತಿ ಕಾರ್ಯ ಆರಂಭವಾಗಲಿದೆ ಎಂದು ಹೇಳಿದರು.

ಮನೆ ಗಣತಿ ಕಾರ್ಯದಲ್ಲಿ 10,000 ಶಿಕ್ಷಕರನ್ನು ನಿಯೋಜಿಸಲಾಗಿದೆ. ಗಂಭೀರ ಆರೋಗ್ಯ ಸಮಸ್ಯೆಯಿರುವವರು, ಗರ್ಭಿಣಿಯರು, ಅಂಗವಿಕಲರು, ಒಂದು ವರ್ಷದೊಳಗಿನ ಮಕ್ಕಳಿರುವ ತಾಯಂದಿರು ಹಾಗೂ ಇತರ ಕಾರಣಗಳಿಂದ ಸುಮಾರು 8 ಸಾವಿರ ಸಿಬ್ಬಂದಿಗೆ ವಿನಾಯಿತಿ ನೀಡಲಾಗಿದೆ ಎಂದು ವಿವರಿಸಿದರು.

ಮನೆಗೆ ಸ್ಟಿಕ್ಕರ್: ಗಣತಿದಾರರು ಮನೆ-ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ, ಮನೆಯಲ್ಲಿ ಯಾರೂ ಇಲ್ಲದಿದ್ದರೆ ಮನೆ ಮುಂದೆ ಸ್ಟಿಕ್ಕರ್ ಅಂಟಿಸಿ, ಅದರಲ್ಲಿ ಮೊಬೈಲ್ ಸಂಖ್ಯೆ ನಮೂದಿಸಲಾಗುವುದು. ನಂತರ ಸಂಬಂಧಪಟ್ಟ ಚಾರ್ಜ್ ಅಧಿಕಾರಿ ಅಥವಾ ಗಣತಿದಾರರಿಗೆ ಕರೆ ಮಾಡಿದರೆ

ಸ್ವಯಂ ಗಣತಿ: ಶೇ 2

ಜಿಬಿಎ ವ್ಯಾಪ್ತಿಯಲ್ಲಿ ಏಪ್ರಿಲ್ 15ರವರೆಗೆ ... ಲಾಗಿತ್ತು. ಅದರಲ್ಲಿ ಶೇಕಡ 2ಕ್ಕಿಂತ ಕಡಿ... ಪಾಲ್ಗೊಂಡಿದ್ದಾರೆ. ಗಣತಿದಾರರು ಮನೆ-... ಯೊಬ್ಬ ನಾಗರಿಕರೂ ಜನಗಣತಿ ಕಾರ್ಯ... ಜವಾಬ್ದಾರಿಯಾಗಿದ್ದು, ಜನಗಣತಿ ಕಾರ್ಯ... ಪಾಲ್ಗೊಳ್ಳಬೇಕು. ಮಾಹಿತಿ ನೀಡದವರ ... ಕಾನೂನು ಕ್ರಮ ಕೈಗೊಳ್ಳಲಾಗುವುದು ... ತಿಳಿಸಿದರು.


ಚಾಲಕರಿಗೆ ಕಿಟ್ ವಿತರಿಸಲಾಯಿತು

ಆಟೊ ಚಾಲಕರಿಗೆ ರಚಿತಾ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಎಲ್‌ಪಿಜಿ ಪೂರೈಕೆಯಲ್ಲಿನ ವ್ಯತ್ಯಯದಿಂದ ಸಂಕಷ್ಟಕ್ಕೊಳಗಾಗಿರುವ ಆಟೊ ಚಾಲಕರಿಗೆ ನಟಿ ರಚಿತಾ ರಾಮ್ ರೇಷನ್ ಕಿಟ್ ವಿತರಣೆ ಮಾಡಿದ್ದಾರೆ.

ನಗರದ ರಾಜರಾಜೇಶ್ವರಿ ನಗರ ಹಾಗೂ ಜಯನಗರ ಭಾಗದಲ್ಲಿ 150ಕ್ಕೂ ಅಧಿಕ ಆಟೊ ಚಾಲಕರಿಗೆ ಈ ಕಿಟ್ ವಿತರಿಸಲಾಗಿದೆ. ರಚಿತಾ ಅವರ ಪರವಾಗಿ ಅವರ ತಂಡದವರು ಕಿಟ್ ಹಂಚಿದರು. ಕಳೆದ ವರ್ಷ ರಚಿತಾ ಅವರನ್ನು ಆಟೊ ಚಾಲಕರ ಸಂಘದ ರಾಯಭಾರಿಯಾಗಿ ಆಯ್ಕೆ ಮಾಡಲಾಗಿತ್ತು. ಇತ್ತೀಚೆಗಷ್ಟೇ ನಟ ಧ್ರುವ ಸರ್ಜಾ ಅವರು ಆಟೊ ಚಾಲಕರಿಗೆ ₹25 ಲಕ್ಷ ಸಹಾಯ ಮಾಡಿದ್ದರು.

ಮುಟ್ಟಿನ ರಜೆ ಜಾರಿಗೆ ಒತ್ತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಟ್ಟಿನ ರಜೆ ಸಂಬಂಧ ನಿಯಮಗಳನ್ನು ರೂಪಿಸಿ, ತಕ್ಷಣವೇ ಜಾರಿಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮಿತಿಯು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಮುಟ್ಟಿನ ರಜೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ. ಮಹಿಳಾ ನೌಕರರು ಋತುಚಕ್ರದ ಸಮಯದಲ್ಲಿ, ತಿಂಗಳಲ್ಲಿ ಒಂದು ದಿನ ವೇತನ ಸಹಿತ ರಜೆ ನೀಡಲು ನಿಯಮಗಳನ್ನು ರೂಪಿಸಿ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ. ಈ ನೀತಿ

ನಗರದಲ್ಲಿ ಇಂದು

ಸುಚಿತ್ರಾ ಹಿರಣ್ಣಯ್ಯ ನಾಟಕೋತ್ಸವ: ಬೆಳಿಗ್ಗೆ 10ಕ್ಕೆ ಕಾರ್ಯಾಗಾರ: ಅಪೂರ್ವ ಆರ್ಥರ್, ಸಂಜೆ 4.30ರಿಂದ ಮಾಸ್ಟರ್ ಕ್ಲಾಸ್: ಬಾಬು ಹಿರಣ್ಣಯ್ಯ, ಸಂಜೆ 6.15ರಿಂದ 'ನಮ್ಮ ರಂಗಭೂಮಿ ನಮ್ಮ ಶಕ್ತಿ' ಬೀದಿ ನಾಟಕ, ಸಂಜೆ 7ರಿಂದ 'ಸೇವಂತಿ ಪ್ರಸಂಗ' ನಾಟಕ ಪ್ರದರ್ಶನ, ಆಯೋಜನೆ ಹಾಗೂ ಸ್ಥಳ: ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ

ಬಿ.ಆರ್. ಅಂಬೇಡ್ಕರ್ ಜಯಂತಿ: ಅಧ್ಯಕ್ಷತೆ: ಮೋಹನ್ ಕುಮಾರ್ ಬಿ.ಕೆ., ಅತಿಥಿಗಳು: ಎಲ್. ಹನುಮಂತಯ್ಯ, ಕೆ.ವೈ. ನಾರಾಯಣಸ್ವಾಮಿ, ಉಪಸ್ಥಿತಿ: ಅದಾ ಫಾತಿಮಾ, ಮಂಜುನಾಥ ಟಿ.ಎಂ., ಧನಂಜಯ, ಆಯೋಜನೆ ಹಾಗೂ ಸ್ಥಳ: ನೃಪತುಂಗ ವಿಶ್ವವಿದ್ಯಾಲಯ, ನೃಪತುಂಗ ರಸ್ತೆ, ಬೆಳಿಗ್ಗೆ 11.30

33ನೇ ಶ್ರೀರಾಮನವಮಿ ಸಂಗೀತೋತ್ಸವ: ಪಿಟೀಲು: ಸುಮಂತ್ ಮಂಜುನಾಥ್, ಮಾಳವಿ ಮಂಜುನಾಥ್, ಮೃದಂಗ: ಬಿ.ಸಿ. ಮಂಜುನಾಥ್, ಘಟ: ಶಮಿತ್ ಗೌಡ, ಭರತನಾಟ್ಯ: ಚಿತ್ಕಲಾ ಸ್ಕೂಲ್ ಆಫ್ ಡಾನ್ಸ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 4.15ರಿಂದ

'ಚಂದ್ರಶೇಖರ್-100' ಜನ್ಮಶತಮಾನೋತ್ಸವ ಸಮಾರಂಭ: ಉದ್ಘಾಟನೆ: ಎಸ್. ರಮೇಶ್ ಕುಮಾರ್, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಅತಿಥಿಗಳು: ಲೀಲಾದೇವಿ ಆರ್. ಪ್ರಸಾದ್, ವಿ.ಆರ್. ಸುದರ್ಶನ್, ಕೊಂಡಜ್ಜಿ ಮೋಹನ್, ಉಪಸ್ಥಿತಿ: ಬಿ.ಎಲ್. ಶಂಕರ್, ಆಯೋಜನೆ: ಭಾರತ ಯಾತ್ರಾ ಕೇಂದ್ರ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಎಸ್. ಸರಸ್ವತಿ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಎಸ್. ಸಾಕೇತರಾಮನ್, ಎಚ್.ಎಂ. ಸ್ಮಿತಾ, ಅರ್ಜುನ್ ಕುಮಾರ್, ಜಿ. ಗುರುಪ್ರಸನ್ನ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ


ಎಸ್. ಸಾಕೇತರಾಮನ್

ಅಣಕು ನ್ಯಾಯಾಲಯ ಸ್ಪರ್ಧೆ: ಅತಿಥಿಗಳು: ಟಿ.ಆರ್. ಸುಬ್ರಹ್ಮಣ್ಯ, ಎಂ.ಕೆ. ರಮೇಶ್, ಮುಖ್ಯ ಪೋಷಕರು: ಬಿ.ಎಸ್. ರಾಗಿಣಿ ನಾರಾಯಣ್, ಪಿ. ದಯಾನಂದ ಪೈ, ತಿರುಮಲಾಚಾರಿ ರಾಮಸ್ವಾಮಿ, ಅಧ್ಯಕ್ಷತೆ: ಅವಿರಾಮ್ ಶರ್ಮಾ, ಆಯೋಜನೆ ಹಾಗೂ ಸ್ಥಳ: ಬಿಎಂಎಸ್ ಕಾನೂನು ಕಾಲೇಜು, ಬಸವನಗುಡಿ, ಸಂಜೆ 6

'ತತ್ವ' ಭಕ್ತಿ ಫ್ಯೂಷನ್ ಸಂಗೀತ: ಅರುಂಧತಿ ವಸಿಷ್ಠ, ವರುಣ್ ಪ್ರದೀಪ್, ಪ್ರವೀಣ್ ಡಿ. ರಾವ್, ಮಂಜುನಾಥ್ ಸತ್ಯಶೀಲ್ ಮತ್ತು ತಂಡ, ಆಯೋಜನೆ: ಪರಂಪರಾ ಫೌಂಡೇಷನ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 6.15

'ಸಮಗ್ರ ಮಹಾಭಾರತ' ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

26ನೇ ವರ್ಷದ ಪ್ರವಚನ ವಾಹಿನಿ: ಭಾಗವತದ ಸಂದೇಶ: ಅಶೋಕಾಚಾರ್ಯ ಜೋಶಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಸುಯೋಧನ' ನಾಟಕ ಪ್ರದರ್ಶನ: ನಿರ್ದೇಶನ: ಎಸ್.ವಿ. ಕೃಷ್ಣ ಶರ್ಮಾ, ತಂಡ: ರಂಗರಸಧಾರೆ, ಆಯೋಜನೆ: ಸೇವಾ ಸದನ, ಮಲ್ಲೇಶ್ವರ, ಸಂಜೆ 7

'ಲವ್ ಲೆಟರ್ಸ್!' ರೂಪಾಂತರ: ಕಿಶೋರ್ ಕುಮಾರ್, ಸಿರಿ ರವಿಕುಮಾರ್, ನಿರ್ದೇಶನ: ವೆಂಕಟೇಶ್ ಪ್ರಸಾದ್, ಆಯೋಜನೆ: ಬೆಂಗಳೂರು ಥಿಯೇಟರ್ ಕಲೆಕ್ಟಿವ್, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in



prajavani.net prajavani
ಶುಕ್ರವಾರ, ಏಪ್ರಿಲ್ 17, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 106 | ಪುಟ 16
www.prajavani.net
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 77,988 | ನಿಫ್ಟಿ 24,196 | $/₹ 93.14



ವೈಶಾಲಿಗೆ ಕಿರೀಟ
ಸೈಪ್ರಸ್‌ನಲ್ಲಿ ನಡೆದ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮಹಿಳಾ ವಿಭಾಗದ ಚಾಂಪಿಯನ್ ಆರ್. ವೈಶಾಲಿ ಟ್ರೋಫಿಯೊಂದಿಗೆ ಕಾಣಿಸಿಕೊಂಡಿದ್ದು ಹೀಗೆ...

ಮಹಿಳಾ ಮೀಸಲು ಅಗ್ನಿಪರೀಕ್ಷೆ

ಪ್ರಜಾವಾಣಿ ವಾರ್ತೆ


ನವದೆಹಲಿ: ಮಹಿಳಾ ಮೀಸಲು ಕಾನೂನಿಗೆ ತಿದ್ದುಪಡಿ ಮಾಡುವ ಸಂವಿಧಾನ (131ನೇ ತಿದ್ದುಪಡಿ) ಮಸೂದೆ-2026 ಸೇರಿದಂತೆ ಮೂರು ಮಸೂದೆಗಳನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಗುರುವಾರ ಮಂಡಿಸಿದೆ. 2027ರ ಜನಗಣತಿಗೆ ಮುನ್ನವೇ ಕ್ಷೇತ್ರ ಮರು ವಿಂಗಡಣೆ ನಡೆಸುವ ಪ್ರಸ್ತಾವಕ್ಕೆ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ವಿರೋಧ ಲೆಕ್ಕಿಸದೇ ಈ ಮಸೂದೆಗಳನ್ನು ಮಂಡಿಸಲಾಗಿದೆ.


ಮಸೂದೆಗಳಿಗೆ ಅಂಗೀಕಾರ ಪಡೆಯುವುದು ಸರ್ಕಾರಕ್ಕೆ ಅಗ್ನಿ ಪರೀಕ್ಷೆಯಾಗಿದ್ದರೆ, ವಿಪಕ್ಷಗಳ ಒಗ್ಗಟ್ಟನ್ನು ಪ್ರದರ್ಶಿಸುವುದು 'ಇಂಡಿಯಾ' ಮೈತ್ರಿಕೂಟಕ್ಕೆ ಸತ್ವ ಪರೀಕ್ಷೆಯಾಗಿದೆ.


ಮೂರು ಮಸೂದೆಗಳನ್ನು ಮಂಡಿಸುವ ಸಂದರ್ಭದಲ್ಲಿ ಆಡಳಿತ ಹಾಗೂ ವಿಪಕ್ಷಗಳ ನಡುವಿನ ತೀವ್ರ ಜಟಾಪಟಿಗೆ ಸದನ ಸಾಕ್ಷಿಯಾಯಿತು. ಮಸೂದೆ ಮಂಡನೆ ವಿರೋಧಿಸಿದ ಕಾಂಗ್ರೆಸ್ ಸಂಸದ ಕೆ.ಸಿ.ವೇಣುಗೋಪಾಲ್, '2024ರ ಚುನಾವಣೆಯಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿತ್ತು. ಈಗ ಮಸೂದೆ ಮಂಡಿಸುತ್ತಿರುವುದು ಚುನಾವಣಾ ಗಿಮಿಕ್' ಎಂದು ದೂಷಿಸಿದರು. ವಿವಾದಾತ್ಮಕ ಮಸೂದೆ ಮಂಡನೆ ವಿರೋಧಿಸಿ ಧರ್ಮೇಂದ್ರ ಯಾದವ್ (ಸಮಾಜವಾದಿ ಪಕ್ಷ), ಕಾಕೋಲಿ ಘೋಷ್ ದಸ್ತಿದಾರ್ (ಟಿಎಂಸಿ), ಅಸಾದುದ್ದೀನ್ ಓವೈಸಿ (ಎಐಎಂಐಎಂ) ಮತ್ತು ಎನ್.ಕೆ ಪ್ರೇಮಚಂದ್ರನ್ (ಆರ್‌ಎಸ್‌ಪಿ) ಮತ್ತಿತರರು ಮಾತನಾಡಿದರು.

40 ನಿಮಿಷಗಳ ವಾಗ್ವಾದದ ಬಳಿಕ ಮತ ವಿಭಜನೆಗೆ ವಿಪಕ್ಷಗಳು ಒತ್ತಾಯಿಸಿದವು. ನಂತರ ಮಸೂದೆ ಮಂಡನೆಯನ್ನು ಮತಕ್ಕೆ ಹಾಕಲಾಯಿತು. 251 ಸದಸ್ಯರು ಬೆಂಬಲಿಸಿದರೆ, 185 ಸದಸ್ಯರು ವಿರೋಧಿಸಿದರು. ಮಸೂದೆ ಮಂಡನೆಗೆ ಸರಳ ಬಹುಮತ ಸಾಕು. ಮತದಾನದ ಸಂದರ್ಭದಲ್ಲಿ 436 ಸಂಸದರಷ್ಟೇ ಹಾಜರಿದ್ದರು.

▶ 9







ಇಂದು ಸಂಜೆ 4ಕ್ಕೆ ಮತದಾನ

ಮಸೂದೆಗಳಿಗೆ ಅಂಗೀಕಾರ ಪಡೆಯಲು ಶುಕ್ರವಾರ ಸಂಜೆ 4 ಗಂಟೆಗೆ ಮತದಾನ ನಡೆಯಲಿದೆ ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಪ್ರಕಟಿಸಿದರು. ಮಸೂದೆಗಳ ಕುರಿತು 15ರಿಂದ 18 ಗಂಟೆ ಚರ್ಚೆ ನಡೆಯಲಿದೆ ಎಂದೂ ಅವರು ಹೇಳಿದರು. ಇದಕ್ಕೂ ಮುನ್ನ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಮಸೂದೆಗಳ ಬಗ್ಗೆ 12 ಗಂಟೆಗಳ ಚರ್ಚೆಗೆ ಉದ್ದೇಶಿಸಲಾಗಿದೆ. ಚರ್ಚೆಯ ಅವಧಿಯನ್ನು ವಿಸ್ತರಿಸುವ ಬಗ್ಗೆ ಲೋಕಸಭಾಧ್ಯಕ್ಷರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದರು.

ಅರ್ಜಿ ಇತ್ಯರ್ಥವಾದವರಿಗೆ ಮತದ ಹಕ್ಕು

ನವದೆಹಲಿ: ಮತದಾರರ ಪಟ್ಟಿಯಿಂದ ತಮ್ಮ ಹೆಸರುಗಳನ್ನು ತಪ್ಪಾಗಿ ಕೈಬಿಡಲಾಗಿದೆ ಎಂದು ಆಕ್ಷೇಪಿಸಿದ್ದ ಮತದಾರರ ಅರ್ಜಿಗಳನ್ನು ಇತ್ಯರ್ಥಪಡಿಸಿದ್ದಲ್ಲಿ ಅಂಥವರಿಗೆ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಮತ ಚಲಾಯಿಸಲು ಅವಕಾಶ ನೀಡುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ▶ 9



ಚಿನಕುರುಳಿ ಪ್ರಕಾಶ್ ಶೆಟ್ಟಿ



ಶಿಕ್ಷೆ ಇಂದು ಪ್ರಕಟ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ, ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಸೇರಿದಂತೆ 17 ಜನ ತಪ್ಪಿತಸ್ಥರ ಶಿಕ್ಷೆಯ ಪ್ರಮಾಣವನ್ನು ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಶುಕ್ರವಾರ (ಏಪ್ರಿಲ್ 17) ಪ್ರಕಟಿಸಲಿದೆ.

ಪ್ರಕರಣದಲ್ಲಿನ 17 ಆರೋಪಿಗಳನ್ನು 'ಅಪರಾಧಿಗಳು' ಎಂದು ಬುಧವಾರ ನಿರ್ಣಯಿಸಿದ್ದ, ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು, ಗುರುವಾರ ಶಿಕ್ಷೆಯ ಪ್ರಮಾಣ ನಿರ್ಧರಿಸುವ ಮುನ್ನ ಕಾನೂನಿನ ತತ್ವಗಳಿಗೆ ಅನುಗುಣವಾಗಿ ಗರಿಷ್ಠ ಶಿಕ್ಷೆಗೆ ವಿನಾಯ್ತಿ ಕೋರುವ ಅಪರಾಧಿಗಳ ಮನವಿ ಆಲಿಸಿದರು.

ವಿವರ ▶ 6

'ಇರಾನ್ ಜೊತೆ ಒಪ್ಪಂದ ಸನ್ನಿಹಿತ'

ವಾಷಿಂಗ್ಟನ್ (ಎಎಫ್‌ಪಿ): 'ದಶಕಗಳ ಕಾಲ ಇರಾನ್ ಪರಮಾಣು ಹೊಂದುವುದಿಲ್ಲ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

'ನಮ್ಮಲ್ಲಿ ಸಶಕ್ತವಾದ ಹೇಳಿಕೆ ಇದೆ. ಇರಾನ್‌ನವರು 20 ವರ್ಷಗಳಿಗಿಂತ ಹೆಚ್ಚು ಕಾಲ ಪರಮಾಣು ಶಸ್ತ್ರಾಸ್ತ್ರ ಹೊಂದಿರುವುದಿಲ್ಲ ಎಂದಿದ್ದಾರೆ' ಎಂದು ತಿಳಿಸಿದ್ದಾರೆ.

'ಇರಾನ್ ಜೊತೆಗೆ ಒಪ್ಪಂದವು ಸನ್ನಿಹಿತವಾಗಿದೆ. ಸಮೃದ್ಧ ಪ್ರಮಾಣದ ಯುರೇನಿಯಂ ಹಸ್ತಾಂತರಿಸು-ವುದು ಸೇರಿದಂತೆ ಬಹುತೇಕ ಬೇಡಿಕೆಗಳಿಗೆ ಇರಾನ್ ಒಪ್ಪಿದೆ' ಎಂದು ಶ್ವೇತಭವನದ ಮುಂದೆ ತಿಳಿಸಿದ್ದಾರೆ.

'ಒಪ್ಪಂದ ಏರ್ಪಟ್ಟರೆ, ಅದಕ್ಕೆ ಸಹಿ ಹಾಕಲು ನಾನೇ ಇಸ್ಲಾಮಾಬಾದ್‌ಗೆ ತೆರಳಬಹುದು' ಎಂದು ಹೇಳಿದ್ದಾರೆ.

▶ 8

ಮಂತ್ರಾಲಯದ ಬಳಿ ರಸ್ತೆ ಅಪಘಾತ: 8 ಜನ ಸಾವು

ರಾಯಚೂರು: ಆಂಧ್ರಪ್ರದೇಶದ ಪ್ರದೇಶದ ಕರ್ನೂಲ್ ಜಿಲ್ಲೆಯ ಚಿಲಕಣಡೋಣ ಗ್ರಾಮದ ಸಮೀಪ (ಮಂತ್ರಾಲಯದ ಬಳಿ) ಗುರುವಾರ ಬೆಳಗಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐವರು ಮಹಿಳೆಯರು ಸೇರಿ ಎಂಟು ಮಂದಿ ಮೃತಪಟ್ಟಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಮೀನಾಕ್ಷಮ್ಮ (55), ಪುಟ್ಟಮ್ಮ (65), ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಶೆಟ್ಟಿಗೆರೆ ಗ್ರಾಮದ ಸುಶೀಲ್‌ಕುಮಾರ್ (48), ಮಗ ಸುನೀಲ್ (27), ಮಗಳು ವೀಣಾ (24), ಮೊಮ್ಮಗಳು ನಿಶ್ಚಿತಾ (3), ತಮ್ಮನ ಹೆಂಡತಿ ಲೋಲಾಕ್ಷಿ (38), ಅತ್ತೆ ಜಯಮ್ಮ (60) ಮೃತರು. 9 ಮಂದಿ ತೀವ್ರವಾಗಿ ಗಾಯಗೊಂಡಿದ್ದು, ನಾಲ್ವರ ಸ್ಥಿತಿ ಗಂಭೀರವಾಗಿದೆ. 21 ಮಂದಿ ಮಂತ್ರಾಲಯಕ್ಕೆ ತೆರಳುತ್ತಿದ್ದ ಅಶೋಕ್ ಲೇಲ್ಯಾಂಡ್ ದೋಸ್ತ್ ವಾಹನದಲ್ಲಿ ಹಾರುಬೂದಿ ಸಾಗಿಸುತ್ತಿದ್ದ ಟ್ಯಾಂಕರ್‌ಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ.



ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

ಪದಾಧಿಕಾರಿಗಳ ಆಯ್ಕೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಕಾಸರಘಟ್ಟ ಹಾಲು ಉತ್ಪಾದಕರ ಸಹಕಾರ ಸಂಘದ ಐದು ವರ್ಷದ ಅವಧಿಗೆ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಅಧ್ಯಕ್ಷರಾಗಿ ಕೆ.ಜಿ.ವಿಷ್ಣುವರ್ಧನ್ ಉಪಾಧ್ಯಕ್ಷರಾಗಿ ಚಂದ್ರಶೇಖರ್, ನಿರ್ದೇಶಕರಾಗಿ ಸುನಿತಾ ರಂಗನಾಥ್, ಲಕ್ಷ್ಮಣಯ್ಯ, ರಂಗಣ್ಣ, ಕೆ.ಜಿ.ರಂಗನಾಥ್, ನಾಗರಾಜು, ಲಕ್ಷ್ಮಿಕಾಂತಯ್ಯ, ಚಿಕ್ಕಮಹಿಮಕ್ಕ, ಕೆಂಪಣ್ಣ, ಬೈಲಮ್ಮ ಆಯ್ಕೆಯಾಗಿದ್ದಾರೆ.

‘ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್’ ಮೇ 1ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ವತಿಯಿಂದ ಜಯಮಹಲ್ ಪ್ಯಾಲೆಸ್ ಹೋಟೆಲ್ ಸಭಾಂಗಣದಲ್ಲಿ ‘ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್’ (ಟಿಐಎಎಚ್) ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇ 1ಕ್ಕೆ ಆರಂಭಗೊಳ್ಳಲಿದೆ.

ಮೇ 10ರವರೆಗೆ ಪ್ರದರ್ಶನ ಇರಲಿದ್ದು,ದೇಶದಾದ್ಯಂತ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳನ್ನು ಪ್ರದರ್ಶಿಸಲು, ಪ್ರಚಾರ ಮಾಡಲು ಮತ್ತು ಮಾರಾಟ ಮಾಡಲು ವೇದಿಕೆಯಾಗಲಿದೆ. ಉತ್ಪನ್ನಗಳ ಪ್ರದರ್ಶನ ಮಳಿಗೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ಮತ್ತು ಭಾರತದ ವಿವಿಧ ಭಾಗಗಳಿಂದ ರುಚಿಕರವಾದ ಭಕ್ಷ್ಯಗಳನ್ನು ಪೂರೈಸುವ ಆಹಾರ ಮಳಿಗೆಗಳು ಹಬ್ಬದ ವಾತಾವರಣವನ್ನು ಸೃಷ್ಟಿಸಲಿವೆ.



ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್

ಪ್ರಮುಖವಾಗಿ ಚನ್ನಪಟ್ಟಣದ ಆಟಿಕೆಗಳು, ಉತ್ತರ ಪ್ರದೇಶದ ಖುರ್ಜಾದ ಮಣ್ಣಿನ ಪಾತ್ರೆ ಹಾಗೂ ಅಲಂಕಾರಿಕ ವಸ್ತುಗಳು, ಜೈಪುರದ ನೀಲಿ ಮಡಕೆಗಳು, ಜೈಪುರ ಲೋಹ, ಒಡಿಶಾದ ಕಲ್ಲಿನ ವಿಗ್ರಹಗಳು, ಬೇವಿನ ಮರದ ಪಾತ್ರೆ, ಪಟಚಿತ್ರ, ಬಿಹಾರದ ಮಧುಬನಿ ವರ್ಣಚಿತ್ರಗಳು, ತಮಿಳುನಾಡಿನ ತಂಜಾವೂರು ವರ್ಣಚಿತ್ರ ಪಶ್ಚಿಮ ಬಂಗಾಳದ ಕಾಲಿಘಾಟ್ ವರ್ಣಚಿತ್ರ, ಸೋಲಾ ಹೂವು, ಮಹಾರಾಷ್ಟ್ರದ ರಾಳದ ಕಲೆ, ಸಂಗೀತ ವಾದ್ಯಗಳು, ಆಂಧ್ರ ಪ್ರದೇಶದ ಚರ್ಮದ ಬೊಂಬೆ ಮತ್ತು ದೀಪ, ಆಗ್ರಾದ ಅಮೃತಶಿಲೆ ಕೆತ್ತನೆ, ಮಧ್ಯಪ್ರದೇಶದ ಭೀಲ್ ಚಿತ್ರಕಲೆ, ಕರ್ನಾಟಕದ ಸುರಪುರ ಸುಣ್ಣದ ಕಲೆ, ಹರಿಯಾಣದ ಕಲ್ಲಿನ ಧೂಳಿನ ಚಿತ್ರಕಲೆ, ಮಧ್ಯಪ್ರದೇಶದ ಗೊಂಡ್ ಚಿತ್ರಕಲೆ, ಹರಿಯಾಣದ ಮರದ ಕೆತ್ತನೆ, ಕೇರಳದ ಮರದ ಕೆತ್ತನೆಗಳು ಸೇರಿದಂತೆ ಹಲವು ಸಾಂಪ್ರದಾಯಿಕ ಉತ್ಪನ್ನಗಳು ಒಂದೇ ಸೂರಿನಡಿ ಲಭ್ಯ ಇರಲಿವೆ.

ಪಶ್ಚಿಮ ಬಂಗಾಳದ ಆಕ್ಸಿಡೀಕೃತ ಆಭರಣ, ಕರ್ನಾಟಕದ ಟೆರಾಕೋಟಾ ಆಭರಣ, ಲಂಬಾಣಿ ಆಭರಣ, ಪಶ್ಚಿಮ ಬಂಗಾಳದ ಸಮುದ್ರ ಚಿಪ್ಪು ಮತ್ತು ಮುತ್ತಿನ ಆಭರಣ, ರಾಜಸ್ಥಾನದ ಮೀನಕರಿ ಆಭರಣಗಳು, ಪಂಜಾಬಿ ಚಪ್ಪಲಿಗಳು, ಚರ್ಮದ ಚೀಲಗಳು, ಒಂಟೆ ಚರ್ಮದ ಚಪ್ಪಲಿ, ಕೊಲ್ಹಾಪುರಿ ಚಪ್ಪಲಿ, ಕೈಯಿಂದ ತಯಾರಿಸಿದ ಚರ್ಮದ ಚೀಲ, ಗುಜರಾತ್‌ನ ಪ್ಯಾಚ್‌ವರ್ಕ್ ಚೀಲ, ಗುಜರಾತ್‌ನ ಕೈ ಕಸೂತಿ ಚೀಲಗಳು ಪ್ರದರ್ಶನ ಮತ್ತು ಮಾರಾಟಕ್ಕೆ ಇರಲಿವೆ.

ರಾಜಸ್ಥಾನದ ಅಪ್ಲಿಕ್ ವರ್ಕ್ ಕೈಮಗ್ಗ, ಬಿಳಿ ಖಾದಿ ಟಾಪ್ಸ್, ಬಿಹಾರದ ಬಾಗಲ್‌ಪುರಿ ಸೀರೆ, ಗುಜರಾತ್‌ನ ಕಚ್‌ನ ಅಜರಖ್ ಬಾಂಧನಿ, ಉತ್ತರ ಪ್ರದೇಶದ ಚಿಕನ್ಕಾರಿ, ಒಡಿಶಾದ ಸಂಬಲ್ಪುರ್ ಸೀರೆ, ಪಶ್ಚಿಮ ಬಂಗಾಳದ ಕೈಮಗ್ಗದ ಸೀರೆ, ಜಾಮ್ದಾನಿ ಸೀರೆ, ತೆಲಂಗಾಣದ ಇಕ್ಕತ್ ಸೀರೆ ಮತ್ತು ಉಡುಗೆಗಳು, ಕಾಶ್ಮೀರದ ಕೈಮಗ್ಗ, ಮಿರ್ಜಾಪುರದ ಕಾರ್ಪೆಟ್‌ಗಳು, ಡಾರಿಸ್ ಮತ್ತು ಕಂಬಳಿ, ಉತ್ತರ ಪ್ರದೇಶದ ಸೀತಾಪುರ ಕಂಬಳಿ, ಕರ್ನಾಟಕದ ಇಳಕಲ್ ಸೀರೆ, ತಮಿಳುನಾಡಿನ ಕಾಂಚೀಪುರಂ ಸೀರೆಗಳು ಆಕರ್ಷಿಸಲಿವೆ.

ರಾಜಸ್ಥಾನದ ಪ್ರಾಚೀನ ಪೀಠೋಪಕರಣ, ಆಂಧ್ರ ಪ್ರದೇಶದ ತಿರುಪತಿ ಪ್ರಾಚೀನ ಕೆತ್ತನೆಗಳು, ಪಶ್ಚಿಮ ಬಂಗಾಳದ ಗೋಲ್ಡನ್ ಗ್ರಾಸ್ ಮ್ಯಾಟ್, ಉತ್ತರ ಪ್ರದೇಶದ ಸಹಾರನ್‌ಪುರ ಪೀಠೋಪಕರಣ ಇರಲಿವೆ.

ರಾಜಸ್ಥಾನದ ಜನಪದ ಗಾಯಕ ಉಸ್ತಾದ್ ಲತೀಫ್ ಖಾನ್ ಅವರು 10 ದಿನ ಗಾಯನ ಕಾರ್ಯಕ್ರಮ ನೀಡಲಿದ್ದಾರೆ. ಪ್ರತಿದಿನ ಬೆಳಿಗ್ಗೆ 10.30ರಿಂದ ರಾತ್ರಿ 8.30ರವರೆಗೆ ಸಾರ್ವಜನಿಕರಿಗೆ ತೆರೆದಿರಲಿದೆ ಎಂದು ‘ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್’ ಸಹ ಸಂಸ್ಥಾಪಕರಾದ ನಾಗರಾಜ್ ಹುಂಡೇಕರ್, ಅಹ್ಮದ್ ಖಾನ್ ತಿಳಿಸಿದರು.

ಮಾಹಿತಿಗಾಗಿ 9880331685, 9886507007, 9972670107 ಸಂಪರ್ಕಿಸಬಹುದು.

‘ಎಸ್‌ಐಆರ್ ಪ್ರಕ್ರಿಯೆ ತಿರಸ್ಕರಿಸಿ’

ಬೆಂಗಳೂರು: ‘ರಾಜ್ಯ ಸರ್ಕಾರವು ‘ವಿಶೇಷ ಸಮಗ್ರ ಪರಿಷ್ಕರಣೆ’ಯನ್ನು (ಎಸ್‌ಐಆರ್) ತಿರಸ್ಕರಿಸಬೇಕು. 2027ರ ಜನಗಣತಿವರೆಗೆ ಈ ಪ್ರಕ್ರಿಯೆ ನಿಲ್ಲಿಸಬೇಕು’ ಎಂದು ಸಿವಿಕ್ ಬೆಂಗಳೂರು ಸಂಸ್ಥೆ ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಪರವಾಗಿ ಮಾತನಾಡಿದ ತ್ರಿಲೋಚನ್ ಶಾಸ್ತ್ರಿ, ‘ಎಸ್‌ಐಆರ್ ಜಾರಿ ಬಗ್ಗೆ ಹೆಚ್ಚಿನ ಚರ್ಚೆಗಳು ನಡೆಯಬೇಕಿದೆ. ಆತುರದಲ್ಲಿ ಈ ಪ್ರಕ್ರಿಯೆ ಜಾರಿ ಮಾಡುವುದು ಸರಿಯಲ್ಲ’ ಎಂದರು.

‘ಈ ಪ್ರಕ್ರಿಯೆಯನ್ನು ಸಮಗ್ರವಾಗಿ ಪರಿಶೀಲಿಸಬೇಕಾದ ಅಗತ್ಯವಿದೆ. 2027ರ ಜನಗಣತಿ ಪ್ರಕ್ರಿಯೆ ಮುಗಿಯುವ ತನಕ ಎಸ್‌ಐಆರ್ ಪ್ರಕ್ರಿಯೆ ನಿಲ್ಲಿಸಿ, ಜನಗಣತಿಯ ದತ್ತಾಂಶವನ್ನು ಹೊಸ ಮತದಾರರ ಪಟ್ಟಿ ರಚಿಸಲು ಬಳಸಿಕೊಳ್ಳಬೇಕು’ ಎಂದು ಅಭಿಪ್ರಾಯಪಟ್ಟರು.

‘ಎಸ್‌ಐಆರ್ ವಿರುದ್ಧ ರಾಜ್ಯ ಸರ್ಕಾರ ದೃಢ ನಿಲುವು ಕೈಗೊಳ್ಳಬೇಕು. ಮತ ಹಕ್ಕು ಕಾಪಾಡಲು ಕಾನೂನು ಇಲಾಖೆಯಿಂದ ಸೂಕ್ತ ಕ್ರಮಕ್ಕೆ ಶಿಫಾರಸು ಪಡೆದು, ಅದರಂತೆ ಕ್ರಮ ವಹಿಸಬೇಕು’ ಎಂದು ಆಗ್ರಹಿಸಿದರು. ಸಿವಿಕ್ ಬೆಂಗಳೂರು ಸಂಸ್ಥೆಯ ಕಾರ್ಯ ನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ಉಪಸ್ಥಿತರಿದ್ದರು.

ಜಲಮಂಡಳಿಗೆ ಸಿಗದ ನಿಖರ ಮಾಹಿತಿ

ಖಾಸಗಿ ಮ್ಯಾನ್‌ಹೋಲ್, ಎಸ್‌ಟಿಪಿ ನೋಂದಣಿ ಅವಧಿ ಮುಗಿದರೂ ಸಿಗದ ಸ್ಪಂದನ

• ಉಮೇಶ ಭಟ್ಟ ಪಿ.ಎಚ್.

ಬೆಂಗಳೂರು: ನಗರದಲ್ಲಿನ ಖಾಸಗಿ ಮ್ಯಾನ್‌ಹೋಲ್ ಹಾಗೂ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಕುರಿತು ನಿಖರ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಜಲಮಂಡಳಿ ಸಮೀಕ್ಷೆ ಆರಂಭಿಸಿದ್ದರೂ, ಇದಕ್ಕೆ ಸರಿಯಾದ ಸಹಕಾರ ಸಿಗುತ್ತಿಲ್ಲ.

ವಾಣಿಜ್ಯ ಕಟ್ಟಡಗಳು, ವಸತಿ ಸಮುಚ್ಚಯ, ಗ್ರೂಪ್ ಹೌಸ್ ಮತ್ತು ಖಾಸಗಿ ಬಡಾವಣೆಗಳಲ್ಲಿರುವ ಎಸ್‌ಟಿಪಿ ಮತ್ತು ಮ್ಯಾನ್‌ಹೋಲ್‌ಗಳ ನಿರ್ವಹಣೆಯನ್ನು ಕಡ್ಡಾಯವಾಗಿ ಜಲಮಂಡಳಿಯಲ್ಲಿ ನೋಂದಾಯಿತವಾಗಿರುವ ಏಜೆನ್ಸಿಗಳ ಮುಖಾಂತರವೇ ಮಾಡಿಸುವ ಉದ್ದೇಶದಿಂದ ನೋಂದಣಿ ಮಾಡಿಸಲು ತಿಳಿಸಲಾಗಿತ್ತು. ಆದರೆ, ಕೆಲವು ಏಜೆನ್ಸಿಗಳು ಮಾತ್ರ ಮಾಹಿತಿ ನೀಡಿವೆ.

ಜಲಮಂಡಳಿ ನಿರ್ವಹಣೆ ಮಾಡುವ ಎಸ್‌ಟಿಪಿಗಳಲ್ಲಿ ಅತ್ಯಾಧುನಿಕ ಯಂತ್ರ ಬಳಸಿ ಸಿಬ್ಬಂದಿ ಸ್ವಚ್ಛತೆ ಮಾಡುತ್ತಾರೆ. ಆದರೆ, ಖಾಸಗಿಯವರು ನಿರ್ಮಿಸಿಕೊಂಡಿರುವ ಎಸ್‌ಟಿಪಿಗಳಲ್ಲಿ ಪೌರ ಸಿಬ್ಬಂದಿಯಿಂದ ಸ್ವಚ್ಛತೆ ಮಾಡಿಸುತ್ತಿದ್ದು, ಇದರಿಂದ ಜೀವಹಾನಿ ಆಗುತ್ತಿದ್ದರೂ ಏಜೆನ್ಸಿಗಳ ವಿವರ ಜಲಮಂಡಳಿ ಬಳಿ ಇರಲಿಲ್ಲ. ಹೀಗಾಗಿ ಸಮಾಜ ಕಲ್ಯಾಣ ಇಲಾಖೆ ಎರಡು ವರ್ಷದ ಹಿಂದೆಯೇ ಜಲಮಂಡಳಿಯ ಹಿರಿಯ ಅಧಿಕಾರಿಗಳ ಸಭೆ ನಡೆಸಿ ಸ್ವಚ್ಛತೆಯಲ್ಲಿ ತೊಡಗಿರುವ ಏಜೆನ್ಸಿಗಳು ಹಾಗೂ ಸಿಬ್ಬಂದಿಯ ವಿವರ ಕಲೆಹಾಕುವಂತೆ ತಾಕೀತು ಮಾಡಿತ್ತು.

ದಂಡ ಪ್ರಯೋಗ ಶುರು: ಖಾಸಗಿ ಒಳಚರಂಡಿ ವ್ಯವಸ್ಥೆ, ಮ್ಯಾನ್‌ಹೋಲ್ ಮತ್ತು ಎಸ್‌ಟಿಪಿ ಘಟಕ ಸ್ವಚ್ಛಗೊಳಿಸುವ ವಾಹನಗಳ ಮಾಲೀಕರು ಮತ್ತು ಏಜೆನ್ಸಿ ಗುರುತಿಸಿ ಮಂಡಳಿಯ ಕಾಯ್ದೆ 1964ರ ಸೆಕ್ಷನ್ 84 ಮತ್ತು 88ರ ಅಡಿಯಲ್ಲಿ ಮಾರ್ಚ್ 7ರ ಒಳಗಾಗಿ ಕಡ್ಡಾಯವಾಗಿ ಜಲಮಂಡಳಿಯ ವಿಭಾಗ ಮಟ್ಟದಲ್ಲಿ ನೋಂದಾಯಿಸಿಕೊಳ್ಳಲು ಸೂಚಿಸಲಾಗಿತ್ತು.

ನಿಯಮಾವಳಿ ಕುರಿತು ಎಲ್ಲ ವಾಣಿಜ್ಯ ಕಟ್ಟಡಗಳು ಮತ್ತು ವಸತಿ ಸಮುಚ್ಚಯಗಳ ಮಾಲೀಕರು ಹಾಗೂ ಅಸೋಸಿಯೇಷನ್‌ಗಳಿಗೆ ಕೂಡಲೇ ಸೂಚನಾ ಪತ್ರವನ್ನು ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿತ್ತು.

ನೋಂದಾಯಿಸಲ್ಪಡದ ಅಥವಾ ಅನಧಿಕೃತ ವ್ಯಕ್ತಿಗಳ ಮೂಲಕ ಸ್ವಚ್ಛತಾ ಕಾರ್ಯ ಕೈಗೊಂಡಾಗ ಅನಾಹುತ ಸಂಭವಿಸಿದಲ್ಲಿ, ಆಯಾ ವಾಣಿಜ್ಯ ಕಟ್ಟಡ, ವಸತಿ ಸಮುಚ್ಚಯ, ಖಾಸಗಿ ಬಡಾವಣೆಗಳ ಮಾಲೀಕರು ಅಥವಾ ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್‌ನವರೇ ನೇರ ಜವಾಬ್ದಾರರಾಗುತ್ತಾರೆ ಎಂದು ತಿಳಿಸಲಾಗಿತ್ತು.



ಜಲಮಂಡಳಿ

ಸೂಚನೆಯ ನಂತರವೂ ಕೆಲವು ಉಪವಿಭಾಗಗಳಲ್ಲಿ ಯಾರೂ ನೋಂದಣಿ ಮಾಡಿಸಿಕೊಂಡಿಲ್ಲ. ಕೆಲವು ಉಪವಿಭಾಗಗಳಲ್ಲಿ ಮಾಹಿತಿ ನೀಡಿದ್ದನ್ನು ಬಿಟ್ಟರೆ ಬೇರೆ ಪ್ರಕ್ರಿಯೆ ಆಗಿಲ್ಲ.

‘ನಿಗದಿತ ಅವಧಿಯೊಳಗೆ ಜಲಮಂಡಳಿಯ ಉಪವಿಭಾಗ ವ್ಯಾಪ್ತಿಯಲ್ಲಿ ಕೆಲವರು ನೋಂದಣಿ ಮಾಡಿಸಿಕೊಂಡು ಮಾಹಿತಿ ಒದಗಿಸಿದ್ದಾರೆ. ಆದರೆ, ನಗರದಲ್ಲಿ ಹೆಚ್ಚಿನ ಏಜೆನ್ಸಿಗಳು ಕಾರ್ಯ ನಿರ್ವಹಿಸುತ್ತಿದ್ದರೂ ನೋಂದಣಿ ಮಾಡಿಸಿಕೊಳ್ಳದೇ ಇರುವುದರಿಂದ ದಂಡ ಪ್ರಯೋಗ ಶುರು ಮಾಡುತ್ತೇವೆ’ ಎಂದು ಜಲಮಂಡಳಿಯ ಪ್ರಧಾನ ಮುಖ್ಯ ಎಂಜಿನಿಯರ್ ಬಿ.ಎಸ್.ದಲಾಯತ್ ತಿಳಿಸಿದರು.

ಅಪಾರ್ಟ್‌ಮೆಂಟ್‌ಗಳಿಗೆ ಮಾಹಿತಿ ಇಲ್ಲ: ಬೆಂಗಳೂರಿನ ಹಲವು ಅಪಾರ್ಟ್‌ಮೆಂಟ್‌ಗಳಲ್ಲಿ ಅನೇಕ ವರ್ಷಗಳಿಂದ ಎಸ್‌ಟಿಪಿ ಘಟಕಗಳನ್ನು ನಿರ್ಮಿಸಿ ನಿರ್ವಹಣೆ ಮಾಡುತ್ತಿದ್ದಾರೆ. ಹೊಸದಾಗಿ ನಿರ್ಮಾಣವಾಗುತ್ತಿರುವ ಅಪಾರ್ಟ್‌ಮೆಂಟ್‌ಗಳಲ್ಲೂ ಎಸ್‌ಟಿಪಿ ಘಟಕಗಳು ಬರುತ್ತಿವೆ.

ಜಲಮಂಡಳಿಯಲ್ಲಿ ಲಭ್ಯ ಇರುವ ಅಂಕಿಅಂಶಗಳ ಪ್ರಕಾರ 29 ಸಾವಿರ ಅಪಾರ್ಟ್‌ಮೆಂಟ್‌ಗಳಿದ್ದು, ಹೆಚ್ಚಿನವರು ಖಾಸಗಿ ಏಜೆನ್ಸಿಗಳ ಸಹಕಾರದೊಂದಿಗೆ ಎಸ್‌ಟಿಪಿ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಖಾಸಗಿ ಬಡಾವಣೆಗಳಲ್ಲೂ ನಿರ್ವಹಣೆ ನಡೆದಿದೆ.

‘ನಮ್ಮಲ್ಲೇ 1,450 ಅಪಾರ್ಟ್‌ಮೆಂಟ್‌ಗಳ ಸಂಪರ್ಕವಿದೆ. ಎಸ್‌ಟಿಪಿ ಹಾಗೂ ಮ್ಯಾನ್‌ಹೋಲ್‌ಗಳನ್ನು ನಿರ್ವಹಣೆ ಮಾಡಿಕೊಳ್ಳುತ್ತಿದ್ದೇವೆ. ಖಾಸಗಿಯವರ ಸಹಕಾರ ಪಡೆದುಕೊಳ್ಳುತ್ತೇವೆ. ಆದರೆ ನಮ್ಮೊಂದಿಗೆ ಯಾರೂ ಮಾತನಾಡಿಲ್ಲ. ಜಲಮಂಡಳಿಯವರು ಪತ್ರವನ್ನೂ ಕಳುಹಿಸಿಲ್ಲ’ ಎಂದು ಅಪಾರ್ಟ್‌ಮೆಂಟ್‌ಗಳ ಅಸೋಸಿಯೇಷನ್ ಕಾರ್ಯದರ್ಶಿ ಕೆ.ಅರುಣ್‌ಕುಮಾರ್ ತಿಳಿಸಿದರು.

ಜೀವ ಹಾನಿ ನಂತರ ಎಚ್ಚೆತ್ತ ಇಲಾಖೆ



ರಾಜ್ಯದಲ್ಲಿ ಒಂದು ದಶಕದ ಅವಧಿಯಲ್ಲಿ 100ಕ್ಕೂ ಹೆಚ್ಚು ಮಂದಿ ಮ್ಯಾನ್ ಹೋಲ್, ಸೆಪ್ಟಿಂಕ್ ಟ್ಯಾಂಕ್, ಒಳಚರಂಡಿ ಸ್ವಚ್ಛತೆಗೆ ಮುಂದಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಬೆಂಗಳೂರಿನಲ್ಲೂ ಈ ಪ್ರಮಾಣ ಹೆಚ್ಚಿದೆ. ಇದಾದ ನಂತರ ಬೆಂಗಳೂರು ಜಲಮಂಡಳಿ, ಸಮಾಜ ಕಲ್ಯಾಣ ಇಲಾಖೆ ಎಚ್ಚೆತ್ತುಕೊಂಡಿದ್ದವು.

ಬೆಂಗಳೂರು ನಗರದಲ್ಲಿ ಖಾಸಗಿ ಸಂಸ್ಥೆಗಳು ನಿರ್ವಹಣೆ ಮಾಡುತ್ತಿರುವ ಎಸ್‌ಟಿಪಿಗಳು ಜಲಮಂಡಳಿ ವ್ಯಾಪ್ತಿಗೆ ಒಳಪಟ್ಟಿಲ್ಲ. ಇದರಿಂದ ಎಸ್‌ಟಿಪಿಗಳು ಹಾಗೂ ಅಲ್ಲಿ ಕೆಲಸ ಮಾಡುವವರ ಸಮೀಕ್ಷೆಯನ್ನೂ ಕೈಗೊಂಡಿಲ್ಲ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದ್ದರು. ಹೀಗಾಗಿ ಮಾಹಿತಿ ಸಂಗ್ರಹಿಸುವ ಪ್ರಯತ್ನ ಶುರುವಾಗಿತ್ತು.

ರೈಲುಗಳ ವೇಳಾಪಟ್ಟಿ ಪರಿಷ್ಕರಣೆ

ಬೆಂಗಳೂರು: ಕಾರ್ಯಾಚರಣೆಯ ಹೊಂದಾಣಿಕೆಗಾಗಿ ಕೆಲವು ರೈಲುಗಳ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ. ಇದು ಏಪ್ರಿಲ್ 24ರಿಂದ ಜಾರಿಗೆ ಬರಲಿದೆ.

ಚಿಕ್ಕಮಗಳೂರು–ಯಶವಂತಪುರ ದೈನಂದಿನ ಎಕ್ಸ್‌ಪ್ರೆಸ್ ರೈಲು ಚಿಕ್ಕಮಗಳೂರಿನಿಂದ ಬೆಳಿಗ್ಗೆ 8.15ರ ಬದಲಿಗೆ 8ಕ್ಕೆ ಹೊರಡಲಿದೆ. ಇದರೊಂದಿಗೆ ಮಧ್ಯಂತರ ನಿಲ್ದಾಣಗಳಿಗೆ ತಲುಪುವ ಸಮಯವನ್ನೂ ಪರಿಷ್ಕರಿಸಲಾಗಿದ್ದು, 15 ನಿಮಿಷ ಮೊದಲೇ ನಿಲ್ದಾಣಗಳಿಗೆ ತಲುಪಿ, ಹೊರಡಲಿದೆ. ಕಣಿವೆಹಳ್ಳಿಗೆ ಬೆಳಿಗ್ಗೆ 8.18/08.19, ಸಖರಾಯಪಟ್ಟಣಕ್ಕೆ 8.31/8.32, ಬಿಸಲೇಹಳ್ಳಿಗೆ 8.43/8.44 ಹಾಗೂ ಕಡೂರು ನಿಲ್ದಾಣಕ್ಕೆ 9.05/9.25ಕ್ಕೆ ರೈಲು ತಲುಪಿ, ನಿರ್ಗಮಿಸಲಿದೆ. ದೇವನೂರು ಮತ್ತು ಯಶವಂತಪುರ ನಿಲ್ದಾಣಗಳ ನಡುವಿನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇಲ್ಲ.

ಯಶವಂತಪುರ–ಚಿಕ್ಕಮಗಳೂರು ದೈನಂದಿನ ಎಕ್ಸ್‌ಪ್ರೆಸ್ ರೈಲು ಚಿಕ್ಕಮಗಳೂರು ನಿಲ್ದಾಣಕ್ಕೆ ರಾತ್ರಿ 8.55ರ ಬದಲಿಗೆ 9.05ಕ್ಕೆ ತಲುಪಲಿದೆ. ಶಿವಮೊಗ್ಗ ಟೌನ್–ಚಿಕ್ಕಮಗಳೂರು ದೈನಂದಿನ ಪ್ಯಾಸೆಂಜರ್ ರೈಲು ರಾತ್ರಿ 9.30ರ ಬದಲಿಗೆ 9.40ಕ್ಕೆ ಚಿಕ್ಕಮಗಳೂರು ನಿಲ್ದಾಣ ತಲುಪಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.



ವಿಕ್ಟೋರಿಯಾ ಆಸ್ಪತ್ರೆಯ ಅರಿವಳಿಕೆ ವಿಭಾಗಕ್ಕೆ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಫೌಂಡೇಷನ್ ಅಲ್ಟ್ರಾಸೌಂಡ್ ಮತ್ತು ಬ್ರಾಂಕೋಸ್ಕೋಪ್ ವೈದ್ಯಕೀಯ ಉಪಕರಣಗಳನ್ನು ಕೊಡುಗೆಯಾಗಿ ನೀಡಿತು. ವಿಕ್ಟೋರಿಯ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ದೀಪಕ್ ಎಸ್.,ಅರಿವಳಿಕೆ ವಿಭಾಗದ ಮುಖ್ಯಸ್ಥೆ ಡಾ.ನೇತ್ರ ಎಸ್.ಎಸ್., ಗೋಕುಲ್ ದಾಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಮಹಂತೇಶ್ ಬಂಗಾರಿ, ಆಡಳಿತ ಮುಖ್ಯಸ್ಥ ಸಿದ್ದೇಶ್ವರಗೌಡ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು

‘ಜಕ್ಕೂರು ಕಾಲೇಜು ಕಟ್ಟಡ ಬೇಗ ಮುಗಿಸಿ’

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಸರ್ಕಾರಿ ಶಾಲೆ ಮತ್ತು ಪದವಿ ಕಾಲೇಜು ಕಟ್ಟಡದ ಕಾಮಗಾರಿಯನ್ನು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪರಿಶೀಲಿಸಿದರು.

‘ಕಟ್ಟಡ ನಿರ್ಮಾಣ ಕಾರಣಕ್ಕೆ ಸರ್ಕಾರಿ ಪ್ರಾಥಮಿಕ ಶಾಲೆಯು ಪ್ರೌಢ ಶಾಲೆ ಕಟ್ಟಡದಲ್ಲಿ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳ ಪಾಠಗಳಿಗೆ ತೊಂದರೆಯಾಗಿದೆ. ಕಾಮಗಾರಿ ಪೂರ್ಣಗೊಳಿಸಲು ಇನ್ನೆಷ್ಟು ವರ್ಷಬೇಕು? ಶೀಘ್ರ ಕಾಮಗಾರಿ ಪೂರ್ಣಗೊಳಿಸಿ, ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು’ ಎಂದು ಸೂಚಿಸಿದರು.

‘ಮುಂದಿನ ಶೈಕ್ಷಣಿಕ ವರ್ಷದ ಆರಂಭದ ವೇಳೆಗೆ ಪದವಿ ಕಾಲೇಜು ಕಟ್ಟಡದ ನೆಲ ಅಂತಸ್ತು ಮತ್ತು ಮೊದಲನೇ ಮಹಡಿಯ ಒಳಭಾಗದ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಇದರಿಂದ ದಾಖಲಾತಿ ಆರಂಭಿಸಿ, ತರಗತಿಗಳನ್ನು ನಡೆಸಲು ಅನುಕೂಲವಾಗುತ್ತದೆ’ ಎಂದರು.

ಹೆಗ್ಗುಂದ ಮಾರಮ್ಮನ ಜಾತ್ರೆ ಇಂದಿನಿಂದ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಹೆಗ್ಗುಂದ ಮಾರಮ್ಮ ಜಾತ್ರೆ ಏ.17ರಿಂದ ಆರಂಭವಾಗಲಿದೆ.


ಹೆಗ್ಗುಂದ ಮಾರಮ್ಮ ದೇವಿ

ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಗಳೊಂದಿಗೆ ಮಾರಮ್ಮನಿಗೆ ವಿಶೇಷ ಪೂಜೆ ನೆರವೇರಿಸಿದ ನಂತರ ದೇವಿಯ ಉತ್ಸವ ಮೂರ್ತಿಯನ್ನು ತಮಟೆ ಹಾಗೂ ಅರೆವಾದ್ಯದೊಂದಿಗೆ ಮೆರವಣಿಗೆಯಲ್ಲಿ ಕರೆದೊಯ್ದು, ಹಳೇ ಊರು ಆಂಜನೇಯನಿಗೆ ಪೂಜೆ ಮಾಡಿಸುತ್ತಾರೆ.

ನರಸೀಪುರದ ವೀರಭದ್ರಾಚಾರ್ ಕುಟುಂಬದವರಿಂದ ಪ್ರಥಮ ಪೂಜೆ ಮಾಡಲಾಗುತ್ತದೆ. ಅಲ್ಲಿಂದ ಸುಂದರ್ ರಾವ್ ಮನೆಯಲ್ಲಿ ಪೂಜೆ ನಡೆದು, ಇಮಚೇನಹಳ್ಳಿ, ಇಮಚೇನಹಳ್ಳಿ ಪಾಳ್ಯ, ಶಾಂತೇಗೌಡನ ಪಾಳ್ಯ, ಅಯ್ಯನತೋಟ ಗ್ರಾಮಗಳಿಗೆ ಹೋಗಿ ದೇವಾಲಯಗಳು ಹಾಗೂ ಮನೆ ಮನೆಗಳಲ್ಲಿ ಪೂಜೆ ಮಾಡಿಸಲಾಗುತ್ತದೆ. ರಾತ್ರಿ ಗೋವಿಂದಪುರದ ಪಟಾಲಮ್ಮ ದೇವಿಯ ಉಪಾಹಾರಕ್ಕೆ ಮಾರಮ್ಮ ದೇವಿಯನ್ನು ಕರೆದೊಯ್ಯಲಾಗುತ್ತದೆ.

ಐದು ದಿನ ಮಡ್ಲಕ್ಕಿ ಕಟ್ಟಿಸಿಕೊಂಡು ಪೂಜೆ ಮಾಡಿಸಿಕೊಳ್ಳುವ ಮಾರಮ್ಮನಿಗೆ ಮಂಗಳವಾರದಂದು ಎಲ್ಲಾ ಹಳ್ಳಿಗಳ ಜನರು ತಂಬಿಟ್ಟಿನ ಆರತಿ ಮಾಡುತ್ತಾರೆ. ದೇವಾಲಯದ ಮುಂದೆ ಕೊಂಡ ಹಾಕಲಾಗುತ್ತದೆ. ಹೆಂಗೆಳೆಯರು ಕೊಂಡದಲ್ಲಿ ಆರತಿ ತೆಗೆದುಕೊಂಡು ಹೋಗುತ್ತಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಬಿಟಿಸಿ: ಬೇಸಿಗೆ ರೇಸ್‌ಗಳ ಹಾದಿ ಸುಗಮ

ಬೆಂಗಳೂರು: ಕುದುರೆಗಳಿಗೆ ಗ್ಲ್ಯಾಂಡರ್ಸ್ ಸೋಂಕು ಕಾಣಿಸಿಕೊಂಡ ಕಾರಣ ಬಿಟಿಸಿ ಕೇಂದ್ರವಾಗಿಸಿ ಎರಡು ಕಿ.ಮೀ. ವ್ಯಾಪ್ತಿಯಲ್ಲಿ ವಿಧಿಸಲಾಗಿದ್ದ ನಿರ್ಬಂಧವನ್ನು ರಾಜ್ಯ ಸರ್ಕಾರ ಹಿಂಪಡೆದಿದೆ. ಹೀಗಾಗಿ ಬೇಸಿಗೆ ರೇಸ್‌ಗಳ ಹಾದಿ ಸುಗಮವಾಗಿದೆ.

ಮೇ 1ರಂದು ಬೇಸಿಗೆ ರೇಸ್‌ಗಳು ಆರಂಭವಾಗಲಿವೆ.

ಡಿ. 19ರಂದು ನಿರ್ಬಂಧ ಜಾರಿಗೆ ಬಂದಿತ್ತು. ನಿರ್ಬಂಧ ಹಿಂಪಡೆದಿರುವ ಬಗ್ಗೆ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಅಧೀನ ಕಾರ್ಯದರ್ಶಿ ಚಂದ್ರಕಲಾ ಅವರು ಏಪ್ರಿಲ್ 15ರಂದು ಅಧಿಸೂಚನೆ ಹೊರಡಿಸಿದ್ದಾರೆ.

ರನ್ಯಾ ರಾವ್ ಬಂಧನ ಎತ್ತಿ ಹಿಡಿದ ‘ಸುಪ್ರೀಂ’


ರನ್ಯಾ ರಾವ್

ನವದೆಹಲಿ: ಚಿನ್ನ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ಆರ್ಥಿಕ ಗುಪ್ತಚರ ಬ್ಯೂರೊ (ಸಿಇಐಬಿ) ಕನ್ನಡ ನಟ ಹರ್ಷವರ್ಧಿನಿ ಅಲಿಯಾಸ್ ರನ್ಯಾ ರಾವ್ ಅವರನ್ನು ಬಂಧಿಸಿರುವುದನ್ನು ಸುಪ್ರೀಂ ಕೋರ್ಟ್ ಗುರುವಾರ ಎತ್ತಿ ಹಿಡಿದಿದೆ.

ನ್ಯಾಯಮೂರ್ತಿಗಳಾದ ಎಂ.ಎಂ.ಸುಂದ್ರೇಶ ಹಾಗೂ ಎನ್.ಕೋಟೀಶ್ವರ ಸಿಂಗ್ ಅವರು ಇದ್ದ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

ರನ್ಯಾ ರಾವ್ ಬಂಧನ ಪ್ರಶ್ನಿಸಿ ಅವರ ತಾಯಿ ಹಾಗೂ ಮತ್ತೊಬ್ಬ ಆರೋಪಿಯಾದ ಸಾಹಿಲ್ ಜೈಲ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಪೀಠವು ವಜಾಗೊಳಿಸಿ, ಈ ಆದೇಶ ನೀಡಿದೆ.

₹23.63 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ


6 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ವಿಶೇಷ ಕಾರ್ಯಾಚರಣೆ, 10 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ನ್ಯೂ ಟೌನ್, ದೇವರ ಜೀವನಹಳ್ಳಿ, ಬಾಣಸವಾಡಿ, ಕೋರಮಂಗಲ, ಬೊಮ್ಮನಹಳ್ಳಿ ಮತ್ತು ಪುಲಕೇಶಿನಗರ ಠಾಣಾ ವ್ಯಾಪ್ತಿಯಲ್ಲಿ ನಡೆದ ಡ್ರಗ್ಸ್ ವಿರುದ್ಧದ ಕಾರ್ಯಾಚರಣೆಯಲ್ಲಿ ವಿದೇಶ, ಹೊರ ರಾಜ್ಯ ಹಾಗೂ ಸ್ಥಳೀಯ 10 ಡ್ರಗ್ ಪೆಡ್ಲರ್‌ಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ 6 ಕೆ.ಜಿ. ಎಂಡಿಎಂಎ, 1 ಕೆ.ಜಿ. 151 ಗ್ರಾಂ ಕೊಕೇನ್, 21 ಕೆ.ಜಿ. ಗಾಂಜಾ, 19 ಗ್ರಾಂ ಎಕ್ಸ್‌ಟೆಸಿ ಪಿಲ್ಸ್ ವಶಕ್ಕೆ ಪಡೆಯಲಾಗಿದೆ. ವಶಕ್ಕೆ ಪಡೆದ ಮಾದಕ ವಸ್ತುಗಳ ಮೌಲ್ಯ ₹23.63 ಕೋಟಿ ಎಂಬುದಾಗಿ ಅಂದಾಜಿಸಲಾಗಿದೆ.

ಯಲಹಂಕ ನ್ಯೂಟೌನ್ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ನೈಜೀರಿಯಾದ ಪೀಸ್ ಗೋಡಿಯಾ (27), ಬಾಕುಲ ಒಮಟಾಯೊ (29) ಎಂಬುವವರನ್ನು ಬಂಧಿಸಿದ್ದಾರೆ.


ಸೈಯದ್


ಪೀಸ್ ಗೋಡಿಯಾ


ಬಾಕುಲ ಒಮಟಾಯೊ

ಬಂಧಿತರಿಂದ ₹11.72 ಕೋಟಿ ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆಯಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಕೃಷ್ಣನದೊಡ್ಡಿ ಗ್ರಾಮದಲ್ಲಿ ಬಾಡಿಗೆಗೆ ಮನೆ ಪಡೆದು ಅಲ್ಲಿ ಡ್ರಗ್ಸ್ ದಾಸ್ತಾನು ಮಾಡಿಕೊಂಡಿದ್ದರು.


ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಮಾದಕ ವಸ್ತುಗಳು


ಅಪರಾಧ ಸುದ್ದಿ

ಮಾರ್ಚ್ 26ರಂದು ನಡೆದಿದ್ದ ಕಾರ್ಯಾಚರಣೆಯಲ್ಲಿ ಸ್ಯಾಮ್ಯುವೆಲ್ ಎಂಬಾತನನ್ನು ಬಂಧಿಸಿ, ವಿಚಾರಣೆ ನಡೆಸಲಾಗಿತ್ತು. ವಿಚಾರಣೆ ವೇಳೆ ಆತ ನೀಡಿದ ಸುಳಿವು ಆಧರಿಸಿ ನೈಜೀರಿಯಾದ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ದೇವರ ಜೀವನಹಳ್ಳಿ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ ಸೈಯದ್ (40) ಎಂಬಾತನನ್ನು ಬಂಧಿಸಿದ್ದಾರೆ. ಆರೋಪಿಯಿಂದ ₹5.72 ಕೋಟಿ ಮೌಲ್ಯದ ಕೊಕೇನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬಾಣಸವಾಡಿ, ಕೋರಮಂಗಲ, ಬೊಮ್ಮನಹಳ್ಳಿ ಹಾಗೂ ಪುಲಕೇಶಿನಗರ ಠಾಣೆಯ ಪೊಲೀಸರು ಕಾರ್ಯಾಚರಣೆಯಲ್ಲಿ ತಮಿಳುನಾಡಿನ ರಾಜನ್ (33), ಸರವಣನ್(38), ಒಡಿಶಾದ ಚಿಂಟೊ ಸ್ವೈನ್ (24), ದೀಪಕ್‌ಕುಮಾರ್ ಸಿಂಗ್ (27), ಶಂಕರ ಸಾಹು (26) ಹಾಗೂ ರಾಜೇಂದ್ರ (27) ಎಂಬ ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳು, ನಗರದ ಪ್ರತ್ಯೇಕ ಕಡೆಗಳಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದರು. ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಬಂಧಿತ ವಿದೇಶಿ ಪ್ರಜೆಗಳು ಕಡಿಮೆ ಹಣಕ್ಕೆ ವಿವಿಧ ಮಾದರಿಯ ಡ್ರಗ್ಸ್ ಖರೀದಿಸಿ ಬೆಂಗಳೂರಿನ ಕಾಲೇಜು ವಿದ್ಯಾರ್ಥಿಗಳು, ಐ.ಟಿ ಉದ್ಯೋಗಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಇತರೆ ಆರೋಪಿಗಳೂ ಇದೇ ಮಾದರಿಯಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವ ವಿಚಾರ ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

‘ಶುದ್ಧ ತಿಂಡಿ’ ಹೋಟೆಲ್‌ನಲ್ಲಿ ಬೆಂಕಿ ಅವಘಡ

ಬೆಂಗಳೂರು: ನೈಸ್ ರಸ್ತೆಯ ಸೋಂಪುರ ವೃತ್ತದಲ್ಲಿ ಇರುವ ‘ಶುದ್ಧ ತಿಂಡಿ’ ಹೋಟೆಲ್‌ನಲ್ಲಿ ಗುರುವಾರ ಮುಂಜಾನೆ ಬೆಂಕಿ ಅವಘಡ ಸಂಭವಿಸಿದ್ದು, ಹೋಟೆಲ್ ಬಹುತೇಕ ಸುಟ್ಟುಹೋಗಿದೆ. ಕಾರ್ಮಿಕರು ಹೊರಗೆ ಓಡಿಬಂದು, ಅಪಾಯದಿಂದ ಪಾರಾಗಿದ್ದಾರೆ.

ಮಾರ್ಚ್ ಮೊದಲ ವಾರ ಈ ಹೋಟೆಲ್ ಆರಂಭವಾಗಿತ್ತು. ಅಡುಗೆ ಕೋಣೆಯಲ್ಲಿ ಉಂಟಾದ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ.ಪರಿಶೀಲನೆ ನಡೆಸಲಾಗುತ್ತಿದೆ. ಬೆಂಕಿಯಿಂದ ಪೀಠೋಪಕರಣ, ದಿನಸಿ ಸಾಮಗ್ರಿಗಳು ಸುಟ್ಟುಹೋಗಿವೆ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ತಿಳಿಸಿದರು.

ಬಸ್ ಪಾರ್ಕಿಂಗ್ ಸ್ಥಳವನ್ನು ಉದ್ಘಾಟಿಸಿದ ಸಾರಿಗೆ ಸಚಿವ



ಬೆಂಗಳೂರು: ಕೆಎಸ್‌ಆರ್‌ಟಿಸಿಯ ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್-1ರಲ್ಲಿ ₹3.29 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾದ ಬಸ್ ಪಾರ್ಕಿಂಗ್ ಸ್ಥಳವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಗುರುವಾರ ಉದ್ಘಾಟಿಸಿದರು.

‘ಬಸ್ ನಿಲ್ದಾಣದಲ್ಲಿನ ಟರ್ಮಿನಲ್-1ರ ಬಳಿಯಿರುವ ವಿಶ್ರಾಂತಿ ಗೃಹಕ್ಕೆ ಹೊಂದಿಕೊಂಡಂತೆ ಇರುವ ಸ್ಥಳವು ಗುಂಡಿಗಳಿಂದ ತುಂಬಿ, ಮಳೆ ಬಂದ ಸಂದರ್ಭದಲ್ಲಿ ಮಳೆಯ ನೀರು ತುಂಬಿಕೊಂಡು ಪ್ರಯಾಣಿಕರಿಗೆ ಹಾಗೂ ಇಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ತೊಂದರೆ ಉಂಟಾಗುತ್ತಿತ್ತು. ಇದನ್ನು ಕಂಡು ಈ ಸ್ಥಳ ಅಭಿವೃದ್ಧಿಪಡಿಸಲು ಸೂಚಿಸಿದ್ದೆ’ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಎರಡೂವರೆ ಎಕರೆ ಪ್ರದೇಶವನ್ನು ವಾಹನ ನಿಲುಗಡೆಗೆ ಅಭಿವೃದ್ಧಿಪಡಿಸಲಾಗಿದ್ದು, 100 ಬಸ್‌ಗಳನ್ನು ನಿಲುಗಡೆ ಮಾಡಬಹುದು. 11 ವಿದ್ಯುತ್ ದೀಪದ ಕಂಬಗಳಿದ್ದು, ವಿದ್ಯುತ್ ಪ್ಯಾನಲ್ ಕೊಠಡಿಯನ್ನು ಕೂಡ ನಿರ್ಮಾಣ ಮಾಡಲಾಗಿದೆ. ವಾಯುವ್ಯ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ಅಧಿಕಾರಿಗಳು ಉಪಸ್ಥಿತರಿದ್ದರು.

ಸಂವಿಧಾನ ರತ್ನ ಪ್ರಶಸ್ತಿ- 2026


ಬೆಂಗಳೂರಿನ ಅಂಬೇಡ್ಕರ್ ಸೇನೆಯ ವತಿಯಿಂದ ಹಮ್ಮಿಕೊಂಡಿದ್ದ ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಸಂವಿಧಾನ ರತ್ನ ಪ್ರಶಸ್ತಿ- 2026 ಪ್ರದಾನ ಮಾಡಲಾಯಿತು. ಶ್ರೀ ಸಾಯಿ ಸಂಸ್ಥಾನ ಮಠದ ಪೀಠಾಧಿಪತಿ ಗುರುಮೂರ್ತಿ ಗುರೂಜಿ, ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, ಅಂಬೇಡ್ಕರ್ ಸೇನೆ ರಾಜ್ಯಾಧ್ಯಕ್ಷ ಪಿ.ಮೂರ್ತಿ, ಬಿಬಿಎಂಪಿ ಮಾಜಿ ಸದಸ್ಯರಾದ ಮೋಹನ್ ಕುಮಾರ್, ಪಲ್ಲವಿ ಚನ್ನಪ್ಪ, ಮುಖಂಡರಾದ ಸಿದ್ಧಾರ್ಥ್, ಜಗದೀಶ್, ಮುರುಗೇಶ್, ಜೈ ಭೀಮ್ ಅಂಬೇಡ್ಕರ್ ಸೇನೆ ರಾಜ್ಯಾಧ್ಯಕ್ಷ ಪಿ. ಚಲುವರಾಜ, ಕರ್ನಾಟಕ ಯುವ ಸೇನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಾಮ್ರಾಟ್ ಮಂಜು ಉಪಸ್ಥಿತರಿದ್ದರು

₹1.25 ಕೋಟಿ ಮೌಲ್ಯದ ಮೊಬೈಲ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ವಿಭಾಗದ 14 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಳೆದುಕೊಂಡಿದ್ದ ಹಾಗೂ ಕಳ್ಳತನವಾಗಿದ್ದ ₹1.25 ಕೋಟಿ ಮೌಲ್ಯದ 385 ಮೊಬೈಲ್ ಫೋನ್‌ಗಳನ್ನು ‘ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್’ (ಸಿಇಐಆರ್) ಪೋರ್ಟಲ್ ನೆರವಿನಿಂದ ಪೊಲೀಸರು ಪತ್ತೆಹಚ್ಚುವಲ್ಲಿ ಯಶಸ್ವಿ ಆಗಿದ್ದಾರೆ.

ಮಾರ್ಚ್ ತಿಂಗಳಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಆರೋಪಿಗಳಿಂದ ಮೊಬೈಲ್ ಫೋನ್ ಜಪ್ತಿ ಮಾಡಿಕೊಳ್ಳಲಾಗಿದೆ.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು ‘ಇ-ಲಾಸ್ಟ್’ ಆ್ಯಪ್ ಹಾಗೂ ಕೇಂದ್ರ ಸರ್ಕಾರ ರೂಪಿಸಿರುವ ‘ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್’ ಪೋರ್ಟಲ್‌ನಲ್ಲಿ ದಾಖಲು ಮಾಡಲಾಗುತ್ತದೆ. ಪೂರ್ವ ವಿಭಾಗದ ಪೊಲೀಸರು ತಾಂತ್ರಿಕ ಸುಳಿವು ಆಧರಿಸಿ ತನಿಖೆ ನಡೆಸಿ, ಮೊಬೈಲ್ ಪತ್ತೆ ಮಾಡಿ, ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ.



ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಮೊಬೈಲ್ ಫೋನ್

ಬಾಣಸವಾಡಿ 87, ಜೆ.ಬಿ ನಗರ 81, ಗೋವಿಂದಪುರ 35, ಕೆ.ಜಿ ಹಳ್ಳಿ 30, ಹಲಸೂರು 30, ಡಿ.ಜೆ ಹಳ್ಳಿ 29, ಹೆಣ್ಣೂರು 19, ಕಮರ್ಷಿಯಲ್ ಸ್ಟ್ರೀಟ್ 16, ಪುಲಕೇಶಿನಗರ 15, ಇಂದಿರಾನಗರ 12, ಆರ್.ಎಂ ನಗರ 10, ಬೈಯಪ್ಪನಹಳ್ಳಿ 8, ಶಿವಾಜಿನಗರ 8, ಭಾರತಿನಗರ ಠಾಣೆಯ ಪೊಲೀಸರು 5 ಮೊಬೈಲ್ ಫೋನ್ ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

ಪೂರ್ವವಿಭಾಗದ ಡಿಸಿಪಿ ವಿಕ್ರಂ ಅಮಟೆ ಅವರ ಮಾರ್ಗದರ್ಶನದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಮೊಬೈಲ್ ಫೋನ್‌ಗಳನ್ನು ವಾರಸುದಾರರಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆ ಆರಂಭವಾಗಿದೆ ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಎ.ಎನ್.ಕಾಂತಮ್ಮ



ಮಧುಗಿರಿ (ತುಮಕೂರು): ತಾಲ್ಲೂಕಿನ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶೆ ಎ.ಎನ್. ಕಾಂತಮ್ಮ(43) ಹೃದಯಾಘಾತದಿಂದ ಗುರುವಾರ ಲೋಕೋಪಯೋಗಿ ಇಲಾಖೆ ವಸತಿ ಗೃಹದಲ್ಲಿ ನಿಧನರಾದರು. 2025ರಿಂದ ಮಧುಗಿರಿಯಲ್ಲಿ ನ್ಯಾಯಾಧೀಶರಾಗಿದ್ದ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಅಂಚೆದೊಡ್ಡಿಯ ಕಾಂತಮ್ಮ ಅವಿವಾಹಿತರಾಗಿದ್ದರು.

ಕೆ.ಚನ್ನೇಗೌಡ



ಮಂಡ್ಯ: ತಾಲ್ಲೂಕಿನ ಕೀಲಾರ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರ ಕೆ.ಚನ್ನೇಗೌಡ (99) ಅವರು ಗುರುವಾರ ನಿಧನರಾದರು.

ಮಹಾತ್ಮ ಗಾಂಧೀಜಿ ಅವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಸೆರೆಮನೆ ವಾಸ ಅನುಭವಿಸಿದ್ದರು. ಕೆ.ವಿ. ಶಂಕರಗೌಡರು ಸ್ಥಾಪಿಸಿದ್ದ ರೈತರ ಸೊಸೈಟಿಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದರು. ಅವರಿಗೆ ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದಾರೆ. ಸರ್ಕಾರಿ ಗೌರವದೊಂದಿಗೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ಪ್ರತ್ಯೇಕ ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಾಮಾಕ್ಷಿಪಾಳ್ಯ ಹಾಗೂ ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಇಬ್ಬರು ಎ.ಸಿ ಮೆಕ್ಯಾನಿಕ್‌ಗಳು ಹಾಗೂ ಯುವತಿ ಮೃತಪಟ್ಟಿದ್ದಾರೆ.

ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸ್ಕೂಟಿ ಹಾಗೂ ಟೆಂಪೊ ಟ್ರಾವೆಲರ್ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಎ.ಸಿ ಮೆಕ್ಯಾನಿಕ್‌ಗಳಾದ ಸೋಮಣ್ಣ (19), ಪ್ರವೀಣ್ (22) ಮೃತಪಟ್ಟಿದ್ದಾರೆ. ಇಬ್ಬರೂ ಕಲಬುರಗಿ ಜಿಲ್ಲೆಯವರು. ನಗರದ ಉಲ್ಲಾಳ ಉಪನಗರದಲ್ಲಿ ನೆಲಸಿದ್ದರು.

ಬುಧವಾರ ಎ.ಸಿ ರಿಪೇರಿ ಕೆಲಸಕ್ಕೆಂದು ಮನೆಯೊಂದಕ್ಕೆ ತೆರಳಿದ್ದರು. ಕೆಲಸ ಮುಗಿಸಿಕೊಂಡು ಅಂಜನಾನಗರದ ಮೂಲಕ ಈಸ್ಟ್ ವೆಸ್ಟ್ ಕಾಲೇಜು ರಸ್ತೆಯಲ್ಲಿ ಉಲ್ಲಾಳ ಉಪನಗರಕ್ಕೆ ಸ್ಕೂಟಿಯಲ್ಲಿ ಬರುತ್ತಿದ್ದರು. ಎದುರಿಗೆ ವೇಗವಾಗಿ ಬರುತ್ತಿದ್ದ ಟೆಂಪೊ ಟ್ರಾವೆಲರ್ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾರೆ. ಇಬ್ಬರೂ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಟಿ.ಟಿ ವಾಹನದ ಚಾಲಕ ಸಹ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕೆಲಸಕ್ಕೆಂದು ಬೆಂಗಳೂರಿಗೆ ಬಂದಿದ್ದರು. ಎಸಿ ರಿಪೇರಿ ಕೆಲಸ ಮಾಡುತ್ತಾ ಜೀವನ ನಡೆಸುತ್ತಿದ್ದರು. ಅಪಘಾತದಲ್ಲಿ ಇಬ್ಬರು ಯುವಕರು ಮೃತಪಟ್ಟಿದ್ದಾರೆ’ ಎಂದು ಕುಟುಂಬಸ್ಥರು ಕಣ್ಣೀರಾದರು.

ಕೆಲಸ ಮುಗಿಸಿಕೊಂಡು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಯುವತಿಗೆ ಕೊಡತಿ ಗ್ರಾಮದ ಬಳಿ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಯುವತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿಯ ಹೊಸ ರೋಡ್ ನಿವಾಸಿ ಯಶಸ್ವಿನಿ (27) ಮೃತಪಟ್ಟವರು.

ಡಾಟಾ ಎಂಟ್ರಿ ಆಪರೇಟರ್ ಆಗಿ ಯಶಸ್ವಿನಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿಕೊಂಡು ಬುಧವಾರ ರಾತ್ರಿ 7ರ ಸುಮಾರಿಗೆ ಮನೆಗೆ ತೆರಳುತ್ತಿದ್ದರು. ಆ ಸಂದರ್ಭದಲ್ಲಿ ವೇಗವಾಗಿ ಬಂದ ವಾಹನವು ಡಿಕ್ಕಿ ಹೊಡೆದಿದೆ. ಚಾಲಕ ವಾಹನವನ್ನು ನಿಲುಗಡೆ ಮಾಡದೇ ತೆರಳಿದ್ದಾನೆ. ವಾಹನ ಚಾಲಕನ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹35 ಲಕ್ಷ ಮೌಲ್ಯದ 1,026 ಬಂಡಲ್ ವಿದೇಶಿ ಸಿಗರೇಟ್

ವಿದೇಶಿ ಸಿಗರೇಟ್ ವಶ, ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗಡಿ ಹಾಗೂ ಗೋದಾಮುಗಳಲ್ಲಿ ವಿದೇಶಿ ಸಿಗರೇಟ್‌ಗಳನ್ನು ದಾಸ್ತಾನು ಮಾಡಿಕೊಂಡು ಮಾರಾಟ ಮಾಡುತ್ತಿದ್ದ ಇಬ್ಬರನ್ನು ಉಪ್ಪಾರಪೇಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಡುಗೋಡಿಯ ಶಿವಕುಮಾರ್ ಹಾಗೂ ಕಾಟನ್‌ಪೇಟೆಯ ಮೊಹಮ್ಮದ್ ಅತೀಕ್ ಬಂಧಿತರು.

ಗಾಂಧಿನಗರದ ಐದನೇ ಮುಖ್ಯರಸ್ತೆಯ ತ್ರಿಭುವನ್ ಕಟ್ಟಡದಲ್ಲಿ ಅಂಗಡಿ ಹಾಗೂ ಗೋದಾಮಿನಲ್ಲಿ ಆರೋಪಿಗಳು ನಿಷೇಧಿತ ವಿದೇಶಿ ಸಿಗರೇಟ್ ದಾಸ್ತಾನು ಮಾಡಿಕೊಂಡಿದ್ದರು. ಖಚಿತ ಮಾಹಿತಿ ಆಧರಿಸಿ, ಅಂಗಡಿ- ಗೋದಾಮುಗಳ ಮೇಲೆ ದಾಳಿ ನಡೆಸಿ ₹35 ಲಕ್ಷ ಮೌಲ್ಯದ 1,026 ಬಂಡಲ್ ವಿದೇಶಿ ಸಿಗರೇಟ್ ವಶಕ್ಕೆ ಪಡೆಯಲಾಗಿದೆ. ಇಬ್ಬರನ್ನು ಬಂಧಿಸಲಾಗಿದೆ. ಆರೋಪಿಗಳ ವಿರುದ್ಧ ‘ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆ’ (ಕೋಟ್ಪಾ) ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ತಲಘಟ್ಟಪುರ ಠಾಣೆ ಪೊಲೀಸರ ಕಾರ್ಯಾಚರಣೆ: ಅಕ್ರಮವಾಗಿ ಇ-ಸಿಗರೇಟ್‌ಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಬಂಧಿಸಿರುವ ತಲಘಟ್ಟಪುರ ಠಾಣೆ ಪೊಲೀಸರು, ₹10 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.



ಉಪ್ಪಾರಪೇಟೆ ಠಾಣೆಯ ಪೊಲೀಸರು ವಶಕ್ಕೆ ಪಡೆದ ವಿದೇಶಿ ಸಿಗರೇಟ್‌ಗಳು

ಬಂಧಿತ ಆರೋಪಿ, ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕಾಲೇಜೊಂದರ ಹಿಂಭಾಗದ ಖಾಲಿ ಜಾಗದಲ್ಲಿ ಇ-ಸಿಗರೇಟ್‌ಗಳನ್ನು ಕಾರಿನಲ್ಲಿ ತಂದು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ. ಈ ಬಗ್ಗೆ ಖಚಿತ ಮಾಹಿತಿ ಪಡೆದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಕೃತ್ಯಕ್ಕೆ ಬಳಸಿದ ಒಂದು ಕಾರು, ₹4 ಸಾವಿರ ನಗದು, 420 ಇ-ಸಿಗರೇಟ್‌ಗಳು, ಇಲವರ್ಡ್ ಕಂಪನಿಯ 20 ಇ-ಸಿಗರೇಟ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಇ-ಸಿಗರೇಟ್ ಆರೋಗ್ಯಕ್ಕೆ ಮಾರಕ ಎಂದು ಕೇಂದ್ರ ಸರ್ಕಾರವು ಹಿಂದೆಯೇ ನಿಷೇಧ ಮಾಡಿತ್ತು. ಆದರೂ ಆರೋಪಿಗಳು ಹೊರ ರಾಜ್ಯದಿಂದ ಇ-ಸಿಗರೇಟ್, ಅದರ ಲಿಕ್ವಿಡ್, ಪಾಡ್, ಬ್ಯಾಟರಿ ಹಾಗೂ ಇತರೆ ಬಿಡಿಭಾಗಗಳನ್ನು ತಂದು ಮಾರಾಟ ಮಾಡುತ್ತಿರುವುದು ನಗರದಲ್ಲಿ ಕಂಡುಬರುತ್ತಿದೆ. ಈ ಹಿಂದೆಯೂ ನಗರದ ಕುಂಬಾರಪೇಟೆ ಗೋದಾಮಿನ ಮೇಲೆ ದಾಳಿ ನಡೆಸಿ, ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಮನೆಗೆ ನುಗ್ಗಿ ಆಭರಣ ದರೋಡೆ: ಸೆರೆ



ಮನೆಯ ಬಾಗಿಲಿಗೆ ಹಾಕಿದ್ದ ಬೀಗ ಒಡೆದು ಚಿನ್ನದ ಆಭರಣ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ತಿಲಕನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹35 ಲಕ್ಷ ಮೌಲ್ಯದ 240 ಗ್ರಾಂ ಚಿನ್ನದ ಆಭರಣ ಹಾಗೂ 89 ಗ್ರಾಂ ಬೆಳ್ಳಿಯ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಜಯನಗರ 4ನೇ ‘ಟಿ’ ಬ್ಲಾಕ್ ನಿವಾಸಿಯೊಬ್ಬರು ಮನೆಯ ಬಾಗಿಲಿಗೆ ಬೀಗ ಹಾಕಿ ಅಂಗಡಿಗೆ ತೆರಳಿದ್ದರು. ಸ್ವಲ್ಪ ಸಮಯದ ನಂತರ ಅವರ ತಂದೆ ಮನೆಗೆ ಬಂದಾಗ ಗೇಟ್ ಹಾಗೂ ಮನೆ ಬಾಗಿಲು ತೆರೆದಿತ್ತು. ಒಳಗೆ ಹೋಗಿ ನೋಡಿದಾಗ ಬೀರುವಿನಲ್ಲಿ ಇಟ್ಟಿದ್ದ 423 ಗ್ರಾಂ ಚಿನ್ನಾಭರಣ, 110 ಗ್ರಾಂ ಬೆಳ್ಳಿ ವಸ್ತುಗಳು ಮತ್ತು ₹50 ಸಾವಿರ ಹಣ ಕಳವು ಆಗಿರುವುದು ಕಂಡುಬಂದಿತ್ತು. ಈ ಬಗ್ಗೆ ಮನೆ ಮಾಲೀಕರು ತಿಲಕನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು ತಾಂತ್ರಿಕ ಕಾರ್ಯಾಚರಣೆ ನಡೆಸಿದ್ದರು. ಇತ್ತೀಚೆಗೆ ಬಾಣಸವಾಡಿಯ ಹೋಟೆಲ್‌ವೊಂದರ ಬಳಿ ಅನುಮಾನಾಸ್ಪದವಾಗಿ ನಿಂತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಮನೆಗಳ್ಳತನ ಮಾಡಿರುವ ಬಗ್ಗೆ ತಿಳಿಸಿದ್ದ. ಗಿರಿನಗರ ಹಾಗೂ ಕೆ.ಆರ್. ಪುರದ ಚಿನ್ನಾಭರಣ ಅಂಗಡಿಗಳಲ್ಲಿ ಗಿರವಿ ಇಟ್ಟಿದ್ದ ಚಿನ್ನಾಭರಣ, ರಾಮಮೂರ್ತಿನಗರದ ಪಾರ್ಕ್‌ವೊಂದರ ಬಳಿ ನಿಲ್ಲಿಸಿದ್ದ ದ್ವಿಚಕ್ರ ವಾಹನದ ಡಿಕ್ಕಿಯಲ್ಲಿ ಇಟ್ಟಿದ್ದ ಆಭರಣಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಪತಿರಾಯನ ಅಚ್ಚರಿಯ ಆರೋಪ!

ಬೆಂಗಳೂರು: ‘ಹೆಂಡತಿ ನನ್ನನ್ನು ಮನೆಯ ಮೆಟ್ಟಿಲುಗಳ ಮೇಲಿಂದ ಕೆಳಗೆ ತಳ್ಳಿ ಕೊಲೆಗೆ ಯತ್ನಿಸಿದ್ದಾಳೆ’ ಎಂದು ಆರೋಪಿಸಿ 30 ವರ್ಷದ ಪತಿರಾಯನೊಬ್ಬ ತನ್ನ ಪತ್ನಿ ಮತ್ತು ಅವರ ಕುಟುಂಬದ ಏಳು ಸದಸ್ಯರ ವಿರುದ್ಧ ಸಲ್ಲಿಸಿದ್ದ ಕ್ರಿಮಿನಲ್ ಪ್ರಕರಣದ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ 26 ವರ್ಷದ ಮಹಿಳೆ (ಪತ್ನಿ) ಮತ್ತು ಆಕೆಯ ಕುಟುಂಬದ 7 ಸದಸ್ಯರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿದಾರರ ವಿರುದ್ಧದ ವಿಚಾರಣೆಗೆ ಮಧ್ಯಂತರ ತಡೆ ಆದೇಶ ನೀಡಿತು.

ವಿಚಾರಣೆ ವೇಳೆ ಪತಿರಾಯ ಖುದ್ದು ವಾದ ಮಂಡಿಸಿ, ‘ನನ್ನನ್ನು ಕೊಲೆ ಮಾಡಲು ಯತ್ನಿಸಿದ ಘಟನೆಯಲ್ಲಿ ನನ್ನ ಎಡಗೈಗೆ ತೀವ್ರ ಗಾಯವಾಗಿತ್ತು. ಮತ್ತೊಮ್ಮೆ ಆಕೆಯ ಕುಟುಂಬದ ಎಂಟು ಜನರು ನನ್ನ ಮನೆಗೆ ಅತಿಕ್ರಮ ಪ್ರವೇಶ ಮಾಡಿ ನನ್ನನ್ನು ಸಾಯಿಸಲು ಯತ್ನಿಸಿದ್ದಾರೆ. ಪೊಲೀಸರು ಸರಿಯಾಗಿ ತನಿಖೆ ನಡೆಸಿಲ್ಲ. ಸೂಕ್ತ ದೋಷಾರೋಪ ಪಟ್ಟಿ ಸಲ್ಲಿಸಿಲ್ಲ’ ಎಂದು ಆಕ್ಷೇಪಿಸಿದರು.

ಇದಕ್ಕೆ ಅರ್ಜಿದಾರರ ಪರ ವಕೀಲರು, ‘ಪತಿರಾಯ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅವರು ಪತ್ನಿಯ ವಿರುದ್ಧ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಸೇರಿದಂತೆ ವಿವಿಧ ಅಪರಾಧಗಳಡಿ ಕ್ರಿಮಿನಲ್ ದೂರು ದಾಖಲಿಸಿದ್ದಾರೆ’ ಎಂದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಪತಿರಾಯರ ಆಕ್ಷೇಪಣೆಗೆ ಸಖೇದಾಶ್ಚರ್ಯ ವ್ಯಕ್ತಪಡಿಸಿತಲ್ಲದೆ, ಅರ್ಜಿದಾರರ ವಿರುದ್ಧದ ವಿಚಾರಣೆಗೆ ತಡೆ ನೀಡಿ ಆದೇಶಿಸಿತು.

ಔಷಧ ಸರಬರಾಜು ಗುತ್ತಿಗೆ ಕೊಡಿಸಲು ಲಂಚ: ನಕಲಿ ಐಎಎಸ್ ಅಧಿಕಾರಿ ಮಿಥುನ್ ಬಂಧನ

ಐಎಎಸ್ ಅಧಿಕಾರಿ ಹೆಸರಲ್ಲಿ ₹41 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾನು ಐಎಎಸ್ ಅಧಿಕಾರಿಯಾಗಿದ್ದು, ಔಷಧ ಸರಬರಾಜು ಮಾಡುವ ಗುತ್ತಿಗೆ ಕೊಡಿಸುತ್ತೇನೆ ಎಂದು ನಂಬಿಸಿ ಔಷಧ ಅಂಗಡಿ ಮಾಲೀಕನಿಗೆ ₹41 ಲಕ್ಷ ವಂಚಿಸಿರುವ ಪ್ರಕರಣ ಬಯಲಿಗೆ ಬಂದಿದ್ದು, ಈ ನಕಲಿ ಐಎಎಸ್ ಅಧಿಕಾರಿಯನ್ನು ಬೆಂಗಳೂರಿನ ಅಮೃತಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಕಡೂರು ತಾಲ್ಲೂಕಿನ ಚಿಕ್ಕಬಳ್ಳೇಕೆರೆ ಗ್ರಾಮದವನು ಎಂದು ಹೇಳಿಕೊಂಡಿದ್ದ ಮಿಥುನ್, ತಾನು 2023ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಎಂದು ಹೇಳಿಕೊಂಡಿದ್ದ.

‘ಬೆಂಗಳೂರಿನ ಆರೋಗ್ಯ ಸೌಧದಲ್ಲಿ ಕೆಲಸ ಮಾಡುತ್ತಿದ್ದೇನೆ, ಚಿಕ್ಕಮಗಳೂರು ಜಿಲ್ಲೆಯ ಆರೋಗ್ಯ ಇಲಾಖೆಯ ಉಸ್ತುವಾರಿ ಕೂಡ ಹೊಂದಿದ್ದೇನೆ’ ಎಂದು ನಂಬಿಸಿದ್ದ. ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಚಂದ್ರಶೇಖರ್ ಸೇರಿ ಎಲ್ಲರೂ ಇದನ್ನು ನಂಬಿದ್ದರು. ಔಷಧ ಅಂಗಡಿ ನಡೆಸುವ ಸತೀಶ್ ಜಿ.ಆರ್. ಎಂಬುವರು ಪೊಲೀಸರಿಗೆ ದೂರು ನೀಡಿದ ಬಳಿಕ ಆತ ನಕಲಿ ಅಧಿಕಾರಿ ಎಂಬುದು ಬಯಲಿಗೆ ಬಂದಿದೆ.


ಮಿಥುನ್

‘ಔಷಧ ಅಂಗಡಿಯ ಹಿಂಭಾಗದಲ್ಲಿರುವ ಶ್ರೇಯಸ್ ಕ್ಲಿನಿಕ್‌ಗೆ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಚಂದ್ರಶೇಖರ್ ಅವರ ಜತೆ ಆಗಾಗ ಮಿಥುನ್ ಬರುತ್ತಿದ್ದ. ಐಎಎಸ್ ಅಧಿಕಾರಿ ಎಂದು ಚಂದ್ರಶೇಖರ್ ಅವರೇ ಪರಿಚಯ ಮಾಡಿಸಿದ್ದರು. ಚಿಕ್ಕಮಗಳೂರು ಜಿಲ್ಲೆಯ ಇಡೀ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಔಷಧ ಸರಬರಾಜು ಮಾಡಲು ಆದೇಶ ಕೊಡಿಸುತ್ತಾರೆ ಎಂದು ಚಂದ್ರಶೇಖರ್ ಹೇಳಿದ್ದರು’ ಎಂದು ಸತೀಶ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

‘₹1.8 ಕೋಟಿ ಮೊತ್ತದ ಔಷಧ ಸರಬರಾಜು ಆದೇಶ ಕೊಡಿಸಲಾಗುವುದು, ಶೇ 20ರಷ್ಟು ಕಮಿಷನ್ ನೀಡಬೇಕು’ ಎಂದು ಮಿಥುನ್ ಕೇಳಿದ್ದ. ಅದರಂತೆ ಚಂದ್ರಶೇಖರ್ ಅವರ ಸಮ್ಮುಖದಲ್ಲೇ ಬೆಂಗಳೂರಿನ ಜಕ್ಕೂರು ಏರೋಡ್ರಮ್ ಪಕ್ಕದ ರಸ್ತೆಯಲ್ಲಿ 2026ರ ಜ.18ರಂದು ಹಣ ನೀಡಿದ್ದೇನೆ’ ಎಂದು ಅವರು ದೂರಿನಲ್ಲಿ ವಿವರಿಸಿದ್ದಾರೆ.

‘ಎರಡು ವಾರಗಳಾದರೂ ಯಾವುದೇ ಆದೇಶ ಕೊಡಿಸದ ಕಾರಣ ಮತ್ತೆ ಸಂಪರ್ಕ ಮಾಡಿ ಕೇಳಿದಾಗ ₹5 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ. ಅದನ್ನೂ ಮಿಥುನ್ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿದ್ದೇನೆ. ಇನ್ನೂ 2- 3 ತಿಂಗಳು ಕಾಲಾವಕಾಶ ಬೇಕಾಗುತ್ತದೆ ಎಂದು ಹೇಳಿದ್ದ. ಬಳಿಕ ಆರೋಗ್ಯ ಇಲಾಖೆಯಲ್ಲಿ ಇರುವ ಪರಿಚಯಸ್ಥರನ್ನು ವಿಚಾರಿಸಿದಾಗ ಮಿಥುನ್ ಹೆಸರಿನ ಐಎಎಸ್ ಅಧಿಕಾರಿ ಇಲ್ಲ ಎಂಬುದು ಗೊತ್ತಾಯಿತು. ನನಗೆ ವಂಚನೆ ಮಾಡಿರುವ ಮಿಥುನ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಸತೀಶ್ ಮನವಿ ಮಾಡಿದ್ದಾರೆ.

ಈ ಕುರಿತು ಗುರುವಾರ ಪತ್ರಿಕಾಗೋಷ್ಠಿ ನಡೆಸಿದ ನಗರದ ಲಿಸಾ ಫೌಂಡೇಷನ್ ಸಂಸ್ಥಾಪಕಿ ಸಂಗೀತಾ ಪ್ರಸಾದ್, ‘ಈ ಪ್ರಕರಣದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಚಂದ್ರಶೇಖರ್ ಅವರ ಕೈವಾಡವೂ ಇದೆ. ಆದ್ದರಿಂದ ಅವರನ್ನೂ ಎ-2 ಆರೋಪಿಯನ್ನಾಗಿ ಮಾಡಬೇಕು’ ಎಂದು ಒತ್ತಾಯಿಸಿದರು.

‘ನಾನೂ ವಂಚನೆಗೆ ಒಳಗಾಗಿದ್ದೇನೆ’

‘ಐಎಎಸ್ ಅಧಿಕಾರಿ ಎಂದು ಹೇಳಿಕೊಂಡು ಬಂದಿದ್ದ ಮಿಥುನ್ ನಂಬಿ ನಾನೂ ಮೋಸ ಹೋಗಿದ್ದೇನೆ. ನನ್ನಿಂದಲೂ ಮಿಥುನ್ ಹಣ ಪಡೆದಿದ್ದು, ಪೊಲೀಸರಿಗೆ ದೂರು ನೀಡಲಾಗುವುದು’ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಚಂದ್ರಶೇಖರ್ ತಿಳಿಸಿದರು.

‘ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿಯಲ್ಲಿ ತರಬೇತಿ ಪಡೆದಿರುವ ಗುರುತಿನ ಚೀಟಿಯನ್ನೂ ನನಗೆ ತೋರಿಸಿದ್ದ. ಅದು ನಕಲಿಯೋ, ಅಸಲಿಯೋ ಎಂಬುದನ್ನು ಗಮನಿಸಲಿಲ್ಲ. ಬಂಧನವಾದ ನಂತರ ನಕಲಿ ಐಎಎಸ್ ಅಧಿಕಾರಿ ಎಂಬುದು ಗೊತ್ತಾಗಿದೆ’ ಎಂದು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ನನ್ನ ಸಮ್ಮುಖದಲ್ಲೇ ಹಣ ಕೊಡಲಾಗಿದೆ ಎಂದು ಸತೀಶ್ ಅವರು ನೀಡಿರುವ ದೂರಿನಲ್ಲಿ ಹೇಳಲಾಗಿದೆ, ಅದು ಸುಳ್ಳು. ಅವರಿಬ್ಬರ ನಡುವೆ ಹಣಕಾಸಿನ ವ್ಯವಹಾರ ನಡೆದಿರುವುದು ನನಗೆ ಗೊತ್ತಿಲ್ಲ’ ಎಂದರು.

‘ಸಂಬಳ ಬಂದಿಲ್ಲ ಎಂದು ನನ್ನಿಂದಲೂ ಬಹಳಷ್ಟು ಹಣ ಪಡೆದಿದ್ದಾನೆ. ಎಷ್ಟು ಹಣ ಕೊಟ್ಟಿದ್ದೇನೆ ಎಂಬುದಕ್ಕೆ ಫೋನ್ ಪೇ ಆ್ಯಪ್‌ನಲ್ಲಿ ದಾಖಲೆ ಇದೆ. ಮೊದಲು ಮೋಸ ಹೋದವನು ನಾನೇ’ ಎಂದು ಹೇಳಿದರು.

‘ಪೊಲೀಸರ ತನಿಖೆಗೆ ಸಹಕಾರ ನೀಡಲು ಬೆಂಗಳೂರಿಗೆ ಹೋಗುತ್ತಿದ್ದೇನೆ. ವಾಪಸ್ ಬಂದು ಚಿಕ್ಕಮಗಳೂರು ನಗರ ಠಾಣೆಗೆ ದೂರು ನೀಡುತ್ತೇನೆ’ ಎಂದು ತಿಳಿಸಿದರು.

ಕೇಂದ್ರ ಸಚಿವ ಎಚ್‌ಡಿಕೆ–ಚಂದ್ರಶೇಖರ್ ಖಟ್ಲೆ

ಮಧ್ಯಸ್ಥಿಕೆಗೆ ನ್ಯಾ. ಅಭಯ ಓಕಾ ನೇಮಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಲೋಕಾಯುಕ್ತ ಎಡಿಜಿಪಿ, ಎಸ್‌ಐಟಿ ಮುಖ್ಯಸ್ಥ ಎಂ. ಚಂದ್ರಶೇಖರ್ ನೀಡಿರುವ ದೂರಿಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣದ ರಾಜಿ ಸಂಧಾನಕ್ಕೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ ಓಕಾ ಅವರನ್ನು ನೇಮಕ ಮಾಡಿ ಹೈಕೋರ್ಟ್ ಆದೇಶಿಸಿದೆ.

‘ನಮ್ಮ ವಿರುದ್ಧ ಸಂಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಎಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಮತ್ತು ಸುರೇಶ್ ಬಾಬು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ನ್ಯಾ. ಎ.ಎಸ್.ಓಕಾ ಅವರ ನೇಮಕಕ್ಕೆ ಉಭಯ ಪಕ್ಷಗಾರರು ಒಪ್ಪಿಗೆ ಸೂಚಿಸಿದ್ದಾರೆ. ಇವರ ಗೌರವಧನ ಮತ್ತು ವೆಚ್ಚದ ಕುರಿತು ಪಕ್ಷಗಾರರು ನಿರ್ಧರಿಸಿಕೊಳ್ಳಬಹುದು. ಮಧ್ಯಸ್ಥಿಕೆ ಸ್ಥಳ ಮತ್ತು ಇತರ ಅಂಶಗಳನ್ನು ಆದೇಶದಲ್ಲಿ ಉಲ್ಲೇಖಿಸಲಾಗುವುದು’ ಎಂದು ನ್ಯಾಯಪೀಠ ತಿಳಿಸಿತು. ಕುಮಾರಸ್ವಾಮಿ ಪರ ಪದಾಂಕಿತ ಹಿರಿಯ ವಕೀಲ ಹಷ್ಮತ್ ಪಾಷ ಹಾಗೂ ಚಂದ್ರಶೇಖರ್ ಪರ ಹೈಕೋರ್ಟ್ ವಕೀಲ ಹಿದಾಯತ್ ಉಲ್ಲಾ ಹಾಜರಿದ್ದರು.

ದೂರು: ‘ಕುಮಾರಸ್ವಾಮಿ ನನ್ನ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿ ಬೆದರಿಕೆ ಹಾಕಿದ್ದಾರೆ’ ಎಂದು ಆರೋಪಿಸಿ ಚಂದ್ರಶೇಖರ್, ಸಂಜಯನಗರ ಪೊಲೀಸ್ ಠಾಣೆಯಲ್ಲಿ 2024ರಲ್ಲಿ ದೂರು ದಾಖಲಿಸಿದ್ದರು. ಇದನ್ನು ಆಧರಿಸಿ; ಭಾರತೀಯ ನ್ಯಾಯ ಸಂಹಿತಾ-2023ರ (ಬಿಎನ್‌ಎಸ್) ಕಲಂ 224 (ಸರ್ಕಾರಿ ನೌಕರರಿಗೆ ಅವರ ಅಧಿಕೃತ ಕರ್ತವ್ಯಗಳ ಮೇಲೆ ಪ್ರಭಾವ ಬೀರಲು ಬೆದರಿಕೆ ಹಾಕಿದ) ಆರೋಪದಡಿ ಎಫ್‌ಐಆರ್ ದಾಖಲಿಸಲಾಗಿದೆ.

ಜಾತ್ಯತೀತ ತತ್ವಕ್ಕೆ ಕಾಂಗ್ರೆಸ್ ತಿಲಾಂಜಲಿ: ಎದ್ದೇಳು ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ ರಾಜಕಾರಣವು ಕಾಂಗ್ರೆಸ್ ಹಿಡಿದಿರುವ ಅಧಃಪತನದ ಹಾದಿಯ ಪ್ರತ್ಯಕ್ಷದರ್ಶನವಾಗಿದೆ. ಆತ್ಮಾವಲೋಕನಕ್ಕೆ ಸಿದ್ಧವಿಲ್ಲದೇ ಅಲ್ಪಸಂಖ್ಯಾತರ ಭಾವನೆಗಳ ಮೇಲೆ ಹಲ್ಲೆ ನಡೆಸಿದೆ. ಜಾತ್ಯತೀತ ಮೌಲ್ಯಗಳಿಗೆ ತಿಲಾಂಜಲಿ ನೀಡಿದೆ ಎಂದು ಎದ್ದೇಳು ಕರ್ನಾಟಕ ಆಕ್ರೋಶ ವ್ಯಕ್ತಪಡಿಸಿದೆ.

ಎದ್ದೇಳು ಕರ್ನಾಟಕ ಪರವಾಗಿ ತಾರಾ ರಾವ್, ಜೆ.ಎಂ. ವೀರಸಂಗಯ್ಯ, ಕೆ.ಎಲ್. ಅಶೋಕ್, ಎನ್. ವೆಂಕಟೇಶ್, ಬಸವರಾಜ್ ಕೌತಾಳ್, ಅರುಣ್ ಲೂಯಿಸ್, ವಿ.ಎಸ್. ಶ್ರೀಧರ್, ಮೊಹಮ್ಮದ್ ಕುಂಞ, ಕಿರಣ್ ಕಮಲ್ ಪ್ರಸಾದ್, ಅನುಪಮ ಹೆಗಡೆ ಹೇಳಿಕೆ ನೀಡಿದ್ದು, ‘ಜಾತಿ ಮತ್ತು ಕುಟುಂಬ ರಾಜಕಾರಣಕ್ಕೆ ರತ್ನಗಂಬಳಿ ಹಾಕಿ ಕಾಂಗ್ರೆಸ್ ನಡೆದುಕೊಂಡ ರೀತಿ ಜುಗುಪ್ಸೆ ಮೂಡಿಸಿದೆ’ ಎಂದು ಹೇಳಿದ್ದಾರೆ.

11 ಎಲಿವೇಟೆಡ್ ಕಾರಿಡಾರ್‌ಗೆ ಅಸ್ತು

ರೋಟರಿ ಮೇಲ್ಸೇತುವೆಗೂ ಸಮ್ಮತಿ, ಸಮಗ್ರ ಉಪನಗರ ಯೋಜನೆಗೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಿ–ಸ್ಮೈಲ್ ವತಿಯಿಂದ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 11 ಎಲಿವೇಟೆಡ್ ಕಾರಿಡಾರ್, ಬೈಯಪ್ಪನಹಳ್ಳಿಯಲ್ಲಿ ರೋಟರಿ ಮೇಲ್ಸೇತುವೆ ಯೋಜನೆಗೆ ಸಚಿವ ಸಂಪುಟ ಗುರುವಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಬೈಯಪ್ಪನಹಳ್ಳಿಯಲ್ಲಿ ರೋಟರಿ ಮೇಲ್ಸೇತುವೆಗೆ ಈ ಹಿಂದೆ ₹380 ಕೋಟಿ ವೆಚ್ಚಕ್ಕೆ ಟೆಂಡರ್ ಕರೆಯಲಾಗಿತ್ತು. ಆದರೆ, ಈಗ ₹436.44 ಕೋಟಿ ವೆಚ್ಚ ಮಾಡುವ ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡಲಾಗಿದೆ.

ಬೆಂಗಳೂರು ಜಲಮಂಡಳಿಯ ಐದು ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಲ್ಲಿ ಕೆಸರಿನಿಂದ ಉತ್ಪತ್ತಿಯಾಗುವ ಬಯೊ ಗ್ಯಾಸ್ ಅನ್ನು ಬಳಸಿಕೊಂಡು 'ಬಯೊಗ್ಯಾಸ್ ಪ್ಯೂರಿಫಿಕೇಷನ್ ಆ್ಯಂಡ್ ಕಂಪ್ರೆಷನ್ ಸಿಸ್ಟಮ್' ಯೋಜನೆಯನ್ನು ಸಾರ್ವಜನಿಕ–ಖಾಸಗಿ ಪಾಲುದಾರಿಕೆಯಲ್ಲಿ (ಪಿಪಿಪಿ) ಅನುಷ್ಠಾನಗೊಳಿಸಲು ಸಮ್ಮತಿ ನೀಡಲಾಗಿದೆ.



ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಬಿಎಂಆರ್‌ಡಿಎ) ಮಧ್ಯಂತರ ವರ್ತುಲ ರಸ್ತೆ–2023ರ ಪಂಕ್ತೀಕರಣದ (ಅಲೈನ್‌ಮೆಂಟ್) ಬದಲಿಗೆ ಮಧ್ಯಂತರ ವರ್ತುಲ ರಸ್ತೆ– 2007ರ ಪಂಕ್ತೀಕರಣವನ್ನು ಸ್ವಲ್ಪ ಬದಲಾವಣೆಯೊಂದಿಗೆ ಮರುನಿಗದಿಪಡಿಸಿ, ಪರಿಷ್ಕೃತ ಅಧಿಸೂಚನೆ ಹೊರಡಿಸಲು ಸಮ್ಮತಿಸಲಾಗಿದೆ.

ಕರ್ನಾಟಕ ಟೆಕ್ನಾಲಜಿ ಮತ್ತು ಇನ್ನೋವೇಷನ್ ಮ್ಯೂಸಿಯಂ ಫೌಂಡೇಷನ್‌ನ (ಕೆಟಿಐಎಂಎಫ್) ಶೇ 51ರಷ್ಟು ಷೇರುಗಳನ್ನು ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಷನ್‌ಗೆ ವರ್ಗಾಯಿಸಲು ಅನುಮೋದನೆ ನೀಡಲಾಗಿದೆ.

₹13,262.70 ಕೋಟಿ	ಒಟ್ಟು 75.60 ಕಿ.ಮೀ ಉದ್ದದ 11 ಎಲಿವೇಟೆಡ್ ಕಾರಿಡಾರ್‌ಗಳ ಅಂದಾಜು ವೆಚ್ಚ
₹436.44 ಕೋಟಿ	ಬೈಯಪ್ಪನಹಳ್ಳಿ ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ಮೇಲ್ಸೇತುವೆ, ಐಒಸಿ ಜಂಕ್ಷನ್‌ನಲ್ಲಿ ಎಲಿವೇಟೆಡ್ ರೋಟರಿ ಮೇಲ್ಸೇತುವೆಗೆ ಪರಿಷ್ಕೃತ ಅಂದಾಜು
₹85 ಕೋಟಿ	ಜಲಮಂಡಳಿಯ ಐದು ತ್ಯಾಜ್ಯ ನೀರು ಘಟಕಗಳ ಕೆಸರಿನಿಂದ ಬಯೊಗ್ಯಾಸ್ ಉತ್ಪಾದನೆಗೆ ಪಿಪಿಪಿ ಮಾದರಿ

ಎಲಿವೇಟೆಡ್ ಕಾರಿಡಾರ್ ಯೋಜನೆಗಳ ವಿವರ

ಯೋಜನೆ	ಉದ್ದ (ಕಿ.ಮೀ)	ವೆಚ್ಚ (₹ಕೋಟಿಗಳಲ್ಲಿ)
ಎಂಇಐ ಜಂಕ್ಷನ್‌ನಲ್ಲಿ ವಿಭಜಿತ ಮೇಲ್ಸೇತುವೆ	0.5	52
ವೆಸ್ಟ್ ಆಫ್ ಕಾರ್ಡ್ ರಸ್ತೆಯಿಂದ ಪೈಪ್‌ಲೈನ್ ರಸ್ತೆ ಮೂಲಕ ಮಹಾಲಕ್ಷ್ಮಿ ಲೇಔಟ್‌ನ ಹೊರ ವರ್ತುಲ ರಸ್ತೆಗೆ ಗ್ರೇಡ್ ಸಪರೇಟರ್	2.0	489
ಯಲಹಂಕ ಮೂಲಕ ಕೋಗಿಲು ವೃತ್ತದವರೆಗೆ ದೊಡ್ಡಬಳ್ಳಾಪುರ ರಸ್ತೆಯಲ್ಲಿ ಮೇಲ್ಸೇತುವೆ	1.5	142
ಕನಕಪುರ ರಸ್ತೆಯಲ್ಲಿ ಕೋಣನಕುಂಟೆ ಕ್ರಾಸ್‌ನಲ್ಲಿ ಮೇಲ್ಸೇತುವೆ	1.5	291
ಕನಕಪುರ ರಸ್ತೆಯಲ್ಲಿ ಅಡ್ಯಾರ್ ಆನಂದ ಭವನ್, ರಘುವನಹಳ್ಳಿ ಕ್ರಾಸ್‌ನಲ್ಲಿ ಮೇಲ್ಸೇತುವೆ	0.9	230
ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಎಲಿವೇಟೆಡ್ ಕಾರಿಡಾರ್. ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆ ಲೂಪ್. ಸಂಗೊಳ್ಳಿ ರಾಯಣ್ಣ ವೃತ್ತದಿಂದ (ಆನಂದರಾವ್ ಮೇಲ್ಸೇತುವೆ) ನೃಪತುಂಗ ರಸ್ತೆವರೆಗೆ (ಕೆ.ಆರ್. ವೃತ್ತ) ಎಲಿವೇಟೆಡ್ ಕಾರಿಡಾರ್	7	725
ಸಿರ್ಸಿ ವೃತ್ತದಿಂದ ಮೈಸೂರು ರಸ್ತೆ ಮೂಲಕ ನಾಯಂಡಹಳ್ಳಿವರೆಗೆ ಎಲಿವೇಟೆಡ್ ಕಾರಿಡಾರ್	5.2	810
ಹೊಸೂರು ರಸ್ತೆಯಲ್ಲಿ ಶೂಲೆ ವೃತ್ತದಿಂದ ಸೇಂಟ್ ಜಾನ್ ಆಸ್ಪತ್ರೆ ರಸ್ತೆವರೆಗೆ (ಆನೆಪಾಳ್ಯ ಜಂಕ್ಷನ್ ಮತ್ತು ಆಡುಗೋಡಿ ಜಂಕ್ಷನ್ ಮೂಲಕ) ಎಲಿವೇಟೆಡ್ ಕಾರಿಡಾರ್	5.3	716
ಹಳೆ ಮದ್ರಾಸ್ ರಸ್ತೆಯಿಂದ ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆವರೆಗೆ ಎಲಿವೇಟೆಡ್ ಕಾರಿಡಾರ್ (ಸ್ವಾಮಿ ವಿವೇಕಾನಂದ ಮೆಟ್ರೊ ಸ್ಟೇಷನ್– ಇಂದಿರಾನಗರ– ಹಳೆ ವಿಮಾನನಿಲ್ದಾಣ ರಸ್ತೆ– ಹೊಸೂರು ರಸ್ತೆ– ಸಿಲ್ಕ್ ಬೋರ್ಡ್ ಜಂಕ್ಷನ್ ಮೂಲಕ)	5.2	1,300
ಯಶವಂತಪುರ– ಮತ್ತಿಕೆರೆ ಕ್ರಾಸ್‌ನಿಂದ ಹಳೆ ಮದ್ರಾಸ್ ರಸ್ತೆವರೆಗೆ (ಟಿನ್‌ಫ್ಯಾಕ್ಟರಿ ಜಂಕ್ಷನ್ ಕೆ.ಆರ್. ಪುರ) ಐಐಎಸ್ಸಿ–ಮೇಖ್ರಿ ವೃತ್ತ–ಜಯಮಹಲ್–ಸೇಂಟ್ ಜಾನ್ ಚರ್ಚ್ ರಸ್ತೆ, ಹಲಸೂರು ಕೆರೆ ಮೂಲಕ	28	4,621.45
ಮಾರೇನಹಳ್ಳಿ ಮುಖ್ಯರಸ್ತೆಯಿಂದ (ರಾಗಿಗುಡ್ಡ ಜಂಕ್ಷನ್) ಕನಕಪುರ ಮುಖ್ಯರಸ್ತೆಗೆ ಎಲಿವೇಟೆಡ್ ಕಾರಿಡಾರ್ (ಪೈಪ್‌ಲೈನ್ ರಸ್ತೆ ಮೂಲಕ ತಲಘಟ್ಟಪುರ ಜಂಕ್ಷನ್)	18.5	2,956.32

ಅಲಕ್ಷಿತ ಸಮುದಾಯಗಳ ಅಧ್ಯಯನ ಅಗತ್ಯ: ಪೂಜಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶಿಳ್ಳೆಕ್ಯಾತ, ಹಂದಿ ಜೋಗಿ, ಕೋಲೆ ಬಸವ ಸೇರಿ ಅನೇಕ ಅಲಕ್ಷಿತ ಸಮುದಾಯಗಳ ಚರಿತ್ರೆ ಮಾಸಿ ಹೋಗಿದೆ. ಈ ಸಮುದಾಯಗಳ ಕುರಿತು ಎಲ್ಲಾ ಆಯಾಮಗಳಲ್ಲಿ ಅಧ್ಯಯನ ಅವಶ್ಯಕ ಎಂದು ಸಂಚಲನ ಸಂಸ್ಕೃತಿ ವೇದಿಕೆ ಅಧ್ಯಕ್ಷ ಡಿ.ಕೆ.ಚಿತ್ತಯ್ಯ ಪೂಜಾರ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ್ದ 'ರಾಷ್ಟ್ರೀಯ ವಿಚಾರಸಂಕಿರಣ ಮತ್ತು ಕರ್ನಾಟಕದ ಅಲಕ್ಷಿತ ಸಮುದಾಯಗಳು ಪುಸ್ತಕ ಜನಾರ್ಪಣೆ' ಸಮಾರಂಭದಲ್ಲಿ ಮಾತನಾಡಿದರು.

'ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ದಲಿತ ಬಂಡಾಯ ಸಾಹಿತ್ಯ ಚಳುವಳಿ ನಂತರ ಹೊಸ ಸಾಹಿತ್ಯ ಪ್ರಕಾರ ರೂಪುಗೊಳ್ಳುತ್ತಿದೆ. ಕೋಟೆ, ಸಾಮ್ರಾಜ್ಯ ಕಟ್ಟಿಸಿದ ರಾಜ ಮಹಾರಾಜರ ಚರಿತ್ರೆ ಓದುವ ನಾವು, ಕೋಟೆ ಕಟ್ಟಿದ ಶ್ರಮಜೀವಿಗಳು, ಹಿಂದುಳಿದ ಸಮುದಾಯಗಳ ಕುರಿತು ಅಧ್ಯಯನ ನಡೆಸಬೇಕು. ಅನೇಕ ಅಲಕ್ಷಿತ ಸಮುದಾಯಗಳ ಆಚಾರ ವಿಚಾರ, ನೀತಿ ನಿರೂಪಣೆ, ಜೀವನ ಶೈಲಿ, ಆಹಾರ ಪದ್ಧತಿ ಕುರಿತು ಸುದೀರ್ಘ ಅಧ್ಯಯನ ಮತ್ತು ಸಂಶೋಧನೆ ಅಗತ್ಯ' ಎಂದು ಅಭಿಪ್ರಾಯಪಟ್ಟರು.

ವಿಶ್ವವಿದ್ಯಾಲಯಗಳು ಜಾತಿಯ ಕೂಪ ಮಂಡೂಕಗಳಾಗಿವೆ. ಸಮುದಾಯಗಳ ವಿಂಗಡಣೆಗೆ ದಾರಿಯಾಗದೆ ಜ್ಞಾನ ಬಿತ್ತಿ, ಪಸರಿಸುವ ಕೇಂದ್ರವಾಗಬೇಕು ಎಂದರು.

ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಎಸ್.ಎಂ. ಜಯಕರ ಮಾತನಾಡಿ, 'ಇಂದಿಗೂ ಅನೇಕ ತಳಸಮುದಾಯಗಳು ಅವಕಾಶ ವಂಚಿತವಾಗಿ, ಶೋಚನೀಯ ಸ್ಥಿತಿ ತಲುಪಿವೆ. ದೇಶದ ಸಂವಿಧಾನ ಸರ್ವರಿಗೂ ಮುಕ್ತವಾಗಿ ಬದುಕುವ ಸ್ವಾತಂತ್ರ್ಯ ನೀಡಿದೆ. ಸರ್ಕಾರಗಳು ಈ ಅಲಕ್ಷಿತ ಸಮುದಾಯಗಳ ಮುನ್ನಲೆಗೆ ಕಾರ್ಯಕ್ರಮ ರೂಪಿಸಬೇಕು' ಎಂದರು.

ಕಾರ್ಯಕ್ರಮದಲ್ಲಿ ಕುಲಸಚಿವರಾದ ಕೆ.ಟಿ.ಶಾಂತಲಾ, ವಿಶ್ರಾಂತ ಕುಲಪತಿ ಪ್ರೊ.ಹಿ.ಚಿ. ಬೋರಲಿಂಗಯ್ಯ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಎಚ್.ಶಶಿಕಲಾ, ಸಿಂಡಿಕೇಟ್ ಸದಸ್ಯ ಗಂಗರಾಜು ಉಪಸ್ಥಿತರಿದ್ದರು.

ಚಿಟಿಕೆ ಸುದ್ದಿ

ನಾರಾಯಣಸ್ವಾಮಿ ಅಧಿಕಾರ ಸ್ವೀಕಾರ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಯಾಗಿ ಕೆ.ವಿ.ನಾರಾಯಣಸ್ವಾಮಿ ಅವರು ಗುರುವಾರ ಅಧಿಕಾರ ವಹಿಸಿಕೊಂಡರು.

ಪ್ರಭಾರ ಕುಲಪತಿಯಾಗಿದ್ದ ಆರ್.ಕೆ.ವಾಣಿಶ್ರೀ ಅವರ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ನಾರಾಯಣಸ್ವಾಮಿ ಅವರನ್ನು ಕಾಯಂ ಕುಲಪತಿ ನೇಮಕದವರೆಗೆ ಅಥವಾ ಈ ವರ್ಷದ ಆಗಸ್ಟ್ 20ರವರೆಗೆ ನೇಮಕ ಮಾಡಿ ಈ ತಿಂಗಳ ಮೊದಲ ವಾರದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶ ಹೊರಡಿಸಿದ್ದರು.

ಆದರೆ, ಇದನ್ನು ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದ ಕಾರಣ ತಡೆಯಾಜ್ಞೆ ನೀಡಲಾಗಿತ್ತು. ನ್ಯಾಯಾಲಯವು ಬುಧವಾರ ತಡೆಯಾಜ್ಞೆ ತೆರವುಗೊಳಿಸಿತ್ತು.

ಮಹಿಳಾ ಕಥಾಸ್ಪರ್ಧೆಗೆ ಕಥೆಗಳ ಆಹ್ವಾನ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯು ಕಥೆಗಾರ್ತಿ ಅನುಪಮಾ ನಿರಂಜನ ಅವರ ಜನ್ಮದಿನದ ಪ್ರಯುಕ್ತ ರಾಜ್ಯಮಟ್ಟದ ಮಹಿಳಾ ಕಥಾ ಸ್ಪರ್ಧೆ ಹಮ್ಮಿಕೊಂಡಿದೆ. ಈವರೆಗೆ ಒಂದೂ ಕಥಾ ಸಂಕಲನ ಪ್ರಕಟಿಸದಿರುವವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

ಕಥೆಯು ಸ್ವಂತ ರಚನೆಯಾಗಿರುವ ಜತೆಗೆ, ಮಹಿಳಾ ಕೇಂದ್ರಿತ ಕಥಾವಸ್ತು ಹೊಂದಿರಬೇಕು. ಸ್ಪರ್ಧೆಗೆ ಕಳುಹಿಸುವ ಕಥೆಯು ಈ ಮೊದಲು ಎಲ್ಲೂ ಪ್ರಕಟವಾಗಿರಬಾರದು. 1,200 ಪದಗಳು ಅಥವಾ 5 ಪುಟಗಳು ಮೀರದಂತೆ ಕಳುಹಿಸಬೇಕು. ಪ್ರಥಮ ಬಹುಮಾನ ₹2,500, ದ್ವಿತೀಯ ಬಹುಮಾನ ₹2,000 ಹಾಗೂ ತೃತೀಯ ಬಹುಮಾನ ₹1,500 ಇರಲಿದೆ.

₹200 ಪ್ರವೇಶ ಶುಲ್ಕದೊಡನೆ ಕಥೆಯನ್ನು ಮೇ 10ರೊಳಗೆ ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷರು, ಕನ್ನಡ ಸಂಘರ್ಷ ಸಮಿತ, ನಂ.3, 1ನೇ ತಿರುವು, 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು-560 056 ಈ ವಿಳಾಸಕ್ಕೆ ಕಳುಹಿಸಿಕೊಡಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9739001410

ವಿಶೇಷ ಶಾಲೆ ಪ್ರಾರಂಭ

ಬೆಂಗಳೂರು: ಜಗದೀಶ್ ಶೇಠ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ (ಜೆಎಜಿಎಸ್‌ಒಎಂ) ಬ್ರ್ಯಾಂಡ್ ನಿರ್ವಹಣಾ ಶಿಕ್ಷಣಕ್ಕಾಗಿ ದಿ ಸ್ಪೆಷಲಿಸ್ಟ್ ಬ್ರ್ಯಾಂಡ್ ಸ್ಕೂಲ್ (ಟಿಎಸ್‌ಬಿಎಸ್) ಆರಂಭಿಸುವುದಾಗಿ ಘೋಷಿಸಿದೆ.

ಪ್ರಸಕ್ತ ವರ್ಷದ ಸೆಪ್ಟೆಂಬರ್‌ನಿಂದ ಕಾರ್ಯಾರಂಭಗೊಳ್ಳಲಿದ್ದು, ಬ್ರ್ಯಾಂಡ್ ನಿರ್ವಹಣೆಯಲ್ಲಿ ಒಂದು ವರ್ಷದ ಸ್ನಾತಕೋತ್ತರ ಪದವಿ ಕಾರ್ಯಕ್ರಮ ರೂಪಿಸಿದೆ. ಪ್ರಾರಂಭಿಕ ಬ್ಯಾಚ್‌ನಲ್ಲಿ 30 ವಿದ್ಯಾರ್ಥಿಗಳಿಗೆ ಅವಕಾಶವಿದ್ದು, ಅರ್ಹತಾ ಪರೀಕ್ಷೆ, ಸಂದರ್ಶನ ಮೂಲಕ ಆಯ್ಕೆ ನಡೆಯಲಿದೆ.

ಎಚ್‌ಎಸ್‌ಬಿಸಿ ಸೇರಿದಂತೆ ಇತರೆ ಬ್ರ್ಯಾಂಡ್‌ಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಪ್ರೊ. ಆನಂದ್ ನರಸಿಂಹ ಅವರು ಈ ಶಾಲೆಯ ಕುಲಪತಿಯಾಗಿ ನೇಮಕಗೊಂಡಿದ್ದಾರೆ. ಪ್ರವೇಶಕ್ಕೆ ಅರ್ಹತೆ, ಉಳಿದ ಮಾಹಿತಿಗಳ ಕುರಿತು ಸಂಸ್ಥೆಯ ವೆಬ್‌ಸೈಟ್ ಅಥವಾ ಶಾಖೆಯಿಂದ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.



ವಾರ್ಷಿಕ ಚಲನಚಿತ್ರ ಪ್ರಶಸ್ತಿ ಮತ್ತು ಸಹಾಯ ಧನ ಆಯ್ಕೆ ಸಮಿತಿಗಳ ಸಭೆಯಲ್ಲಿ ಕೆ.ವಿ. ಪ್ರಭಾಕರ್ ಅವರನ್ನು ಸನ್ಮಾನಿಸಲಾಯಿತು

'ಆಯಾ ವರ್ಷವೇ ಪ್ರಶಸ್ತಿ ನೀಡಲು ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿನಿಮಾ, ಸಾಹಿತ್ಯ, ಕಲೆ, ಪತ್ರಿಕೋದ್ಯಮ ಸೇರಿ ಎಲ್ಲ ಕ್ಷೇತ್ರಗಳ ಪ್ರಶಸ್ತಿ, ಪುರಸ್ಕಾರಗಳನ್ನು ಆಯಾ ವರ್ಷವೇ ಕೊಡಬೇಕು ಎನ್ನುವುದು ಮುಖ್ಯಮಂತ್ರಿಯವರ ಖಚಿತ ನಿಲುವು' ಎಂದು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ತಿಳಿಸಿದರು.

ವಾರ್ಷಿಕ ಚಲನಚಿತ್ರ ಪ್ರಶಸ್ತಿ ಮತ್ತು ಸಹಾಯಧನ ಆಯ್ಕೆ ಸಮಿತಿಗಳು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

'ಹಿಂದಿನ ಸರ್ಕಾರದ ಅವಧಿಯಿಂದ ಬಾಕಿ ಉಳಿದಿದ್ದ ಪ್ರಶಸ್ತಿಗಳನ್ನು ನೀಡಲಾಗಿದೆ. ಪ್ರಶಸ್ತಿಗಳಿಗೆ ಅರ್ಹರನ್ನು ಆಯ್ಕೆ ಮಾಡುವುದು ಅತ್ಯಂತ ಸೂಕ್ಷ್ಮ ಮತ್ತು ಸಹನೆಯಿಂದ ಆಗಬೇಕಾದ ಕಾರ್ಯ. ಎಲ್ಲ ಹೆಸರುಗಳೂ ಆಯ್ಕೆ ಸಮಿತಿ ಮೂಲಕವೇ ಬರಬೇಕು. ಆಯ್ಕೆ ಸಮಿತಿಗೆ ಅಗತ್ಯವಾದ ಸಮಯಾವಕಾಶ ಕೊಡಬೇಕು ಎನ್ನುವ ಕಾರಣಕ್ಕೇ ಹಂತ ಹಂತವಾಗಿ ಕೆಲಸಗಳು ನಡೆಯುತ್ತಿವೆ' ಎಂದು ವಿವರಿಸಿದರು.

ಪ್ರಶಸ್ತಿಗೆ ಅರ್ಹರನ್ನು ಆರಿಸುವುದು ಎಷ್ಟು ಸೂಕ್ಷ್ಮವಾದ ವಿಷಯವೋ, ಆಯ್ಕೆ ಸಮಿತಿ ಸದಸ್ಯರನ್ನು ಆರಿಸುವುದೂ ಅಷ್ಟೇ ಸೂಕ್ಷ್ಮ ಸಂಗತಿ. ಹತ್ತು ಹಲವು ಸೂಕ್ಷ್ಮಗಳನ್ನು ಗಮನದಲ್ಲಿ ಇಟ್ಟುಕೊಂಡು ಯಾವುದೇ ತಕರಾರುಗಳು ಇಲ್ಲದಂತೆ ಪ್ರಶಸ್ತಿಗಳಿಗೆ ಆಯ್ಕೆ ನಡೆದಿರುವುದು ಸಮಾಧಾನಕರ ಸಂಗತಿ ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಸಮಿತಿಗಳ ಅಧ್ಯಕ್ಷರಾದ ಬಾ.ನಾ. ಸುಬ್ರಮಣ್ಯ, ಬಿ.ಎಸ್. ಲಿಂಗದೇವರು, ಬಿ. ರಾಮಮೂರ್ತಿ, ಸದಾಶಿವ ಶೆಣೈ, ವೀರಪ್ಪ ಮರಳವಾಡಿ, ನಟಿ ಪ್ರೇಮಾ, ಗಾಯಕಿ ಚಂದ್ರಿಕಾ ಗುರುರಾಜ್, ನಟಿ ಪಂಚಮಿ ಅನ್ಸಾರಿ ಉಪಸ್ಥಿತರಿದ್ದರು.

ಡ್ರಾ ಸಾಧಿಸಿದ ಬಿಎಫ್‌ಸಿ

ಕೋಲ್ಕತ್ತ: ಬೆಂಗಳೂರು ಎಫ್‌ಸಿ ತಂಡವು ಗುರುವಾರ ನಡೆದ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ 3–3 ಗೋಲುಗಳಿಂದ ಈಸ್ಟ್ ಬೆಂಗಾಲ್ ವಿರುದ್ಧ ಡ್ರಾ ಸಾಧಿಸಿತು.

ಕೋಲ್ಕತ್ತದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಸುನಿಲ್ ಚೆಟ್ರಿ ಪಡೆಯು ಗೆಲುವಿನ ಹೊಸ್ತಿಲಲ್ಲಿತ್ತು. ಆದರೆ, ಪಂದ್ಯ ಮುಕ್ತಾಯಕ್ಕೆ ಕೆಲವೇ ನಿಮಿಷ ಬಾಕಿ ಇರುವಾಗ ಆತಿಥೇಯ ತಂಡದ ಆಂಟನ್ ಸೋಜ್‌ಬರ್ಗ್ ಕಾಲ್ಚಳಕ ಮೆರೆದರು. ಹೆಚ್ಚುವರಿ ಅವಧಿಯಲ್ಲಿ ಅವರು ಚೆಂಡನ್ನು ಗುರಿ ಸೇರಿಸಿದ್ದರಿಂದ ಪಂದ್ಯ ಡ್ರಾನಲ್ಲಿ ಮುಕ್ತಾಯವಾಯಿತು.

ಬೆಂಗಳೂರು ಎಫ್‌ಸಿ ಪರ ಆಶಿಕ್ ಕುರುಣಿಯನ್ (12ನೇ ನಿಮಿಷ), ಸುರೇಶ್ ಸಿಂಗ್ ವಾಂಗ್ಜಮ್ (39ನೇ) ಮತ್ತು ರೆಯಾನ್ ವಿಲಿಯಮ್ಸ್ (71ನೇ) ಗೋಲು ದಾಖಲಿಸಿದರು. ಈಸ್ಟ್ ಬೆಂಗಾಲ್ ತಂಡದ ಅನ್ವರ್ ಅಲಿ (21ನೇ), ಸೌಲ್ ಕ್ರೆಸ್ಪೋ (55ನೇ) ಮತ್ತು ಆ್ಯಂಟನ್ ಸೋಜ್‌ಬರ್ಗ್ (90 + 7ನೇ) ಚೆಂಡನ್ನು ಗುರಿ ಸೇರಿಸಿದರು. ಬೆಂಗಾಲ್ ತಂಡದ ಮಿಗುಯೆಲ್ ಫಿಗುಯೆರಾ ಅವರಿಗೆ 24ನೇ ನಿಮಿಷದಲ್ಲಿ 'ರೆಡ್ ಕಾರ್ಡ್' ದರ್ಶನವಾಗಿ ಮೈದಾನದಿಂದ ಹೊರಹೋದರು.

ಬಿಎಫ್‌ಸಿ ತಂಡವು ಲೀಗ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿ ಮುಂದುವರಿದಿದೆ. 9 ಪಂದ್ಯಗಳ ಪೈಕಿ ನಾಲ್ಕು ಗೆಲುವು, ಮೂರು ಡ್ರಾ ಮತ್ತು ಎರಡು ಸೋಲಿನೊಂದಿಗೆ ಒಟ್ಟು 15 ಅಂಕ ಸಂಪಾದಿಸಿದೆ. ಎಂಟು ಪಂದ್ಯಗಳಿಂದ ಇಷ್ಟೇ ಅಂಕ ಗಳಿಸಿರುವ ಬೆಂಗಾಲ್ ಮೂರನೇ ಸ್ಥಾನದಲ್ಲಿದೆ.

ತಾಸುಗಟ್ಟಲೆ ಕಾದು ಹೈರಾಣದ ಚಾಲಕರು

• ಕೆ.ಎಸ್.ಸುನಿಲ್

ಮುಖ್ಯಾಂಶಗಳು
- ಹೆಚ್ಚಿನ ಬೆಲೆ ತೆತ್ತರೂ ಸಿಗದ ಗ್ಯಾಸ್
- ಆಟೊ ಚಾಲಕರ ದುಡಿಮೆ ಕುಸಿತ
- ಶೇ 50 ಬಂಕ್‌ಗಳ ಬಾಗಿಲು ಬಂದ್

ಬೆಂಗಳೂರು: 'ಬೆಳಿಗ್ಗೆ 7 ಗಂಟೆಗೆ ಬಂದು ಗ್ಯಾಸ್ ಬಂಕ್ ಮುಂದೆ ನಿಂತಿದ್ದೇನೆ. 5 ಲೀಟರ್ ಹಾಕಿಸಿಕೊಳ್ಳಲು 3ರಿಂದ 4 ತಾಸು ಕಾಯಬೇಕು. ಕೆಲ ಆಟೊ ಚಾಲಕರು ಬೆಳಿಗ್ಗೆ 6 ಗಂಟೆಗೆ ಬಂದು ನಿಂತಿದ್ದಾರೆ. ಪರಿಸ್ಥಿತಿ ಹೀಗಾದರೆ ಜೀವನ ನಡೆಸುವುದಾದರೂ ಹೇಗೆ'?

–ಇದು ನಗರದ ಮೈಸೂರು ರಸ್ತೆಯಲ್ಲಿರುವ ಗ್ಯಾಸ್ ಬಂಕ್ ಎದುರು ಸರದಿ ಸಾಲಿನಲ್ಲಿ ನಿಂತಿದ್ದ ಆಟೊ ಚಾಲಕ ಬಸವರಾಜ್ ಅವರ ಬೇಸರದ ಮಾತು.

'ತಿಂಗಳಿನಿಂದ ಎಲ್‌ಪಿಜಿ ಸಮಸ್ಯೆ ಎದುರಿಸುತ್ತಿದ್ದೇವೆ. ಅನಿಲ ಕೊರತೆಯಿಂದಾಗಿ ಹಲವು ಆಟೊ ಚಾಲಕರು ಕೆಲಸ ನಿಲ್ಲಿಸಿದ್ದಾರೆ. ನಿತ್ಯ ಬರುತ್ತಿದ್ದ ₹600– ₹700 ಆದಾಯಕ್ಕೂ ಕುತ್ತು ಬಂದಿದೆ. ಸಚಿವರು ಮತ್ತು ಅಧಿಕಾರಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಟೊಗಳಿಗೆ ಎಲ್‌ಪಿಜಿ ಸರಬರಾಜು ಪ್ರಮಾಣ ಗಣನೀಯವಾಗಿ ಕಡಿಮೆ ಆಗಿರುವುದರಿಂದ ಚಾಲಕರ ಪರದಾಟ ಮುಂದುವರಿದಿದೆ. ದಾಸ್ತಾನು ಲಭ್ಯತೆಯಿರುವ ಕಡೆಗೆ ಆಟೊ ಚಾಲಕರು ತೆರಳಿ ಗಂಟೆಗಟ್ಟಲೆ ಕಾಯುವ ಸ್ಥಿತಿ ಉಂಟಾಗಿದ್ದು, ಚಾಲಕರು ಹೈರಾಣಾಗಿದ್ದಾರೆ.

ಗ್ಯಾಸ್ ಬಂಕ್‌ಗಳ ಎದುರು 2 ಕಿ.ಮೀವರೆಗೂ ಆಟೊಗಳ ಸಾಲು ಕಾಣಬಹುದು. ನಗರದಲ್ಲಿ ಶೇಕಡ 50ರಷ್ಟು ಗ್ಯಾಸ್ ಬಂಕ್‌ಗಳು ಬಾಗಿಲು ಹಾಕಿವೆ. ಇದರ ನಡುವೆ ಎಲ್‌ಪಿಜಿ ದರ ಏರಿಕೆ ಆರ್ಥಿಕ ಹೊಡೆತ ನೀಡಿದೆ. ಬಂಕ್‌ಗಳಲ್ಲಿ ಬೆಳಿಗ್ಗೆಯಿಂದಲೇ ತಾಸುಗಟ್ಟಲೆ ಕಾದು, ಹೆಚ್ಚಿನ ಬೆಲೆ ತೆತ್ತರೂ ಗ್ಯಾಸ್ ಸಿಗುತ್ತಿಲ್ಲ. ಇದರಿಂದ ಆಟೊ ಚಾಲಕರ ದುಡಿಮೆ ಸಾಕಷ್ಟು ಕುಸಿದಿದೆ.

ನಗದ ಹಲವು ಭಾಗದಲ್ಲಿರುವ ಖಾಸಗಿ ಗ್ಯಾಸ್ ಬಂಕ್‌ಗಳು 'ದಾಸ್ತಾನು ಇಲ್ಲ' ಎಂಬ ಫಲಕಗಳನ್ನು ಅಳವಡಿಸಿವೆ.



ನಗರದ ರಾಜ್ ಕುಮಾರ್ ರಸ್ತೆಯ ಗ್ಯಾಸ್ ಬಂಕ್ ಬಳಿ ನಿಂತಿರುವ ಆಟೊಗಳು
–ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಮೈಸೂರು ರಸ್ತೆ, ಮಾಗಡಿ ರಸ್ತೆ, ಎಂ.ಜಿ. ರಸ್ತೆ, ಬೌರಿಂಗ್ ರಸ್ತೆಗಳಲ್ಲಿ ಆಟೊಗಳು ಸಾಲಿನಲ್ಲಿರುವ ನಿಂತಿರುವ ದೃಶ್ಯ ಕಂಡು ಬಂತು.

ಚಾಮರಾಜಪೇಟೆ, ನಾಗರಬಾವಿ, ಕುಮಾರಸ್ವಾಮಿ ಲೇಔಟ್, ಸರ್ಜಾಪುರ ರಸ್ತೆ, ಬನ್ನೇರುಘಟ್ಟ ರಸ್ತೆ, ಸೇಂಟ್ ಮಾರ್ಕ್ಸ್ ರೋಡ್ ಸೇರಿ ಕೆಲವೆಡೆ ಸರ್ಕಾರಿ ಬಂಕ್‌ಗಳು ಕಾರ್ಯನಿರ್ವಹಿಸುತ್ತಿವೆ.

ಎಲ್‌ಪಿಜಿ ಪೂರೈಕೆಯಲ್ಲಿ ಕೊರತೆ ಹಾಗೂ ದರ ಏರಿಕೆಯ ಪರಿಣಾಮ ಚಾಲಕರು ಪ್ರಯಾಣಿಕರಿಂದ ಹೆಚ್ಚಿನ ಹಣ ವಸೂಲು ಮಾಡುತ್ತಿದ್ದಾರೆ. ಬಹುತೇಕ ಆಟೊ ಚಾಲಕರು ಬಾಡಿಗೆ ದರ ಹೆಚ್ಚಿಸಿದ್ದು, ಇದು ಪ್ರಯಾಣಿಕರಿಗೆ ಹೊರೆಯಾಗಿ ಪರಿಣಮಿಸಿದೆ.

'ಎಲ್‌ಪಿಜಿ ಅನಿಲ ಕೊರತೆ ನಂತರ ದರದಲ್ಲೂ ಗಣನೀಯ ಏರಿಕೆ ಕಂಡುಬಂದಿದೆ. ಐಒಸಿಎಲ್, ಎಚ್‌ಪಿಸಿಎಲ್, ಬಿಪಿಸಿಎಲ್ ಮುಂತಾದ ಸರ್ಕಾರಿ ಸ್ವಾಮ್ಯದ ಬಂಕ್‌ಗಳಲ್ಲಿ ಎಲ್‌ಪಿಜಿಗೆ ಲೀಟರ್‌ಗೆ ₹69 ಇದ್ದಿದ್ದು, ಈಗ ₹ 90ರ ಆಸುಪಾಸಿನಲ್ಲಿದೆ. ಖಾಸಗಿ ಪೆಟ್ರೋಲ್ ಬಂಕ್‌ಗಳು ಲೀಟರ್‌ಗೆ ₹120 ರವರೆಗೂ ಹೆಚ್ಚಿಸಿವೆ. ಎಲ್‌ಪಿಜಿ ಸ್ಟೇಷನ್ ಹುಡುಕಿಕೊಂಡು ಕಿ.ಮೀಗಟ್ಟಲೇ ಕ್ರಮಿಸುವ ಸನ್ನಿವೇಶ ನಿರ್ಮಾಣವಾಗಿದೆ' ಎಂದು ಆಟೊ ಚಾಲಕ ರಾಮಯ್ಯ ಆತಂಕ ವ್ಯಕ್ತಪಡಿಸಿದರು.

'ಯುದ್ಧ ಆರಂಭಕ್ಕೂ ಮುನ್ನ ನಾಲ್ಕು ಟನ್ ಬರುತ್ತಿದ್ದ ಗ್ಯಾಸ್, ಇದೀಗ ಎರಡು ಟನ್‌ಗೆ ಇಳಿಕೆಯಾಗಿದೆ. ಆಟೊ ಚಾಲಕರು ಬೆಳಗಿನ ಜಾವದಿಂದಲೇ ಸರದಿ ಸಾಲಿನಲ್ಲಿ ನಿಲ್ಲುವಂತಾಗಿದೆ. ಪೂರೈಕೆ ಸಹಜ ಸ್ಥಿತಿಗೆ ಮರಳುವ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲ' ಎಂದು ಖಾಸಗಿ ಗ್ಯಾಸ್ ಬಂಕ್ ಸಿಬ್ಬಂದಿಯೊಬ್ಬರು ಹೇಳಿದರು.

'ಎಲ್‌ಪಿಜಿ ಸಿಲಿಂಡರ್‌ಗಳನ್ನು ಸರ್ಕಾರ ನಿಗದಿ ಮಾಡಿರುವ ದರದಲ್ಲೇ ವಿತರಿಸಬೇಕು. ಹೆಚ್ಚಿನ ದರದಲ್ಲಿ ಗ್ರಾಹಕರಿಗೆ ಮಾರಿದರೆ, ಅಂತಹ ಕಂಪನಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ. ಆದರೆ, ಲೀಟರ್‌ಗೆ ₹120 ರ ವರೆಗೂ ಮಾರಾಟ ಮಾಡಲಾಗುತ್ತಿದೆ. ಇದು ಅಧಿಕಾರಿಗಳಿಗೆ ಗೊತ್ತಿದ್ದರೂ ಸುಮ್ಮನಿದ್ದಾರೆ' ಎಂದು ಆಟೊ ಚಾಲಕರು ಅಳಲು ತೊಡಿಕೊಂಡರು.

ಸರ್ಕಾರ ಚಾಲಕರ ನೆರವಿಗೆ ಧಾವಿಸಲಿ

'ಅನಿಲ ಕೊರತೆಯಿಂದ ಸಂಕಷ್ಟದಲ್ಲಿರುವ ಆಟೊ ಚಾಲಕರ ನೆರವಿಗೆ ಸರ್ಕಾರ ಮತ್ತು ರಾಜಕಾರಣಿಗಳು ಧಾವಿಸಬೇಕು. ಆಟೊ ದುಡಿಮೆ ನಂಬಿಕೊಂಡು ಲಕ್ಷಾಂತರ ಚಾಲಕರು ಜೀವನ ನಡೆಸುತ್ತಿದ್ದಾರೆ. ದಿನದಿಂದ ದಿನಕ್ಕೆ ಸಮಸ್ಯೆ ಬಿಗಡಾಯಿಸುತ್ತಿದೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಜೀವನ ನಡೆಸುವುದೇ ಕಷ್ಟವಾಗುತ್ತದೆ' ಎಂದು ಸಾರಥಿ ಆಟೊ ಚಾಲಕರ ಸಂಘದ ಅಧ್ಯಕ್ಷ ರಾಮೇಗೌಡ ತಿಳಿಸಿದರು.

'ಎಲ್‌ಪಿಜಿ ದರ ಹೆಚ್ಚಳದಿಂದಾಗಿ ಚಾಲಕರಿಗೆ ಆರ್ಥಿಕ ಹೊಡೆತ ಬಿದ್ದಿದೆ. ಗ್ಯಾಸ್ ಬಂಕ್ ಎದುರು ನಿತ್ಯ 3ರಿಂದ 4 ತಾಸು ಕಾಯಬೇಕಾಗಿದೆ. ಕೆಲವೊಮ್ಮೆ ನಿಂತರೂ ಗ್ಯಾಸ್ ಸಿಗುತ್ತಿಲ್ಲ. ಐದು ಲೀಟರ್ ಮಾತ್ರ ಹಾಕುತ್ತಿದ್ದಾರೆ. ಒಂದು ದಿನ ಆಟೊ ಓಡಿಸಿ, ಮತ್ತೊಂದು ದಿನ ಮತ್ತೆ ಸರದಿ ಸಾಲಿನಲ್ಲಿ ನಿಲ್ಲಬೇಕು. ಸಮಸ್ಯೆ ಬಗೆಹರಿಯುವವರೆಗೆ ಚಾಲಕರಿಗೆ ತಿಂಗಳಿಗೆ ₹ 15 ಸಾವಿರ ನೀಡಬೇಕು. ರಾಜ್ಯ ಸರ್ಕಾರದ ಗಮನಕ್ಕೆ ತಂದರೆ, ಕೇಂದ್ರದ ಮೇಲೆ ಬೊಟ್ಟು ಮಾಡುತ್ತದೆ. ಯಾರ ಬಳಿ ಸಮಸ್ಯೆ ಹೇಳಿಕೊಳ್ಳಬೇಕು' ಎಂದು ಪ್ರಶ್ನಿಸಿದರು.

ಆಟೊ ಎಲ್‌ಪಿಜಿ ಪೂರೈಕೆ ಹೆಚ್ಚಳ

ಬೆಂಗಳೂರು: ನಗರದಲ್ಲಿ ಆಟೊ ಎಲ್‌ಪಿಜಿ ಪೂರೈಕೆ ಪ್ರಮಾಣವನ್ನು ಶೇಕಡ 300ರಷ್ಟು ಹೆಚ್ಚಿಸಲಾಗಿದೆ ಎಂದು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ದಕ್ಷಿಣ ವಲಯ ತಿಳಿಸಿದೆ.

ಏಪ್ರಿಲ್ 15ರಂದು ಸಂಸ್ಥೆಯು 75.53 ಮೆಟ್ರಿಕ್ ಟನ್ (ಎಂ.ಟಿ.) ಆಟೊ ಎಲ್‌ಪಿಜಿ ಪೂರೈಸಿತ್ತು. ಸಂಕಷ್ಟದ ಮೊದಲು ಸಾಮಾನ್ಯವಾಗಿ ದಿನಕ್ಕೆ ಪೂರೈಸುತ್ತಿದ್ದ ಸುಮಾರು 23 ಮೆಟ್ರಿಕ್ ಟನ್‌ಗಿಂತ ಇದು ಹೆಚ್ಚಿನ ಪ್ರಮಾಣವಾಗಿದೆ.

ಆಟೊಗಳ ಸಂಚಾರ ವ್ಯವಸ್ಥೆಗೆ ಅಗತ್ಯವಾದ ಇಂಧನ ಲಭ್ಯತೆಯನ್ನು ವ್ಯತ್ಯಯವಿಲ್ಲದೆ ಖಚಿತಪಡಿಸಲು ಸಂಸ್ಥೆ ಕ್ರಮ ಕೈಗೊಂಡಿದೆ.

ರಾಜ್ಯದಾದ್ಯಂತ ಸಂಸ್ಥೆಯು ಗಣನೀಯವಾಗಿ ಅನಿಲ ಪೂರೈಕೆ ಪ್ರಮಾಣ ಹೆಚ್ಚಿಸಿದ್ದು, ಇತ್ತೀಚಿನ ದಿನಗಳಲ್ಲಿ ದಿನನಿತ್ಯದ ಪೂರೈಕೆಯನ್ನು 83 ಮೆಟ್ರಿಕ್ ಟನ್‌ಗಿಂತ ಹೆಚ್ಚಿಸಿದೆ. ಬಿಕ್ಕಟ್ಟಿಗೂ ಮೊದಲು ದಿನಕ್ಕೆ ಸರಾಸರಿ ಸುಮಾರು 43.5 ಮೆಟ್ರಿಕ್ ಟನ್ ಪೂರೈಕೆಯಾಗುತ್ತಿತ್ತು, ಈಗ ಅದು ದ್ವಿಗುಣಗೊಂಡಿದೆ.

ಖಾಸಗಿ ಗ್ಯಾಸ್ ಬಂಕ್‌ಗಳ ಕಾರ್ಯಾಚರಣೆಯಲ್ಲಿ ಉಂಟಾದ ವ್ಯತ್ಯಯದಿಂದಾಗಿ ಎಲ್‌ಪಿಜಿಗೆ ಬೇಡಿಕೆ ಹೆಚ್ಚಾಗಿದೆ. ಖಾಸಗಿ ಬಂಕ್‌ಗಳು ಕಾರ್ಯನಿರ್ವಹಿಸದ ಕಾರಣ ಸರ್ಕಾರಿ ಸ್ವಾಮ್ಯದ ಬಂಕ್‌ಗಳ ಬಳಿ ಆಟೊಗಳ ಸಾಲು ಕಂಡು ಬರುತ್ತಿವೆ ಎಂದು ತಿಳಿಸಿದೆ.

ಇದರ ಜೊತೆಗೆ, ಬೇಡಿಕೆ ಪೂರೈಸಲು ಇಂಡಿಯನ್ ಆಯಿಲ್‌ನ ಎಲ್‌ಪಿಜಿ ಬಾಟ್ಲಿಂಗ್ ಘಟಕಗಳು ಹಾಗೂ ಲೋಡಿಂಗ್ ಕೇಂದ್ರಗಳು ಕಳೆದ ವಾರದ ಏಳು ದಿನಗಳಲ್ಲೂ ಕಾರ್ಯನಿರ್ವಹಿಸಿದ್ದವು.

ಪಿಯುಸಿ ಫಲಿತಾಂಶ

ಬೆಂಗಳೂರು: ಜಯನಗರದ ಬಿಇಎಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಬಿ.ಚೇತನ್ ವಾಣಿಜ್ಯ ವಿಭಾಗದಲ್ಲಿ ಶೇ 97 ಅಂಕದೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.



ಚೇತನ್

ಕಾಲೇಜಿನಲ್ಲಿ 14 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದರೆ, 82 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಪಡೆದಿದ್ದಾರೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ಸಚಿವ ಸ್ಥಾನದ ಆಕಾಂಕ್ಷಿಗಳು...



ಕರ್ನಾಟಕ ಕಾಂಗ್ರೆಸ್ ಸರ್ಕಾರದಲ್ಲಿ ಆದಷ್ಟು ಬೇಗ ಸಚಿವ ಸಂಪುಟ ಪುನರ್ ರಚನೆ ಮಾಡಬೇಕು ಎಂದು ಸಚಿವ ಸ್ಥಾನದ ಆಕಾಂಕ್ಷಿ ಶಾಸಕರು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಗುರುವಾರ ಮನವಿ ಸಲ್ಲಿಸಿದರು

ಪಿ.ಡಿ ಖಾತೆಯಲ್ಲಿ ₹419.50 ಕೋಟಿ ಲಭ್ಯ: ಮುಖ್ಯಮಂತ್ರಿ

ಕುಡಿಯುವ ನೀರು: ಡಿ.ಸಿಗಳೇ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಸಿಗೆಯಲ್ಲಿ ರಾಜ್ಯದ 213 ತಾಲ್ಲೂಕುಗಳು ಹಾಗೂ 2,410 ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಗುರುತಿಸಲಾಗಿದೆ. ಸದ್ಯ 114 ತಾಲ್ಲೂಕುಗಳ 598 ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಯಿದೆ. ಕುಡಿಯುವ ನೀರಿಗೆ ಸಮಸ್ಯೆಯಾದರೆ ಜಿಲ್ಲಾಧಿಕಾರಿಗಳನ್ನೇ ಹೊಣೆ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ಗ್ರಾಮೀಣ ಹಾಗೂ ಪಟ್ಟಣ ಪ್ರದೇಶ ಗಳಲ್ಲಿನ ಕುಡಿಯುವ ನೀರು ಪೂರೈಕೆ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ವಿಧಾನಸೌಧದ ಸಭಾಂಗಣದಲ್ಲಿ ಗುರುವಾರ ಇಡೀ ದಿನ ಸಭೆ ನಡೆಸಿದರು.

'ಈ ವರ್ಷ ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಗಸ್ಟ್ ತಿಂಗಳಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದೆ. ಆದರೆ, ಸೆಪ್ಟೆಂಬರ್‌ನಲ್ಲಿ ಮಳೆ ಕಡಿಮೆ ಆಗಬಹುದು ಎಂಬ ಮುನ್ಸೂಚನೆ ಇದೆ. ಐದು ಜಿಲ್ಲೆಗಳನ್ನು ಬಿಟ್ಟು ಇತರ ಜಿಲ್ಲೆಗಳಲ್ಲಿ ಮುಂಗಾರು ಕೊರತೆ ಆಗಬಹುದು. ಕುಡಿಯುವ ನೀರಿಗೆ ತೊಂದರೆ ಆಗದಂತೆ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕಂದಾಯ, ಪಂಚಾಯತ್ ರಾಜ್ ಮತ್ತು ನಗರಾಭಿವೃದ್ಧಿ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸ ಬೇಕು' ಎಂದು ಮುಖ್ಯಮಂತ್ರಿ ಸೂಚನೆ ನೀಡಿದರು.



ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಎಂ.ಬಿ. ಪಾಟೀಲ, ಕೆ. ವೆಂಕಟೇಶ್, ಎನ್.ಎಸ್. ಬೋಸರಾಜು ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು

'ಈ ಬಾರಿ ಏಪ್ರಿಲ್- ಜೂನ್ ಅವಧಿಯಲ್ಲಿ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿಯ ದಿನಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಯಾವ ರೀತಿಯ ಮುನ್ನೆಚ್ಚರಿಕೆ ಕ್ರಮ ಗಳನ್ನು ಕೈಗೊಳ್ಳಬೇಕು ಎನ್ನುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಕುಡಿಯುವ ನೀರು ಪೂರೈಕೆಯನ್ನು ಖಾತ್ರಿ ಪಡಿಸಲು ಅನುದಾನದ ಕೊರತೆಯಿಲ್ಲ. ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಅನುದಾನ ಒದಗಿಸಲು ಹಣಕಾಸು ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ' ಎಂದರು.

'ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಬೇಕು. ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಪಡೆಯಲು ಆದ್ಯತೆ ನೀಡಬೇಕು. ಅಗತ್ಯ ಸಂದರ್ಭದಲ್ಲಿ ಕೊಳವೆ ಬಾವಿ ಕೊರೆಯಬಹುದು' ಎಂದು ಮುಖ್ಯಮಂತ್ರಿ ತಿಳಿಸಿದರು.

'ರಾಜ್ಯದ ಪ್ರಮುಖ 14 ಜಲಾಶಯ ಗಳಲ್ಲಿ ಸದ್ಯ 321.93 ಟಿಎಂಸಿ ಅಡಿ ನೀರು ಲಭ್ಯವಿದ್ದು, ಇದು ಒಟ್ಟು ಸಾಮರ್ಥ್ಯದ ಶೇ 36ರಷ್ಟು. ಕಳೆದ ವರ್ಷ ಇದೇ ಅವಧಿಯಲ್ಲಿ 330.35 ಟಿಎಂಸಿ ಅಡಿ ನೀರು ಲಭ್ಯವಿತ್ತು. ಮಳೆಗಾಲ ವಿಳಂಬವಾಗಿ ಆರಂಭವಾಗುವ ಸಾಧ್ಯತೆ ಇರುವುದರಿಂದ ಜುಲೈ ಮಧ್ಯದವರೆಗೂ ಜಲಾಶಯಗಳಲ್ಲಿ ನೀರಿನ ಲಭ್ಯತೆ ಖಚಿತಪಡಿಸಿಕೊಳ್ಳಬೇಕು' ಎಂದು ಸೂಚನೆ ನೀಡಿದರು.

ಎಲ್ಲಿ ಸಮಸ್ಯೆ ಆಗಬಹುದು?

ಕಲಬುರಗಿಯ 147, ಬಾಗಲಕೋಟೆಯ 114, ಬೆಳಗಾವಿಯ 127, ಚಿಕ್ಕಮಗಳೂರಿನ 115, ಹಾವೇರಿಯ 138, ಮಂಡ್ಯದ 130, ತುಮಕೂರಿನ 141, ಉತ್ತರಕನ್ನಡ ಜಿಲ್ಲೆಯ 125 ಗ್ರಾಮ ಪಂಚಾಯಿತಿಗಳಲ್ಲಿ, 95 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಗುರುತಿಸಲಾಗಿದೆ.

ಕುಡಿಯುವ ನೀರು– ಸದ್ಯದ ಸ್ಥಿತಿ

- 114 ತಾಲ್ಲೂಕು, 598 ಗ್ರಾ.ಪಂ, 27 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮಸ್ಯೆ
- 137 ಗ್ರಾಮಗಳಿಗೆ 129 ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ
- 145 ವಾರ್ಡ್‌ಗಳಿಗೆ 57 ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು
- 585 ಖಾಸಗಿ ಕೊಳವೆಬಾವಿ ಬಾಡಿಗೆಗೆ ಪಡೆದು 515 ಗ್ರಾಮಗಳಿಗೆ ನೀರು

'ನಿವಾಸಿಗೆ ₹53.03 ಲಕ್ಷ ಪರಿಹಾರ ಪಾವತಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ಕಾಮಗಾರಿ ಪೂರ್ಣಗೊಳಿಸಲು ಆರು ವರ್ಷಕ್ಕಿಂತ ಹೆಚ್ಚು ವಿಳಂಬ ಮಾಡಿದ ಕಾರಣ ಜಯನಗರದ ನಿವಾಸಿಯೊಬ್ಬರಿಗೆ ₹53.03 ಲಕ್ಷ ಪರಿಹಾರ ನೀಡುವಂತೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ–ರೇರಾ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಆದೇಶಿಸಿದೆ.

ಚಲ್ಲಘಟ್ಟ ಸಮೀಪ ನಿರ್ಮಿಸುತ್ತಿರುವ ಈ ಬಡಾವಣೆಯಲ್ಲಿ 27 ಸಾವಿರ ನಿವೇಶನಗಳಿದ್ದು, ಪ್ರಾಧಿಕಾರದ ಆದೇಶ ಪರಿಣಾಮ ಬೀರಬಹುದು ಎಂದು ವ್ಯಾಖ್ಯಾನಿಸಲಾಗಿದೆ.

ಏಪ್ರಿಲ್ 8ರ ಆದೇಶದಲ್ಲಿ ರೇರಾ ಅಧ್ಯಕ್ಷ ರಾಕೇಶ್ ಸಿಂಗ್ ಮತ್ತು ಸದಸ್ಯ ಜಿ.ಆರ್.ರೆಡ್ಡಿ ಅವರು ದೂರುದಾರರು ಪರಿಹಾರಕ್ಕೆ ಅರ್ಹರು. ನಿವೇಶನದಲ್ಲಿ ರಸ್ತೆ, ನೀರು, ಬೀದಿ ದೀಪ ಅಥವಾ ವಿದ್ಯುತ್ ಸೌಲಭ್ಯಗಳೇ ಇಲ್ಲ ಎಂದು ತಿಳಿಸಿದ್ದಾರೆ.

ಅಲ್ಲದೇ, ವಾದ, ಪ್ರತಿವಾದಗಳ ವೇಳೆ ಬಿಡಿಎ ವಕೀಲರು, ಬಡಾವಣೆಯಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ವಿಳಂಬ ಮಾಡಿದ್ದಕ್ಕಾಗಿ ಲೆಕ್ಕಾಚಾರಗಳ ಮೆಮೊಗೆ (ಪರಿಹಾರ ಮೊತ್ತ) ಯಾವುದೇ ಆಕ್ಷೇಪಣೆ ಸಲ್ಲಿಸಲಿಲ್ಲ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

2020ರ ಜೂನ್ ನಿಂದ 2026ರ ಫೆಬ್ರುವರಿಗೆ ಆರು ವರ್ಷಗಳ ವಿಳಂಬಕ್ಕಾಗಿ ₹56.03 ಲಕ್ಷ ದಂಡ ಹಾಕಲಾಗಿದೆ. ಇದರಲ್ಲಿ ಬಡ್ಡಿಯೂ ಸೇರಿದೆ. 2026ರ ಫೆಬ್ರುವರಿಯಿಂದ ಮೂಲಭೂತ ಸೌಲಭ್ಯ ಒದಗಿಸುವ ದಿನಾಂಕದವರೆಗೂ ಇದೇ ರೀತಿಯಲ್ಲಿ ಬಡ್ಡಿ ಲೆಕ್ಕ ಹಾಕಿ, ದೂರುದಾರರಿಗೆ ಪಾವತಿಸಬೇಕು ಎಂದು ತಿಳಿಸಲಾಗಿದೆ.

2025ರಲ್ಲಿ ಜಯನಗರದ ನಿವಾಸಿ ಮೃದುಲಾ ಕೃಷ್ಣಾಪುರ್ ಅವರು ಯೋಜನೆ ವಿಳಂಬಕ್ಕಾಗಿ ಬಿಡಿಎಯಿಂದ ಪರಿಹಾರ ಕೋರಿ ರೇರಾಗೆ ಅರ್ಜಿ ಸಲ್ಲಿಸಿದ್ದರು. 2020 ರಲ್ಲಿ ಒಟ್ಟು ₹96.87 ಲಕ್ಷ ಪಾವತಿಸಿ ನಿವೇಶನ ಖರೀದಿಸಿದ್ದು, ಬಿಡಿಎ ಸ್ವಾಧೀನ ಪ್ರಮಾಣಪತ್ರ ನೀಡಿತು. ಆದರೆ, ಮನೆ ನಿರ್ಮಿಸಲು ಅಗತ್ಯ ಮೂಲಸೌಕರ್ಯಗಳು ಕಲ್ಪಿಸಿಲ್ಲ. ಈವರೆಗೂ ಅಭಿವೃದ್ಧಿ ಕಾರ್ಯ ಪೂರ್ಣಗೊಂಡಿಲ್ಲ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನ್ಯೂ ಟೆಕ್ ಪ್ರಮೋಟರ್ಸ್ ಮತ್ತು ಉತ್ತರ ಪ್ರದೇಶ ರಾಜ್ಯದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಅನ್ನು ರೇರಾ ಉಲ್ಲೇಖಿಸಿದೆ. ಬಿಡಿಎ ಪರ ವಕೀಲ ಬಿ. ವಚನ್ ಅವರು ಆಕ್ಷೇಪಣೆಗಳನ್ನು ಸಲ್ಲಿಸಲಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ನೀಡಲಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಲೋಕಕ್ಕೋಸ್ಕರ ಮತವೇ ಹೊರತು, ಮತಕ್ಕೋಸ್ಕರ ಲೋಕವಲ್ಲ.

–ಡಿ.ವಿ. ಗುಂಡಪ್ಪ

ಸಂಪಾದಕೀಯ

ಬಯಲು ಶೌಚ ಮುಕ್ತ ಕರ್ನಾಟಕ ಘೋಷಣೆಯ ಹುಳುಕು ಬಯಲು

ಕರ್ನಾಟಕ ರಾಜ್ಯವು ಬಯಲು ಬಹಿರ್ದೆಸೆಮುಕ್ತ ರಾಜ್ಯವಾಗಿದೆ, ಇತರ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ತಳಮಟ್ಟದಲ್ಲಿ ಪರಿಸ್ಥಿತಿ ಬೇರೆಯೇ ಇದೆ. ಆಕ್ಷನ್ ಏಡ್ ಕರ್ನಾಟಕ ಸಂಸ್ಥೆಯು ಇತ್ತೀಚೆಗೆ ನಡೆಸಿದ ಸಮೀಕ್ಷೆಯಿಂದ ಈ ವಿರೋಧಾಭಾಸವನ್ನು ಬಯಲಾಗಿಸಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಸಮೀಕ್ಷೆ ಮಾಡಲಾದ ಪರಿಶಿಷ್ಟ ಜಾತಿಗೆ (ಎಸ್‌ಸಿ) ಸೇರಿದ ಶೇ 50ಕ್ಕೂ ಹೆಚ್ಚು ಮನೆಗಳಲ್ಲಿ ಶೌಚಾಲಯ ಇಲ್ಲ. ಆದರೆ ಈ ಜಿಲ್ಲೆಯು ಬಯಲು ಬಹಿರ್ದೆಸೆ ಮುಕ್ತ ಎಂದು ಏಳು ವರ್ಷಗಳ ಹಿಂದೆಯೇ ಘೋಷಿಸಲಾಗಿದೆ. ಹಲವು ಗ್ರಾಮಗಳಲ್ಲಿ ಸಮುದಾಯ ಶೌಚಾಲಯಗಳು ಕೂಡ ಇಲ್ಲ. ಮಹಿಳೆಯರು ಬಯಲಿನಲ್ಲಿಯೇ ಬಹಿರ್ದೆಸೆಗೆ ಹೋಗಬೇಕಾದ ಶೋಚನೀಯ ಸ್ಥಿತಿ ಇದೆ. ಇದು ಮಹಿಳೆಯರ ಘನತೆಗೆ ಕುತ್ತು ತರುವುದರ ಜೊತೆಗೆ ಅವರನ್ನು ಅಪಾಯಕ್ಕೂ ಒಡ್ಡುತ್ತಿದೆ. ಇದು ಮೂಲಸೌಕರ್ಯ ಅಭಿವೃದ್ಧಿಯ ವೈಫಲ್ಯ ಮಾತ್ರವಾಗಿಯೂ ನೋಡಬಾರದು. ಸರ್ಕಾರಿ ಯೋಜನೆಗಳ ಲೆಕ್ಕಾಚಾರವು ನಮ್ಮ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ಅಸಮಾನತೆಯನ್ನು ಹೇಗೆ ಮುಚ್ಚಿಡುತ್ತದೆ ಎಂಬುದರ ಉದಾಹರಣೆಯೂ ಹೌದು. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೋಷಣೆಗೆ ಒಳಗಾದವರು. ಈಗ ಬಯಲು ಬಹಿರ್ದೆಸೆ ಮುಕ್ತ ಯೋಜನೆಯ ಸೌಲಭ್ಯ ಪಡೆದುಕೊಳ್ಳುವಲ್ಲಿಯೂ ಹಿಂದೆ ಬಿದ್ದಿದ್ದಾರೆ. ಈ ಸಮುದಾಯದಲ್ಲಿ ಬಯಲು ಬಹಿರ್ದೆಸೆ ಸಮಸ್ಯೆ ಈಗಲೂ ಇರುವುದು ಯೋಜನೆಯ ಅನುಷ್ಠಾನದ ಲೋಪ ಅಷ್ಟೇ ಅಲ್ಲ. ಯೋಜನೆ ಅನುಷ್ಠಾನ ಮಾಡುವಲ್ಲಿ ಇದ್ದ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ ಎಂಬುದನ್ನೂ ಇದು ಸೂಚಿಸುತ್ತದೆ. ಒತ್ತುವರಿಯಾದ ಮನೆಗಳು, ನೀರು ಪೂರೈಕೆಯಲ್ಲಿ ಸಮಸ್ಯೆ, ಸೌಲಭ್ಯಗಳ ಕುರಿತು ಜನರಿಗೆ ಅರಿವು ಇಲ್ಲ ಎಂಬುದರತ್ತ ಸರ್ಕಾರವು ಗಮನವನ್ನೇ ಹರಿಸಿಲ್ಲ ಎಂಬುದು ಈಗ ಬಯಲಾಗಿದೆ.



ಬಯಲು ಬಹಿರ್ದೆಸೆಮುಕ್ತ ಎಂದು ಕರ್ನಾಟಕ ಹೇಳಿಕೊಳ್ಳುತ್ತಿದೆ. ಆದರೆ, ಕಟ್ಟಕಡೆಯ ಕುಟುಂಬಕ್ಕೂ ಶೌಚಾಲಯ ದೊರೆಯದ ಹೊರತು 'ಬಯಲು ಶೌಚ ಮುಕ್ತ' ಎಂಬುದು ಕೇವಲ ದತ್ತಾಂಶವಷ್ಟೇ ವಾಸ್ತವವಲ್ಲ.

ಈಗ, ರಾಜ್ಯವು ಶೇಕಡ ನೂರರಷ್ಟು ಬಯಲು ಬಹಿರ್ದೆಸೆ ಮುಕ್ತವಾಗಿದೆ ಎಂಬ ಘೋಷಣೆಯನ್ನು ಸಂದೇಹದಿಂದಲೇ ನೋಡಬೇಕಾಗಿದೆ. ಇಂತಹ ಘೋಷಣೆಗಳು ಮುಖ್ಯವಾಗಿ ಆಡಳಿತಾತ್ಮಕ ವರದಿಗಳು ಮತ್ತು ಸ್ವಯಂಘೋಷಣೆಯ ಮೇಲೆ ಅವಲಂಬಿತವಾಗಿರುತ್ತವೆ. ಕಟ್ಟುನಿಟ್ಟಾದ ಮತ್ತು ಸ್ವತಂತ್ರವಾದ ಮರುಪರಿಶೀಲನಾ ವ್ಯವಸ್ಥೆ ಅಲ್ಲಿ ಸಾಮಾನ್ಯವಾಗಿ ಇರುವುದೇ ಇಲ್ಲ. ಶೋಷಿತ ಸಮುದಾಯಗಳಿಗೆ ಸೇರಿದ ಜನರ ಶೇಕಡ 50ರಷ್ಟು ಮನೆಗಳಲ್ಲಿ ಶೌಚಾಲಯ ಇಲ್ಲ ಎಂಬುದು ಸರ್ಕಾರ ನೀಡುವ ಅಂಕಿ ಸಂಖ್ಯೆಗಳನ್ನು ಪ್ರಶ್ನಿಸುವಂತೆ ಮಾಡುತ್ತದೆ. ಯೋಜನೆಯ ಅನುಷ್ಠಾನದಲ್ಲಿ ಇಂತಹ ಲೋಪ ಆಗಿರುವ ಪ್ರದೇಶ ಕೂಡ ಬಹಳಷ್ಟನ್ನು ಹೇಳುತ್ತದೆ. ಬೆಳಗಾವಿಯು ರಾಜ್ಯದ ಅತ್ಯಂತ ದೊಡ್ಡ ಜಿಲ್ಲೆ ಮತ್ತು ರಾಜಕೀಯವಾಗಿ ಪ್ರಭಾವಿಯಾಗಿರುವ ಜಿಲ್ಲೆ. ಜಾರಕಿಹೊಳಿ, ಕತ್ತಿ, ಹೆಬ್ಬಾಳಕರ, ಜೊಲ್ಲೆ, ಕೋರೆ ಮತ್ತು ಸವದಿಯಂತಹ ರಾಜಕೀಯ ಕುಟುಂಬಗಳ ಪ್ರಾಬಲ್ಯ ಇಲ್ಲಿ ಇದೆ. ಯಾವುದೇ ಪಕ್ಷ ಅಧಿಕಾರದಲ್ಲಿರುವಾಗಲೂ ಈ ಕುಟುಂಬಗಳ ಕೆಲವರು ಅಧಿಕಾರ ಸ್ಥಾನಗಳಲ್ಲಿ ಇರುತ್ತಾರೆ. ರಾಜಕೀಯವಾಗಿ ಇಷ್ಟೊಂದು ಪ್ರಾಬಲ್ಯ ಹೊಂದಿರುವ ಜಿಲ್ಲೆಯಲ್ಲಿ ಯೋಜನೆ ಅನುಷ್ಠಾನದಲ್ಲಿ ಆಗಿರುವ ಲೋಪವು ರಾಜಕೀಯ ಪ್ರಭಾವ ಮತ್ತು ಸಮಾನ ಅಭಿವೃದ್ಧಿಯ ನಡುವೆ ಪರಸ್ಪರ ಸಂಪರ್ಕ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದೆ. ರಾಜಕೀಯವಾಗಿ ಹೆಚ್ಚು ಪ್ರಭಾವಿಯಲ್ಲದ, ಹೆಚ್ಚು ಹಿಂದುಳಿದಿರುವ ಜಿಲ್ಲೆಗಳಲ್ಲಿ ಯೋಜನೆಯ ಅನುಷ್ಠಾನ ಕಳಪೆಯಾಗಿರಬಹುದು ಎಂಬ ಪ್ರಶ್ನೆ ಈಗ ಮೂಡುತ್ತದೆ. ಒಟ್ಟು ಆಂತರಿಕ ಉತ್ಪನ್ನ ಮತ್ತು ತಲಾ ಆದಾಯದಲ್ಲಿ ಮುಂದೆ ಇದ್ದೇವೆ ಎಂದು ಹೇಳಿಕೊಳ್ಳುವ ರಾಜ್ಯದಲ್ಲಿ ಇರುವ ಇಂತಹ ಸ್ಥಿತಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಈ ವಾಸ್ತವವನ್ನು ಬದಲಿಸಲು ಕೇವಲ ಗುರಿಗಳನ್ನು ಪುನರುಚ್ಚರಿಸಿದರೆ ಸಾಲದು. ಮೊದಲಿಗೆ ಬಯಲು ಶೌಚ ಮುಕ್ತ ಘೋಷಣೆಗಳ ಕುರಿತಾಗಿ ಸಮುದಾಯಗಳ ನಡುವಣ ಅಸಮಾನತೆಯನ್ನು ಕೇಂದ್ರವಾಗಿರಿಸಿಕೊಂಡು ಸ್ವತಂತ್ರ ಮತ್ತು ವಿಶ್ವಾಸಾರ್ಹವಾದ ಲೆಕ್ಕಪರಿಶೋಧನೆ ನಡೆಸಬೇಕು. ಎರಡನೆಯದಾಗಿ ಸ್ವಚ್ಛತೆ ಎಂಬುದನ್ನು ಶೌಚಾಲಯಗಳ ನಿರ್ಮಾಣಕ್ಕೆ ಸೀಮಿತಗೊಳಿಸದೆ, ನೀರಿನ ನಿರಂತರ ಪೂರೈಕೆ, ಸಣ್ಣ ಮನೆಗಳಿಗೂ ಹೊಂದುವಂತಹ ಸಣ್ಣ ಶೌಚಾಲಯಗಳ ವಿನ್ಯಾಸ, ಸಮುದಾಯ ಶೌಚಾಲಯಗಳ ಸ್ವಚ್ಛತೆಯನ್ನು ಖಚಿತಪಡಿಸುವ ಮೂಲಕ ಅವುಗಳ ಬಳಕೆಯನ್ನು ಸಾಧ್ಯವಾಗಿಸಬೇಕು. ಮೂರನೆಯದಾಗಿ ಶೌಚಾಲಯ ನಿರ್ಮಾಣಕ್ಕಾಗಿ ಲಭ್ಯವಿರುವ ಸಹಾಯಧನ ಮತ್ತು ಯೋಜನೆಗಳ ಕುರಿತಾಗಿ ಇರುವ ಅರಿವಿನ ಕೊರತೆಯನ್ನು ನೀಗಿಸಲು, ಮುಖ್ಯವಾಗಿ ಶೋಷಿತ ಸಮುದಾಯಗಳಲ್ಲಿ ಜಾಗೃತಿ ಮೂಡಿಸಲು ಅಭಿಯಾನವನ್ನು ನಡೆಸಬೇಕು. ಕಡೆಯದಾಗಿ ಕೊನೆಯ ವ್ಯಕ್ತಿಗೂ ಈ ಸವಲತ್ತು ತಲುಪುವಂತೆ ಮಾಡುವಲ್ಲಿ ಸ್ಥಳೀಯ ಮಟ್ಟದಲ್ಲಿ, ಅಂದರೆ ಪಂಚಾಯಿತಿ ಮತ್ತು ಸಮುದಾಯ–ಸಂಘಟನೆಗಳ ಮಟ್ಟದಲ್ಲಿ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ಶೌಚಾಲಯ ಸವಲತ್ತಿನಿಂದ ಹಲವರು ಹೊರಗುಳಿದಿರುವ ಸಂದರ್ಭದಲ್ಲಿ ಬಯಲು ಶೌಚ ಮುಕ್ತ ಎಂದು ಘೋಷಿಸಲಾಗದು. ಕಟ್ಟಕಡೆಯ ದುರ್ಬಲ ಕುಟುಂಬಕ್ಕೂ ಶೌಚಾಲಯ ದೊರೆಯದ ಹೊರತು 'ಬಯಲು ಶೌಚ ಮುಕ್ತ' ಎಂಬುದು ಕೇವಲ ದತ್ತಾಂಶವಷ್ಟೇ, ವಾಸ್ತವವಲ್ಲ.

ಕನ್ನಡವೇ ಸಾರ್ವಭೌಮ



ಕನ್ನಡದ ಬೇಲಿಗೆ ಹಿಂದಿ ಮುಳ್ಳು ಹಚ್ಚುವ ಕೆಲಸ ಯಾರಿಂದಲೂ ಆಗಬಾರದು. ನಮ್ಮದು ಭಾಷೆಯ ಆಧಾರದ ಮೇಲೆ ರಚನೆ ಆದ ರಾಜ್ಯ. ರಾಜ್ಯದ ಭಾಷೆ ಕನ್ನಡವೇ ಇಲ್ಲಿ ಸಾರ್ವಭೌಮವಾಗಿರಬೇಕು.

ಭೀಮಾಶಂಕರ ಪಾಟೀಲ್, ಅಧ್ಯಕ್ಷ, ಕರ್ನಾಟಕ ನವನಿರ್ಮಾಣ ಸೇನೆ, 'ಎಕ್ಸ್'ನಿಂದ

ಕಿಡಿನುಡಿ



ಮಹಿಳಾ ಮೀಸಲಾತಿ ಹೆಸರಿನಡಿ ಕ್ಷೇತ್ರ ಮರುವಿಂಗಡಣೆ ಮಸೂದೆಯ ಮೂಲಕ ಸಂಸತ್ತನ್ನು ಹೈಜಾಕ್ ಮಾಡಲು ಕೇಂದ್ರ ಸರ್ಕಾರ ಹೊರಟಿದೆ. ಇದು ಪ್ರಜಾಪ್ರಭುತ್ವದ ಮೇಲೆ ಎಸಗುತ್ತಿರುವ ಕುಟಿಲ ದಾಳಿ.

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

25 ವರ್ಷಗಳ ಹಿಂದೆ

ಮಂಗಳವಾರ, 17-4-2001

• **ಕಾಂಗ್ರೆಸ್‌ನಲ್ಲಿ ಜೇಬುಗಳ್ಳರಿದ್ದಾರೆ ಎಚ್ಚರಿಕೆ: ಕೌಜಲಗಿ**

ಬೆಂಗಳೂರು, ಏ. 16– 'ಕಾಂಗ್ರೆಸ್ ಪಕ್ಷದ ಒಳಗೇ ಜೇಬುಗಳ್ಳರಿದ್ದಾರೆ. ಕಾರ್ಯಕರ್ತರು ಎಚ್ಚರಿಕೆಯಿಂದ ಇರಿ'

ಈ ಮಾತನ್ನು ಹೇಳಿದವರು ಬೇರೆ ಯಾರೂ ಅಲ್ಲ. ಪಕ್ಷದ ಹಿರಿಯ ಮುಖಂಡ ಹಾಗೂ ಕೆಪಿಸಿಸಿ ಅಧ್ಯಕ್ಷ ಪದವಿಯಿಂದ ಇತ್ತೀಚೆಗಷ್ಟೇ ನಿರ್ಗಮಿಸಿದ ವಿ.ಎಸ್. ಕೌಜಲಗಿ ಅವರು.

ಕೆಪಿಸಿಸಿ ಹೊಸ ಅಧ್ಯಕ್ಷ ಅಲ್ಲಂ ವೀರಭದ್ರಪ್ಪ ಅವರಿಗೆ ಇಂದು ಅಧಿಕಾರ ಹಸ್ತಾಂತರಿಸಿದ ಸಮಾರಂಭದಲ್ಲಿ ಮಾತನಾಡಿದ ಅವರು, ಕಾರ್ಯಕರ್ತರಿಗೆ ಈ ಕರೆ ನೀಡಿದರು.

ಕಾಂಗ್ರೆಸ್‌ನಿಂದ ದೆಹಲಿಯಲ್ಲಿ ಏರ್ಪಡಿಸಿದ್ದ ರೈತರ ರ್‍ಯಾಲಿಯಲ್ಲಿ ಭಾಗವಹಿಸಿದ್ದಾಗ ತಮ್ಮ ಜೇಬಿಗೆ ಕತ್ತರಿ ಬಿದ್ದ ಸಂದರ್ಭವನ್ನು ನೆನಪಿಸಿಕೊಂಡ ಅವರು, ಪಕ್ಷದ ಒಳಗೇ ಜೇಬುಗಳ್ಳರಿ ದ್ದಾರೆ, ಹೊರಗಿಲ್ಲ ಎಂದರು.

75 ವರ್ಷಗಳ ಹಿಂದೆ

ಮಂಗಳವಾರ, 17-4-1951

• **ಡೆಕ್ಕನ್ ಏರ್‌ವೇಸ್ ಸಂಸ್ಥೆಯ ರಾಷ್ಟ್ರೀಕರಣ**

ನವದೆಹಲಿ, ಏ. 17– ಡೆಕ್ಕನ್ ಏರ್‌ವೇಸ್ ವಿಮಾನ ಸಂಸ್ಥೆಯ ಆಡಳಿತವನ್ನು ಭಾರತ ಸರ್ಕಾರವು ವಹಿಸಿಕೊಂಡು ಸ್ವತಂತ್ರ ಅಧಿಕಾರವುಳ್ಳ ಆಡಳಿತ ಸಮಿತಿಯ ಮೂಲಕ ಅದನ್ನು ಸರ್ಕಾರದ ವ್ಯವಸ್ಥೆಯನ್ನಾಗಿ ನಡೆಸಲಾಗುವುದೆಂದು ಸಂಪರ್ಕ ಶಾಖಾ ಸಚಿವ ರಫಿ ಅಹಮದ್ ಕಿದ್ವಾಯ ಅವರು ಈ ದಿನ ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಈ ಕಂಪೆನಿಯಲ್ಲಿರುವ ಶೇ 68ರಷ್ಟು ಹೈದರಾಬಾದ್ ಸರ್ಕಾರದ ಷೇರುಗಳನ್ನು ಭಾರತ ಸರ್ಕಾರವು ತೆಗೆದುಕೊಳ್ಳುವುದೆಂದೂ, ರೈಲ್ವೆ ಬೋರ್ಡ್ ಕಂಪೆನಿಯ ಶೇ 10.2ರಷ್ಟು ಷೇರುಗಳನ್ನು ಪಡೆದಿದೆಯೆಂದೂ, ಸಾರ್ವಜನಿಕರು ತಮ್ಮ ಷೇರುಗಳನ್ನು ಸರ್ಕಾರಕ್ಕೆ ಮಾರಬಹುದೆಂದೂ ಇಲ್ಲವೇ ಸದ್ಯಕ್ಕೆ ತಾವೇ ಪಡೆದಿರಬಹುದೆಂದೂ ಅವರು ಹೇಳಿದರು.

ದಾರಿ ಯಾವುದಯ್ಯ ಶಬರಿಮಲೆಗೆ?



ವಿಶ್ಲೇಷಣೆ

ಕೆ.ಎಲ್. ಚಂದ್ರಶೇಖರ್ ಐಜೂರ್

> ಶಬರಿಮಲೆ ದೇಗುಲಕ್ಕೆ ಮಹಿಳೆಯರಿಗೆ ಪ್ರವೇಶ ನೀಡಬೇಕೇ ಬೇಡವೇ ಎನ್ನುವ ವಿಷಯದ ಕುರಿತು ನಡೆಯುತ್ತಿರುವ ಚರ್ಚೆಗಳು ಸಂವಿಧಾನಮಾರ್ಗಿಗಳನ್ನು ಕಳವಳಕ್ಕೆ ದೂಡುವಂತಿವೆ. ಸಾಂವಿಧಾನಿಕ ನೈತಿಕತೆಯನ್ನು ಧಾರ್ಮಿಕ ನೈತಿಕತೆಯು ನಿಯಂತ್ರಿಸುತ್ತಿರುವಂತೆ ಈ ವಿದ್ಯಮಾನವು ಕಾಣಿಸುತ್ತಿದೆ; ಲಿಂಗತಾರತಮ್ಯ ಆಚರಣೆಯನ್ನು ಅಧಿಕೃತಗೊಳಿಸುವಂತಿದೆ.

ಋತುಚಕ್ರದ ನೆಪವೊಡ್ಡಿ ಶಬರಿಮಲೆ ಅಯ್ಯಪ್ಪಸ್ವಾಮಿ ದೇಗುಲ ಪ್ರವೇಶಿಸಲು ಮಹಿಳೆಯರನ್ನು ನಿರ್ಬಂಧಿಸಿರುವ ದೇವಸ್ಥಾನದ ಆಡಳಿತ ಮಂಡಳಿ ಮತ್ತು ಅದರ ಬೆನ್ನಿಗೆ ನಿಂತಿರುವ ಕೇಂದ್ರ ಸರ್ಕಾರದ ನಿಲುವು ಆಘಾತ ಉಂಟುಮಾಡುವಂತಹದ್ದು. ಈ ಪ್ರಕರಣವು ಸುಪ್ರೀಂ ಕೋರ್ಟ್‌ನಲ್ಲಿ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಮುಂದೆ ವಿಚಾರಣೆಗೆ ಬಂದಿದೆ. ಆ ಪೀಠದಲ್ಲಿ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರನ್ನು ಬಿಟ್ಟರೆ, ಉಳಿದ ಎಲ್ಲ ನ್ಯಾಯಮೂರ್ತಿಗಳೂ ಪುರುಷರೇ ಎಂಬುದು ಈ ಪ್ರಕರಣಕ್ಕೂ ಮತ್ತು ಈ ಕಾಲಕ್ಕೂ ವ್ಯಂಗ್ಯದಂತೆ ತೋರುತ್ತಿದೆ.

ಈ ಹಿಂದೆ ಮುಟ್ಟು ಮೈಲಿಗೆ ಹಾಗೂ ಹೆಣ್ತನದ ಕಾರಣವೊಡ್ಡಿ ಮಹಿಳೆಯರಿಗೆ ದೇವಾಲಯ ಪ್ರವೇಶ ನಿರ್ಬಂಧಿಸುವುದು ಅಮಾನವೀಯ ಹಾಗೂ ಅಸಾಂವಿಧಾನಿಕ ಎಂದು ಪರಿಭಾವಿಸಿದ 'ಇಂಡಿಯನ್ ಯಂಗ್ ಲಾಯರ್ಸ್ ಅಸೋಸಿಯೇಷನ್'ನ, ವೈಚಾರಿಕ ಪ್ರಜ್ಞೆಯ ಐವರು ಯುವ ಮಹಿಳಾ ವಕೀಲರು ಅಯ್ಯಪ್ಪಸ್ವಾಮಿ ದೇವಸ್ಥಾನ ಪ್ರವೇಶ ನಿಷೇಧವನ್ನು ಪ್ರಶ್ನಿಸಿದ್ದರು; ದೇವಸ್ಥಾನದ ಆಡಳಿತ ಮಂಡಳಿ ಮತ್ತು ಕೇರಳ ರಾಜ್ಯ ಸರ್ಕಾರದ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಹೂಡಿದ್ದರು. ಅದಕ್ಕೆ ಸಂಬಂಧಿಸಿದ, 'ಇಂಡಿಯನ್ ಯಂಗ್ ಲಾಯರ್ಸ್ ಅಸೋಸಿಯೇಷನ್ ಮತ್ತು ಇತರರ ವಿರುದ್ಧ ಕೇರಳ ರಾಜ್ಯ ಮತ್ತು ಇತರರು' ಪ್ರಕರಣವನ್ನು ಸೂಕ್ಷ್ಮವಾಗಿ ಗಮನಿಸಬೇಕಿದೆ:

ಕೇರಳದ ಪಥನಮ್‌ತಿಟ್ಟ ಜಿಲ್ಲೆಯಲ್ಲಿರುವ ಶಬರಿಮಲೆ ಅಯ್ಯಪ್ಪ ದೇವಸ್ಥಾನವು ಭಾರತದ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾಗಿದೆ. ಸದರಿ ದೇವಸ್ಥಾನದ ಆಡಳಿತ ಮಂಡಳಿಯು ಮುಟ್ಟು ಮೈಲಿಗೆಯ ಕಾರಣ ನೀಡಿ ಹತ್ತರಿಂದ ಐವತ್ತರ ವಯೋಮಾನದ ಮಹಿಳೆಯರಿಗೆ ಮಂದಿರಕ್ಕೆ ಪ್ರವೇಶವನ್ನು ಅನೇಕ ವರ್ಷಗಳಿಂದ ನಿರಾಕರಿಸುತ್ತಾ ಬಂದಿದೆ. ಇದಕ್ಕೆ ಪೂರಕವಾಗಿ ಹೆಣ್ಣನ್ನು ದೇಗುಲದಿಂದ ಹೊರಗಿಡುವ ಪುರಾಣದ ಕಥೆಗಳನ್ನು ಗುರಾಣಿಯಂತೆ ಆಡಳಿತ ಮಂಡಳಿ ಬಳಸಿಕೊಂಡಿದೆ. ಆಡಳಿತ ಮಂಡಳಿಯ ಈ ನಡೆಯನ್ನು ಖಂಡಿಸಿ, ಕೇರಳದ ಐವರು ವಕೀಲೆಯರು ಹಾಗೂ ಮಹಿಳಾ ಹೋರಾಟಗಾರರು ದೇವಸ್ಥಾನ ಪ್ರವೇಶಿಸಲು ಮುಂದಾದರು. ಆ ಸಂದರ್ಭದಲ್ಲಿ ಅವರ ಮೇಲೆ ಆಡಳಿತ ಮಂಡಳಿಯ ಕೆಲವರು ಹಲ್ಲೆ ನಡೆಸಿದರು. ದೈಹಿಕ, ಮಾನಸಿಕ ಕಿರುಕುಳಕ್ಕೂ ಅವರು ಮುಂದಾದರು. ಕೇರಳ ಸರ್ಕಾರ ಕೂಡ ದೇವಸ್ಥಾನದ ಆಡಳಿತ ಮಂಡಳಿಯ ಪರ ನಿಂತು, ತನ್ನ ಸ್ತ್ರೀವಿರೋಧಿ ಧೋರಣೆಯನ್ನು ನೇರವಾಗಿಯೇ ಬಹಿರಂಗಪಡಿಸಿತು.

ನ್ಯಾಯಮೂರ್ತಿಗಳಾದ ದೀಪಕ್ ಮಿಶ್ರಾ, ಆರ್.ಎಫ್. ನಾರಿಮನ್, ಡಿ.ವೈ. ಚಂದ್ರಚೂಡ್, ಎ.ಎಂ. ಖನ್ವಿಲ್ಕರ್ ಹಾಗೂ ಇಂದು ಮಲ್ಹೋತ್ರಾರನ್ನು ಒಳಗೊಂಡ ಸುಪ್ರೀಂ ಕೋರ್ಟ್‌ನ ಪಂಚ ಸದಸ್ಯ ಪೀಠವು ತನ್ನ ಅಂತಿಮ ನಿರ್ಣಯವನ್ನು ನೀಡಿತು. ಐವರಲ್ಲಿ ನಾಲ್ವರು ನ್ಯಾಯಮೂರ್ತಿಗಳು ಮಹಿಳೆಯರ ದೇವಸ್ಥಾನ ಪ್ರವೇಶದ ಪರವಾಗಿದ್ದರೆ, ಒಬ್ಬರು ವಿರುದ್ಧವಾಗಿದ್ದರು. ಆ ತೀರ್ಪಿನ ಸಾರ ಹೀಗಿದೆ:

'ಹೆಣ್ಣು, ಹೆಣ್ತನ, ಮುಟ್ಟು ಮೈಲಿಗೆಯ ಕಾರಣದಿಂದ ಮಹಿಳೆಯರಿಗೆ ದೇವಸ್ಥಾನ ಪ್ರವೇಶವನ್ನು ನಿರಾಕರಿಸುವುದು ಭಾರತ ಸಂವಿಧಾನದ ಆರ್ಟಿಕಲ್‌ಗಳಾದ 14, 15, 19(1), 21, 25, 25(1) ಮತ್ತು 26ರ ಸ್ಪಷ್ಟ ಉಲ್ಲಂಘನೆಯಾಗಿದೆ. ಪ್ರತಿವಾದಿಗಳಾದ ಕೇರಳ ರಾಜ್ಯ ಸರ್ಕಾರ ಹಾಗೂ ಶಬರಿ ಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನದ ಆಡಳಿತ ಮಂಡಳಿಯು 1965ರ 'ಕೇರಳ ಹಿಂದೂ ಪ್ಲೇಸಸ್ ಆಫ್ ಪಬ್ಲಿಕ್ ವರ್ಶಿಪ್ ಕಾಯ್ದೆ'ಯ ಆಧಾರದ ಮೇಲೆ ಮಹಿಳೆಯರ ದೇವಸ್ಥಾನ ಪ್ರವೇಶ ನಿರಾಕರಣೆಯು ಸಾಂವಿಧಾನಿಕ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಯಾಗುವುದಿಲ್ಲ ಎಂದು ಹೇಳಿರುವುದು ಅತ್ಯಂತ ಆಘಾತಕಾರಿಯಾದುದು ಮತ್ತು ಅಮಾನವೀಯವೂ ಹೌದು.

ಮುಟ್ಟು ಎಂಬುದು ಹೆಣ್ಣಿನ ದೈಹಿಕ ರಚನೆಯ ಮೇಲೆ ನಿಂತಿರುವ ಜೈವಿಕ ಸಂಗತಿಯಾಗಿದೆ. ಹೆಣ್ಣಿನ ದೇಹಪ್ರಕೃತಿ ಹಾಗೂ ಶಾರೀರಿಕ ಬೆಳವಣಿಗೆಯ ಆಧಾರದ ಮೇಲೆ ಮುಟ್ಟನ್ನು ವೈಜ್ಞಾನಿಕವಾಗಿ ನೋಡಬೇಕು. ಮಡಿ ಮೈಲಿಗೆಯ ಕಾರಣ ನೀಡಿ ಮಹಿಳೆಯರಿಗೆ ದೇವಸ್ಥಾನ ಪ್ರವೇಶವನ್ನು ನಿರಾಕರಿಸುವುದು ಲಿಂಗ ತಾರತಮ್ಯವಲ್ಲದೇ ಮತ್ತೇನೂ ಅಲ್ಲ. ಮಡಿ ಮೈಲಿಗೆಗೆ ಮನ್ನಣೆ ನೀಡುವುದಾದರೆ ಭಾರತದ ಒಂದೇ ಒಂದು ದೇವಸ್ಥಾನಕ್ಕೂ ಯಾವ ಮಹಿಳೆಯೂ ಪ್ರವೇಶ ಪಡೆಯಲಾರಳು. ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ಮಹಿಳೆಯ ಪ್ರವೇಶ ನಿರಾಕರಿಸಿರುವ ದೇವಸ್ಥಾನದ ಆಡಳಿತ ಮಂಡಳಿಯ ನಡೆಯ ಜೊತೆಗೆ, ಅದರ ಬೆನ್ನಿಗೆ ನಿಂತು ಪೊರೆಯ ಹೊರಟಿರುವ ಕೇರಳ ಸರ್ಕಾರ ಎಸಗಿರುವ ಕೃತ್ಯ ಅತ್ಯಂತ ಹೇಯವಾದುದು.'

ಐವರು ನ್ಯಾಯಮೂರ್ತಿಗಳ ಪೀಠದಲ್ಲಿದ್ದ ಏಕೈಕ ಮಹಿಳಾ ನ್ಯಾಯಮೂರ್ತಿ ಇಂದು ಮಲ್ಹೋತ್ರಾ ಅವರು ಮಾತ್ರ, 'ತೀವ್ರ ಧಾರ್ಮಿಕ ಭಾವನೆ, ಧಾರ್ಮಿಕ ಆಚರಣೆ, ದೇವಾಲಯ ಪ್ರವೇಶದಂತಹ ಅತಿಸೂಕ್ಷ್ಮ ವಿಚಾರಗಳಲ್ಲಿ ನ್ಯಾಯಾಲಯವು ಯಾವುದೇ ಹಸ್ತಕ್ಷೇಪ ಮಾಡದೆ ದೂರವಿರುವುದೇ ಒಳ್ಳೆಯದು' ಎಂಬ ಅಭಿಪ್ರಾಯಕ್ಕೆ ಬಂದು ನಿಂತರು.

ಸುಪ್ರೀಂ ಕೋರ್ಟ್‌ನ ಬಹುಮತದ ತೀರ್ಪು ಮಹಿಳೆಯರ ಪರವಾಗಿ ಬಂದರೂ ಕೂಡ, ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ಮಹಿಳೆಯರಿಗೆ ಪ್ರವೇಶ ದೊರಕಿಸಿಕೊಡುವ ಕುರಿತು ಕೇರಳ ಸರ್ಕಾರವು ಇಂದಿಗೂ ಯಾವುದೇ ಇಚ್ಛಾಶಕ್ತಿ ತೋರದೆ, ಯಥಾಸ್ಥಿತಿಯನ್ನು ಮುಂದುವರಿಸುತ್ತಾ ಪ್ರಕರಣವನ್ನು ಇನ್ನಷ್ಟು ಜಟಿಲ ಮಾಡಿದೆ. ಇದು ಭಾರತದ ಲಿಖಿತ ಸಂವಿಧಾನದ ಎದುರು ಸಾಂಪ್ರದಾಯಿಕ ಅಲಿಖಿತ ಸಂವಿಧಾನವು ತೋರುತ್ತಿರುವ ದರ್ಪದಂತೆ ಕಾಣುತ್ತಿದೆ.

ಅಯ್ಯಪ್ಪಸ್ವಾಮಿ ಭಕ್ತರಲ್ಲದವರು ಮಹಿಳೆಯರ ಪ್ರವೇಶ ಕೋರಿ ಪಿಐಎಲ್ ಅರ್ಜಿ ಸಲ್ಲಿಸಬಹುದೇ ಎಂಬ ಪ್ರಶ್ನೆಯನ್ನು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಕೇಂದ್ರ ಸರ್ಕಾರದ ಪರ ವಾದಿಸುತ್ತಿರುವ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಕೇಳಿದ್ದಾರೆ. ಅದಕ್ಕೆ ತುಷಾರ್ ಮೆಹ್ತಾ ಅವರು 'ಅರ್ಜಿ ಸಲ್ಲಿಸಿರುವವರು ನಾಸ್ತಿಕರು ಹಾಗೂ ವೈಚಾರಿಕ ಮನೋಧರ್ಮದ ಇಂಡಿಯನ್ ಯಂಗ್ ಲಾಯರ್ಸ್ ಅಸೋಸಿಯೇಷನ್‌ನ ವಕೀಲರು, ಅವರು ದೇವಸ್ಥಾನದ ಭಕ್ತರಲ್ಲ' ಎಂಬ ಉತ್ತರ ನೀಡಿದ್ದಾರೆ. ಮತ್ತೆ ಮುಂದುವರಿದು ನ್ಯಾಯಮೂರ್ತಿ ನಾಗರತ್ನ ಅವರು, 'ಅಯ್ಯಪ್ಪ ಸ್ವಾಮಿಯ ಭಕ್ತರು ಯಾರಾದರೂ ಅಂತಹ ಅರ್ಜಿಯನ್ನು ಸಲ್ಲಿಸಬಹುದೇ ಮತ್ತು ಭಕ್ತರಲ್ಲದವರು, ದೇವಾಲಯದ ಬಗ್ಗೆ ಯಾವುದೇ ತರಹದ ಕಾಳಜಿಯಿಲ್ಲದ ವ್ಯಕ್ತಿಯೊಬ್ಬರು ಅದನ್ನು ಪ್ರಶ್ನಿಸಿದರೆ, ಈ ನ್ಯಾಯಾಲಯವು ಅಂತಹ ಅರ್ಜಿಯನ್ನು ಸ್ವೀಕರಿಸಬಹುದೇ?' ಎಂಬ ಮತ್ತೆರಡು ಪ್ರಶ್ನೆಗಳನ್ನು ತುಷಾರ್ ಮೆಹ್ತಾ ಅವರ ಮುಂದಿಟ್ಟಿದ್ದಾರೆ.

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಅನ್ನುವುದೇ ಸಾರ್ವಜನಿಕ ಹಿತವನ್ನು ಬಯಸುವ ದಾವೆಯಾಗಿದೆ. ತನ್ನ ಊರಿಗೊಂದು ಆಸ್ಪತ್ರೆ ಕೊಡಿ, ರಸ್ತೆ ನಿರ್ಮಿಸಿ, ಶಾಲೆ ಕೊಡಿ, ಶಾಲೆಗೊಂದು ಗ್ರಂಥಾಲಯ ಕೊಡಿ ಎನ್ನುವುದು ಹೇಗೆ ಸಾರ್ವಜನಿಕ ಹಿತವನ್ನು ಬಯಸುವುದೋ ಹಾಗೆಯೇ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇಗುಲಕ್ಕೆ ಮಹಿಳೆಯರ ಪ್ರವೇಶಕ್ಕೆ ಅಹವಾಲು ಸಲ್ಲಿಸುವುದು ಕೂಡ ಸಾರ್ವಜನಿಕ ಹಿತಾಸಕ್ತಿಯ ಚೌಕಟ್ಟಿನೊಳಗೆ ಬರುತ್ತದೆ. ಅಯ್ಯಪ್ಪಸ್ವಾಮಿ ಭಕ್ತರು ಮಾತ್ರ ಹೆಣ್ಣುಮಕ್ಕಳ ದೇವಾಲಯ ಪ್ರವೇಶದ ಕುರಿತು ಪ್ರಶ್ನಿಸಬಹುದು, ಪಿಐಎಲ್ ಅರ್ಜಿ ಸಲ್ಲಿಸಬಹುದು ಎಂದು ಹೇಳಹೊರಟಿರುವ ನ್ಯಾಯಮೂರ್ತಿಗಳ ವಾದಕ್ರಮವೇ ಅಸಮಂಜಸ ಅನ್ನಿಸುತ್ತದೆ. ದೇಶದ ಅತ್ಯುನ್ನತ ನ್ಯಾಯಾಲಯದ ವಾದಸರಣಿ, ಧರ್ಮಸ್ಥಳದಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲೆಗೀಡಾದ 'ಸೌಜನ್ಯಾ ಪ್ರಕರಣ'ದ ಕುರಿತು ಆಕೆಯ ಕುಟುಂಬದ ಮಂದಿ ಮಾತ್ರ ದನಿ ತೆಗೆಯಬೇಕು ಅನ್ನುವಂತಿದೆ.

ಸುಪ್ರೀಂ ಕೋರ್ಟ್‌ನ ಪ್ರಶ್ನೆಗಳಿಗೆ ಮೆಹ್ತಾ ಅವರು, 'ಹಿಂದೂ ಧರ್ಮವು ಆಂತರಿಕ ಬಹುತ್ವವನ್ನು ಹೊಂದಿದೆ, ಮತ್ತು ಯಾವ ಧಾರ್ಮಿಕ ಆಚರಣೆ ಅಗತ್ಯ ಅಥವಾ ಅಲ್ಲ ಎಂಬುದನ್ನು ನ್ಯಾಯಾಲಯವು ಪರಿಶೀಲಿಸುವುದು ತುಂಬಾ ಕಷ್ಟಕರವಾಗಿರುತ್ತದೆ. ಶಬರಿಮಲೆಯ ಅಯ್ಯಪ್ಪಸ್ವಾಮಿಯಂತಹ ದೇವರ ಗುಣಲಕ್ಷಣಗಳ ಸಿಂಧುತ್ವ, ಕಾನೂನುಬದ್ಧತೆ, ಔಚಿತ್ಯ ಅಥವಾ ವೈಚಾರಿಕತೆಯನ್ನು ಜಾತ್ಯತೀತ ನ್ಯಾಯಾಲಯಗಳು ನ್ಯಾಯಾಂಗವಾಗಿ ಪರಿಶೀಲಿಸಲು ಸಾಧ್ಯವಿಲ್ಲ. ಸಾಂವಿಧಾನಿಕ ನೈತಿಕತೆಯ ಹೆಸರಿನಲ್ಲಿ ನಮ್ಮ ನ್ಯಾಯಾಲಯಗಳು ಜನರ ನಂಬಿಕೆಗಳನ್ನು ಒಂದೇ ಏಟಿಗೆ ನುಚ್ಚುನೂರು ಮಾಡಬಾರದು' ಎಂಬ ತಣ್ಣನೆಯ ಉತ್ತರ ನೀಡಿದ್ದಾರೆ. ಇದಕ್ಕೆ 'ಸಂವಿಧಾನದ ನೈತಿಕತೆಯೇ ಸಂವಿಧಾನದ ಧರ್ಮವಲ್ಲವೇ?' ಎಂಬ ಮತ್ತೊಂದು ಪ್ರಶ್ನೆಯನ್ನು ನಾಗರತ್ನ ಅವರು ಮೆಹ್ತಾರಿಗೆ ಕೇಳಿದ್ದಾರೆ.

ಮೆಹ್ತಾ ಅವರು 'ನಾವು ಸಾಮಾಜಿಕ ಮೌಲ್ಯಗಳು ಮತ್ತು ಸಾಮಾಜಿಕ ನೈತಿಕತೆಯ ಮೂಲಕ ಹೋಗಲು ಸಾಧ್ಯವಿಲ್ಲ. ಏಕೆಂದರೆ, ಅದು ಜನಸಮೂಹದ ನೈತಿಕತೆಯಾಗಿದೆ. ಸಾಂವಿಧಾನಿಕ ನೈತಿಕತೆಯ ಮೂಲಕ ಜನರ ಧಾರ್ಮಿಕ ನೈತಿಕತೆಯನ್ನು ಹತ್ತಿಕ್ಕುವುದು ಎಷ್ಟು ಸರಿ?' ಎಂಬ ಮರುಪ್ರಶ್ನೆಯನ್ನು ಸಂವಿಧಾನ ಪೀಠಕ್ಕೆ ಕೇಳಿದ್ದಾರೆ.

ಈ ಪ್ರಶ್ನೋತ್ತರವು ವಾದಕ್ಕೆ ಪ್ರತಿವಾದ ತತ್ತ್ವದ ಆಧಾರದ ಮೇಲೆ, ಹುಸಿ ನೈತಿಕತೆಯ ಹೆಸರಿನಲ್ಲಿ, ದೇಶದ ಮಹಿಳೆಯರನ್ನು ಇನ್ನಷ್ಟು ಕತ್ತಲಲ್ಲಿಡುವ, ಮರೆಮೋಸದ ದಾರಿಗಳಿಗೆ ಕಣ್ಣು, ಕಿವಿ ತೆರೆಯದೆ ಸರ್ವೋಚ್ಚ ನ್ಯಾಯಾಲಯವು ತೆಪ್ಪಗಿರಬೇಕು ಅನ್ನುವ ಧೋರಣೆಯ ಮೇಲೆ ನಿಂತಂತಿದೆ. ಈ ಧೋರಣೆಯು ಸಂವಿಧಾನಮಾರ್ಗಿಗಳನ್ನು ಕಳವಳಕ್ಕೂ, ಆತಂಕಕ್ಕೂ ಈಡುಮಾಡುವಂತಿದೆ.

ಲೇಖಕ: ಕಾನೂನು ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ



ವಾಚಕರ ವಾಣಿ

ಉದ್ಯೋಗ ಭರ್ತಿ: ಮಾತು ಮರೆತ ಸರ್ಕಾರ

ಫೆಬ್ರುವರಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ 56,432 ಸರ್ಕಾರಿ ಹುದ್ದೆಗಳ ನೇಮಕಾತಿಗೆ ಒಪ್ಪಿಗೆ ನೀಡಲಾಗಿತ್ತು. ಇದು ಉದ್ಯೋಗಾಕಾಂಕ್ಷಿಗಳಲ್ಲಿ ಹೊಸ ಭರವಸೆಯನ್ನು ಹುಟ್ಟಿಸಿತ್ತು. ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ಹೋರಾಟಕ್ಕಿಳಿದಾಗ ಎಚ್ಚತ್ತುಕೊಂಡಿದ್ದ ಸರ್ಕಾರ ಈಗ ಕಿವುಡಾಗಿದೆ. ಯಾವುದೇ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸದೆ ಕಾಲಹರಣ ಮಾಡುತ್ತಿದೆ. ಯುವಜನರ ವಯಸ್ಸು ಮೀರುತ್ತಿದ್ದು, ಕನಸುಗಳು ಕಮರಿಹೋಗುತ್ತಿವೆ. ಸರ್ಕಾರಿ ಉದ್ಯೋಗಕ್ಕಾಗಿ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳನ್ನು ಜನರು ಅನುಕಂಪದಿಂದ ನೋಡುತ್ತಿದ್ದಾರೆ. ಸಚಿವಾಲಯದ ಕಚೇರಿಗಳಲ್ಲಿ ಕಡತಗಳ ವಿಲೇವಾರಿಗಾಗಿ ಇ-ಆಫೀಸ್ ಕಡ್ಡಾಯಗೊಳಿಸಲಾಗಿದೆ. ಆಡಳಿತದಲ್ಲಿ ವೇಗ ಮತ್ತು ಪಾರದರ್ಶಕತೆ ಹೆಚ್ಚಿಸುವುದು ಇದರ ಉದ್ದೇಶ. ಆದರೆ, ಇಲ್ಲಿಯೂ ಭ್ರಷ್ಟಾಚಾರ ಮಿತಿಮೀರಿದೆ.

ಶಾಂತಕುಮಾರ್ ಭಾವಿಮನಿ, ರಾಯಚೂರು

ಸೊಬಗಿನ ಯಾಣ; ಸೌಲಭ್ಯವಿಲ್ಲದೆ ಹೈರಾಣ

ಇತ್ತೀಚೆಗೆ ಸ್ನೇಹಿತರೊಂದಿಗೆ ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲ್ಲೂಕಿನ ಯಾಣಕ್ಕೆ ಪ್ರವಾಸ ಹೋಗಿದ್ದೆ. ಅಲ್ಲಿ ಪ್ರವಾಸಿಗರಿಗೆ ಕುಡಿಯುವ ನೀರು, ಶೌಚಾಲಯ, ಹೋಟೆಲ್ ಸೇರಿದಂತೆ ಯಾವುದೇ ಮೂಲಸೌಕರ್ಯ ಇಲ್ಲ. ಪ್ರವೇಶದ್ವಾರ ತೆಗೆದಿದ್ದು ಬೆಳಿಗ್ಗೆ 8:45ಕ್ಕೆ. ಹಸಿವಿನ ನಡುವೆಯೇ ತರಾತುರಿಯಲ್ಲಿ ವೀಕ್ಷಿಸಿ ಬೇರೆಡೆ ಉಪಾಹಾರಕ್ಕೆ ತೆರಳಿದೆವು. ಯಾಣದ ಪ್ರಕೃತಿ ಸೌಂದರ್ಯ ಸವಿಯಲು ಹೊರರಾಜ್ಯ ಸೇರಿ ರಾಜ್ಯದ ವಿವಿಧೆಡೆಯಿಂದ ನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಇಂತಹ ಪ್ರವಾಸಿ ತಾಣಗಳಲ್ಲಿ ಕನಿಷ್ಠ ಸೌಕರ್ಯ ಕಲ್ಪಿಸದಿದ್ದರೆ ಹೇಗೆ? ಸರ್ಕಾರವು ಪ್ರವಾಸಿ ಸ್ಥಳಗಳಿಂದ ಆದಾಯ ನಿರೀಕ್ಷಿಸುವುದಕ್ಕಷ್ಟೆ ಸೀಮಿತವಾಗಬಾರದು. ಅದಕ್ಕೆ ತಕ್ಕಂತೆ ಸೌಲಭ್ಯ ಒದಗಿಸಬೇಕಲ್ಲವೆ?

ಮುರುಗೇಶ ಡಿ., ದಾವಣಗೆರೆ

ಬಣ್ಣದ ಮಾತು: ಪ್ರಯೋಜನ ಏನು?

ಆದಿಚುಂಚನಗಿರಿ ಮಠದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿಯವರು, 'ರಾಗಿಮುದ್ದೆ ಲೋಕಪ್ರಿಯವಾಗಲು ದೇವೇಗೌಡರು ಕಾರಣ; ಸಿರಿಧಾನ್ಯ ಬಳಕೆಯಿಂದ ಬೊಜ್ಜಿನ ಸಮಸ್ಯೆ ಪರಿಹಾರ ಆಗುತ್ತದೆ' ಎಂದು ಹೇಳಿದ್ದಾರೆ. ಇವು ಬಣ್ಣದ ಮಾತುಗಳಷ್ಟೆ. ರಾಜ್ಯಕ್ಕೆ ನ್ಯಾಯಯುತವಾಗಿ ನೀಡಬೇಕಿರುವ ಸೌಲಭ್ಯಗಳ ಬಗ್ಗೆ ಪ್ರಸ್ತಾಪಿಸದ ಪ್ರಧಾನಿ, ಕನ್ನಡಿಗರನ್ನು ಮತ್ತೊಮ್ಮೆ ನಿರಾಸೆಗೊಳಿಸಿದ್ದಾರೆ. ಬಣ್ಣದ ಮಾತಿನ ಬದಲು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಲ್ಲಿಸಿದ ಬೇಡಿಕೆಗಳ ಪೈಕಿ ಒಂದನ್ನಾದರೂ ಈಡೇರಿಸುವ ಬದ್ಧತೆ ಪ್ರದರ್ಶಿಸಿದ್ದರೆ ಅವರ ಮೇಲೆ ಕನ್ನಡಿಗರಿಗೆ ಅಭಿಮಾನ ಇಮ್ಮಡಿಸುತ್ತಿತ್ತು. ರಾಗಿ ಬಳಕೆಯು ಆರೋಗ್ಯಕ್ಕೆ ಒಳ್ಳೆಯ ಆಹಾರ ಎಂಬುದರಲ್ಲಿ ಹೊಸ ಸಂಗತಿ ಏನೂ ಅಲ್ಲ. ರಾಗಿಮುದ್ದೆ ಹಾಗೂ ಮಾಜಿ ಪ್ರಧಾನಿ ದೇವೇಗೌಡರ ಬಗ್ಗೆ ಆಡಿರುವ ಭಾವನಾತ್ಮಕ ಮಾತುಗಳಿಂದ ರಾಜ್ಯದ ಜನತೆಗೆ ಆಗುವ ಪ್ರಯೋಜನವಾದರೂ ಏನು?

ಎಂ.ಜಿ. ರಂಗಸ್ವಾಮಿ, ಹಿರಿಯೂರು

ಮೌಲ್ಯಮಾಪನ ಲೋಪರಹಿತವಾಗಿರಲಿ

'ಇಂಗ್ಲಿಷ್ ಮೌಲ್ಯಮಾಪನ: ಬೇಕಿದೆ ಸ್ಪಷ್ಟ ಮಾದರಿ' ಲೇಖನವು (ಲೇ: ಆರತಿ ಪಟ್ರಮೆ, ಪ್ರ.ವಾ., ಏ. 16) ಮೌಲ್ಯಮಾಪಕರ ಅದಕ್ಷತೆಗೆ ಹಿಡಿದ ಕನ್ನಡಿ. ಬಹುತೇಕ ಮೌಲ್ಯಮಾಪಕರು ಮೌಲ್ಯಮಾಪನ ಕಾರ್ಯವನ್ನು ತಮ್ಮ ವೃತ್ತಿಯ ಭಾಗವೆಂದು ಪರಿಗಣಿಸುವುದಿಲ್ಲ; ಅದೊಂದು ಅನವಶ್ಯಕ ಹೊರೆಯೆಂದು ಭಾವಿಸುತ್ತಾರೆ. ಕೆಲವು ಮೌಲ್ಯಮಾಪಕರಲ್ಲಿ ವಿಷಯದ ಜ್ಞಾನ, ವೃತ್ತಿಪರತೆಯ ಕೊರತೆಯಿದ್ದರೆ; ಮತ್ತೆ ಕೆಲವರು ಕಾಟಾಚಾರಕ್ಕೆ ಮೌಲ್ಯಮಾಪನ ಮಾಡುತ್ತಾರೆ. ಇಂತಹವರಿಂದ ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನ ಪರಿಸ್ಥಿತಿಯಲ್ಲಿದೆ. ಪಿಯು ಮಂಡಳಿಯು ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಹಾಗೂ ಕರ್ತವ್ಯಲೋಪ ಎಸಗುವ ಮೌಲ್ಯಮಾಪಕರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.

ಜಯಮಹದೇವ ಸ್ವಾಮಿ ಎಂ., ರಾಮನಗರ

ಹೆಚ್ಚುವರಿ ಬೋಗಿಗಳ ಅಳವಡಿಕೆ ಅಗತ್ಯ

ಬೆಂಗಳೂರಿನಿಂದ ಮುಂಬೈಗೆ ವಂದೇ ಭಾರತ್ ಸ್ಲೀಪರ್ ರೈಲು ಆರಂಭಕ್ಕೆ ಕೇಂದ್ರ ಸರ್ಕಾರ ಹಸಿರು ನಿಶಾನೆ ನೀಡಿರುವುದು ಸ್ವಾಗತಾರ್ಹ. ಈ ರೈಲು ಬೆಂಗಳೂರಿನಿಂದ ಕಲ್ಯಾಣ ಕರ್ನಾಟಕದ ಮಾರ್ಗವಾಗಿ ಮುಂಬೈಗೆ ಸಂಚರಿಸಲಿದೆ. ಉತ್ತರ ಕರ್ನಾಟಕ ಭಾಗದ ಸಾವಿರಾರು ಜನರು ನಿತ್ಯ ಬೆಂಗಳೂರಿಗೆ ಭೇಟಿ ನೀಡುತ್ತಾರೆ. ಹಾಗಾಗಿ, ರಾತ್ರಿವೇಳೆ ಸಂಚರಿಸುವ ಈ ಮಾರ್ಗದ ರೈಲುಗಳಿಗೆ ಹೆಚ್ಚುವರಿಯಾಗಿ ಸಾಮಾನ್ಯ ಬೋಗಿಗಳನ್ನು ಅಳವಡಿಸಿದರೆ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ದಕ್ಷಿಣ ಕರ್ನಾಟಕ ಭಾಗದ ಹಲವು ನಗರಗಳ ನಡುವೆ ಮೆಮೊ ರೈಲುಗಳ ಸಂಪರ್ಕ ಕಲ್ಪಿಸಲಾಗಿದೆ. ಉತ್ತರ ಕರ್ನಾಟಕ ಭಾಗದ ನಗರಗಳ ನಡುವೆ ಇಂತಹ ಸೌಲಭ್ಯವಿಲ್ಲ. ಈ ಅಸಮತೋಲನ ಸರಿಪಡಿಸಲು ರೈಲ್ವೆ ಇಲಾಖೆಯು ಕ್ರಮವಹಿಸಬೇಕಿದೆ.

ಹೊನ್ನೇಶ ಯಲಿಗಾರ, ಹಾವೇರಿ

ಶಿಕ್ಷಕರ ಸಂಘ: ಚುನಾವಣೆ ಮಾದರಿ ಆಗಲಿ

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ 2026–31ರ ಅವಧಿಗೆ ಇದೇ 19ರಂದು ಚುನಾವಣೆ ನಿಗದಿಯಾಗಿದೆ. ಚುನಾವಣೆಯು ಸಾರ್ವತ್ರಿಕ ಚುನಾವಣೆಯ ರೀತಿ ನಡೆಯದೆ ಇಡೀ ಚುನಾವಣಾ ವ್ಯವಸ್ಥೆಗೆ ಮಾದರಿಯಾಗಬೇಕಿದೆ. ಶಿಕ್ಷಕರ ಸಂಘಟನೆಗಳ ಪ್ರತಿನಿಧಿಯಾಗಿ ಆಯ್ಕೆಯಾಗುವುದೇ ತಮ್ಮ ವೃತ್ತಿಜೀವನದ ಬಹುದೊಡ್ಡ ಗುರಿಯೆಂದು ಕೆಲವರು ಭಾವಿಸುವುದಿದೆ. ಶಿಕ್ಷಕರ ಕುಂದುಕೊರತೆ ಆಲಿಸಲು ಸಂಘಟನೆಗಳು ಇರಬೇಕು. ಆದರೆ, ಚುನಾವಣೆಯಲ್ಲಿ ಅವಿರೋಧ ಆಯ್ಕೆಗೂ ಒತ್ತು ನೀಡಬೇಕಿದೆ. ಅವಕಾಶವಂಚಿತ ಶಿಕ್ಷಕರಿಗೆ ವೇದಿಕೆ ಒದಗಿಸಬೇಕಿದೆ. ಮಕ್ಕಳ ದಾಖಲಾತಿ ಹೆಚ್ಚಳ, ಗುಣಮಟ್ಟದ ಶಿಕ್ಷಣ ಕುರಿತಂತೆ ಪ್ರಣಾಳಿಕೆ ಹೊರಡಿಸಬೇಕು. ವಾಮಮಾರ್ಗ ಅನುಸರಿಸುವುದು ಸರಿಯಲ್ಲ.

ಮಲ್ಲಪ್ಪ ಫ. ಕರೇಣ್ಣನವರ, ಮೋಟೆಬೆನ್ನೂರು

ಚುರುಮುರಿ



ಗುಸಗುಸ, ಪಿಸಪಿಸ...

• ಬಿ.ಎನ್. ಮಲ್ಲೇಶ್

'ಲೇ ಗುಡ್ಡೆ, ಮೊನ್ನೆ ಚುಂಚನಗಿರಿಗೆ ಮೋದಿ ಸಾಹೇಬ್ರು ಬರುವಾಗ ಬೆಂಗಳೂರಲ್ಲಿ ನಮ್ ಸಿದ್ರಾಮಣ್ಣನ ಕಿವಿ ಹತ್ರ ಏನೋ ಗುಸಗುಸ, ಪಿಸಪಿಸ ಅಂತಿದ್ರಲ್ಲ, ಏನದು?' ದುಬ್ಬೀರ ಕೇಳಿದ.

'ನಂಗೇನ್ ಗೊತ್ತಲೆ? ಅವ್ರೇನ್ ನನ್ ಕಿವ್ಯಾಗೆ ಹೇಳಿದ್ರಾ? ಈ ತೆಪರನ ಟೀವೀಲಿ ಅವತ್ತು ಏನೇನೋ ತೋರಿಸ್ತಿದ್ರು, ಅವುನ್ನೇ ಕೇಳು' ಎಂದ ಗುಡ್ಡೆ.

'ಹೌದಾ? ಏನ್ ತೋರಿಸ್ತಿದ್ರೋ ನಿಮ್ ಟೀವೀಲಿ?' ಮಂಜಮ್ಮ ಕೇಳಿದಳು.

'ಅದ್ನ ನಾನು ಹೇಳ್ತೀನಿ, ಈಗ ನಾನೇ ಟೀವಿ ಆ್ಯಂಕರ್ ಅನ್ಕಳಿ, ಕೇಳಿ... 'ಮೋದಿ ಸಿದ್ದರಾಮಯ್ಯರ ಕಿವೀಲಿ ಏನು ಹೇಳಿದ್ರು ಗೊತ್ತಾ? ಮೋದಿ ಹೇಳಿದ ಕೊನೆಯ ಆ ಎರಡು ಮಾತು ಏನು? ಕೇಂದ್ರಕ್ಕೆ ಹಾರ್ತಾರಾ ಸಿದ್ದರಾಮಯ್ಯ? ಅಶೋಕ್, ವಿಜಯೇಂದ್ರ ಶಾಕ್ ಆಗಿದ್ದೇಕೆ? ಸಿದ್ದರಾಮಯ್ಯ ಕೇಂದ್ರಕ್ಕೆ ಹಾರಿದ್ರೆ ಇಲ್ಲಿ ಜಮೀರ್ ಕತೆ ಏನು? ವೀಕ್ಷಿಸಿ ರಾತ್ರಿ 7.30ಕ್ಕೆ!'

'ಮಸ್ತ್ ಹೇಳಿದಿ ಕಣಲೆ ಕೊಟ್ರ' ಎಂದಳು ಮಂಜಮ್ಮ.

'ಅದಿರ್ಲಿ... ಮೋದಿ ಸಿದ್ದರಾಮಯ್ಯ ಕಿವೀಲಿ ಏನು ಹೇಳಿರಬೋದು?' ಗುಡ್ಡೆ ಕೇಳಿದ.

'ನಮ್ ಪಾರ್ಟಿಗೆ ಬನ್ನಿ, ನೀವು ಕೇಳಿದ್ದು ಕೊಡ್ತೀವಿ ಅಂದಿರಬೋದು'.

'ಅದಕ್ಕೆ ಸಿದ್ದರಾಮಯ್ಯ ಏನು ಹೇಳಿರಬೋದು?'

'ನೀವು ಚುಂಚನಗಿರಿ ಪ್ರೋಗ್ರಾಂ ಮುಗಿಸ್ಕಂಡ್ ಬನ್ನಿ, ರಾಗಿಮುದ್ದೆ, ನಾಟಿ ಕೋಳಿ ಸಾರು ಮಾಡಿಸಿರ್ತೀನಿ, ಉಂಡ್ಕಂಡ್ ಹೋಗೀರಂತೆ ಅಂದಿರ್ತಾರೆ...' ತೆಪರೇಸಿ ನಕ್ಕ.

'ಈಗ ಅದೆಲ್ಲ ಬಿಡ್ರಪ್ಪ, ಮಹಿಳಾ ಮೀಸಲಾತಿ ಬರ್ತಾ ಐತೆ, ನಮ್ ಮಂಜಮ್ಮನೂ ಎಮ್ಮೆಲ್ಲೆ ಆಗಬೋದು' ಎಂದ ಗುಡ್ಡೆ.

'ಲೇಯ್, ಮಂಜಮ್ಮ ಎಮ್ಮೆಲ್ಲೆ ಆದ್ರೆ ನಮ್ ಚಾ ತಿಂಡಿ ಗತಿ ಹೆಂಗೋ?' ಕೊಟ್ರ ಕೇಳಿದ.

'ಚಾದಂಗಡಿ ಮುಚ್ಚೋದು, ನಾನು ಮಂಜಮ್ಮನ ಪಿಎ ಆಗ್ತೀನಿ, ನಿಮಗೆಲ್ಲ ಕಾಂಟ್ರ್ಯಾಕ್ಟು, ನಿಗಮ–ಮಂಡಳಿ ಕೊಡಿಸ್ತೀನಿ, ಎಲ್ಲ ಉಂಡ್ಕಂಡ್ ತಿನ್ಕಂಡ್ ಚೆನ್ನಾಗಿರೋಣ...'

'ಆಹಾ... ಆಸೆ ನೋಡು' ಎಂದಳು ಮಂಜಮ್ಮ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ


ರೆಪೊ: ಆರ್‌ಬಿಐಗೆ ಬೇರೊಂದು ಆಯ್ಕೆ ಇತ್ತೇ?

ಯಥಾಸ್ಥಿತಿಯಲ್ಲಿ ರೆಪೊ ದರ ಉಳಿಸಿಕೊಳ್ಳುವುದು ಆರ್‌ಬಿಐಗೆ ಅನಿವಾರ್ಯ ಆಗಿತ್ತು. ಸದ್ಯದ ಬೆಳವಣಿಗೆ ಗಮನಿಸಿದರೆ ಹಣದುಬ್ಬರ ಮತ್ತಷ್ಟು ಹೆಚ್ಚಾಗಬಹುದು.

• ವಿಜಯ್ ಜೋಷಿ

ರೆಪೊ ದರದಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆ ಮಾಡದೇ ಇರುವ ತೀರ್ಮಾನವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ಈಚೆಗೆ ನಡೆದ ಸಭೆಯಲ್ಲಿ ಕೈಗೊಂಡಿದೆ. ಈಗ ರೆಪೊ ದರವು ಶೇ 5.25ರ ಮಟ್ಟದಲ್ಲಿದೆ. ಈಗಿನ ತೀರ್ಮಾನದಿಂದಾಗಿ ವಿವಿಧ ಬಗೆಯ ಸಾಲಗಳ ಮೇಲಿನ ಬಡ್ಡಿದರವು ಯಥಾಸ್ಥಿತಿಯಲ್ಲಿ ಮುಂದುವರಿಯಬಹುದು. ಯುದ್ಧದ ಕಾರಣದಿಂದಾಗಿ ವಿವಿಧ ಅಗತ್ಯ ವಸ್ತುಗಳ ಬೆಲೆ ಏರಿಕೆ ಯಾವ ಮಟ್ಟದಲ್ಲಿ ಆಗುವುದೋ ಎಂಬ ಚಿಂತೆಯಲ್ಲಿರುವ ಜನಸಾಮಾನ್ಯ ಅಷ್ಟರ ಮಟ್ಟಿಗೆ ಸಮಾಧಾನ ಹೊಂದಬಹುದು. ಆದರೆ ವಾಸ್ತವದಲ್ಲಿ, ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವುದಲ್ಲದೆ ಬೇರೆ ಆಯ್ಕೆ ಎಂಪಿಸಿ ಬಳಿ ಇತ್ತೇ? ಈ ಪ್ರಶ್ನೆಗೆ, 'ಬಹುಶಃ, ಅಂತಹ ಆಯ್ಕೆಯೇ ಇರಲಿಲ್ಲ' ಎಂಬುದು ಸರಿಯಾದ ಉತ್ತರ ಆಗಬಹುದು.

ಎಂಪಿಸಿ ಸಭೆ ನಡೆದ ಸಂದರ್ಭದ ಮೇಲೊಂದು ನೋಟ ಹರಿಸೋಣ. ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಕದನ ವಿರಾಮದ ಹಂತದಲ್ಲಿದೆ. ಯುದ್ಧ ನಿಂತಿಲ್ಲ. ಅದು ಯಾವ ಕ್ಷಣದಲ್ಲಿಯೂ ಯಾವುದೇ ತಿರುವು ಪಡೆಯಬಹುದು. ಆ ಯುದ್ಧದ ಪರಿಣಾಮವಾಗಿ ಭಾರತದ ಇಂಧನ ಪೂರೈಕೆ ವ್ಯವಸ್ಥೆಯ ಮೇಲೆ ಬಲವಾದ ಏಟು ಬಿದ್ದಿದೆ. ಯುದ್ಧವು ತಕ್ಷಣಕ್ಕೆ ಕೊನೆಗೊಂಡರೂ ಕಚ್ಚಾತೈಲ ಸೇರಿದಂತೆ ವಿವಿಧ ಇಂಧನಗಳ ಪೂರೈಕೆ ವ್ಯವಸ್ಥೆಯು ಸರಿಹೋಗಲು ಬಹುಕಾಲ ಬೇಕಾಗಬಹುದು ಎಂಬ ಅಂದಾಜುಗಳು ಇವೆ. ದೇಶಕ್ಕೆ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಅದರ ಕಾವು ಅಡುಗೆಮನೆಯಲ್ಲಿ ಕಾಣಿಸಿಕೊಂಡಿದೆ. ಕಚ್ಚಾತೈಲದ ಮಾರುಕಟ್ಟೆಯಲ್ಲಿ ದೊಡ್ಡ ತಲ್ಲಣ ಸೃಷ್ಟಿಯಾಗಿದೆ. ವರ್ಷದ ಆರಂಭದಲ್ಲಿ ಬ್ಯಾರಲ್‌ಗೆ 70 ಡಾಲರ್ ಆಸುಪಾಸಿನಲ್ಲಿದ್ದ ಕಚ್ಚಾತೈಲದ ದರವು ಈಗ 100 ಡಾಲರ್ ಆಸುಪಾಸಿನಲ್ಲಿದೆ. ಅದು ಬ್ಯಾರಲ್‌ಗೆ 120 ಡಾಲರ್ ಹಂತವನ್ನೂ ತಲುಪಿತ್ತು.



ಕಚ್ಚಾತೈಲದ ಬೆಲೆಯಲ್ಲಿನ ಏರಿಕೆಯ ಪರಿಣಾಮವು ದೇಶದ ಪೆಟ್ರೋಲ್, ಡೀಸೆಲ್ ಬಳಕೆದಾರರ ಅನುಭವಕ್ಕೆ ಇನ್ನೂ ಬಂದಿಲ್ಲ. ಇದಕ್ಕೆ ಕಾರಣ, ವಿವಿಧ ರಾಜ್ಯಗಳ ವಿಧಾನಸಭೆಗೆ ನಡೆಯುತ್ತಿರುವ ಚುನಾವಣೆಗಳೂ ಆಗಿರಬಹುದು. ಮೇ ತಿಂಗಳ ಮೊದಲ ವಾರದಲ್ಲಿ ಚುನಾವಣೆಗೆ ಸಂಬಂಧಿಸಿದ ಪ್ರಕ್ರಿಯೆಗಳೆಲ್ಲ ಕೊನೆಗೊಳ್ಳಲಿದ್ದು, ಅದಾದ ನಂತರದಲ್ಲಿಯೂ ಪೆಟ್ರೋಲ್, ಡೀಸೆಲ್ ಬೆಲೆಯು ಇದೇ ಹಂತದಲ್ಲಿ ಇರುವ ಸಾಧ್ಯತೆ ಕಡಿಮೆ. ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಪ್ರತಿ ಲೀಟರ್ ಡೀಸೆಲ್ ಮಾರಾಟದಿಂದ ₹35 ನಷ್ಟ ಅನುಭವಿಸುತ್ತಿವೆ ಎಂದು ವರದಿಗಳು ಹೇಳುತ್ತಿವೆ. ಈ ಪ್ರಮಾಣದ ನಷ್ಟದಲ್ಲಿ ಒಂದು ಪಾಲನ್ನು ಅವು ಬಳಕೆದಾರರ ಮೇಲೆ ವರ್ಗಾಯಿಸುವ ತೀರ್ಮಾನ ಕೈಗೊಂಡರೂ, ಅದರಿಂದಾಗಿ ಹಣದುಬ್ಬರ ಪ್ರಮಾಣ ಇನ್ನಷ್ಟು ಹೆಚ್ಚಳ ಆಗಬಹುದು.

ಅನಿಲ ಪೂರೈಕೆಯಲ್ಲಿನ ಸಮಸ್ಯೆಗಳು ರಸಗೊಬ್ಬರ ತಯಾರಿಕಾ ವಲಯವನ್ನೂ ಕಾಡುತ್ತಿವೆ. ಮುಂಗಾರು ಹಂಗಾಮಿನ ಬಿತ್ತನೆ ಕಾರ್ಯಗಳು ಇನ್ನು ಶುರುವಾಗಲಿವೆ. ಈ ಬಾರಿ ಮುಂಗಾರು ಮಳೆಯ ಪ್ರಮಾಣವು ವಾಡಿಕೆಗಿಂತ ಕಡಿಮೆ ಇರಲಿದೆ ಎಂದು ಹವಾಮಾನ ಇಲಾಖೆಯ ಮುನ್ಸೂಚನೆ ಹೇಳಿದೆ. ಇದು ಆರಂಭಿಕ ಮುನ್ಸೂಚನೆ; ಕೆಲವು ದಿನಗಳ ನಂತರದಲ್ಲಿ ಇಲಾಖೆಯು ಇನ್ನೊಂದು ಮುನ್ಸೂಚನೆಯನ್ನು ನೀಡಬಹುದು. ಮಳೆಯ ಪ್ರಮಾಣದ ಬಗ್ಗೆ ಆಗ ಹೆಚ್ಚಿನ ಸ್ಪಷ್ಟನೆ ಸಿಗಬಹುದು. ಆದರೆ, ಈಗಿನ ಮುನ್ಸೂಚನೆಯನ್ನು ಪರಿಗಣಿಸುವುದಾದರೆ, ವಾಡಿಕೆಗಿಂತ ಕಡಿಮೆ ಮಳೆಯು ಆಹಾರ ಧಾನ್ಯಗಳ ಉತ್ಪಾದನೆಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ಇದು ಅವುಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗಬಹುದು. ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಆಹಾರ ವಸ್ತುಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡಿರುವ ಕಾರಣದಿಂದಾಗಿ, ಅವುಗಳ ಬೆಲೆಯಲ್ಲಿ ಆಗುವ ಏರಿಕೆಯು ಒಟ್ಟಾರೆ ಹಣದುಬ್ಬರ ಪ್ರಮಾಣದ ಏರಿಕೆಗೆ ಕಾರಣವಾಗ ಬಹುದು.

ಆರ್ಥಿಕ ಬೆಳವಣಿಗೆ ಪ್ರಮಾಣವು ತಗ್ಗಿದರೆ, ರೆಪೊ ದರ ಇಳಿಕೆ ಮಾಡಿ ಆರ್‌ಬಿಐ ಬೆಳವಣಿಗೆಯನ್ನು ಉತ್ತೇಜಿಸುವ ಕೆಲಸ ಮಾಡುತ್ತದೆ. ಹಣದುಬ್ಬರ ಜಾಸ್ತಿ ಆದರೆ ರೆಪೊ ದರವನ್ನು ಹೆಚ್ಚು ಮಾಡಿ, ನಗದು ಹರಿವಿನ ಮೇಲೆ ನಿಯಂತ್ರಣ ತಂದು, ಹಣದುಬ್ಬರ ತಗ್ಗಿಸುವ ಕೆಲಸವನ್ನೂ ಆರ್‌ಬಿಐ ಮಾಡುತ್ತದೆ. ಈಗಿನ ಹಂತದಲ್ಲಿ ರೆಪೊ ತಗ್ಗಿಸುವ ಕೆಲಸವನ್ನು ರಿಸರ್ವ್ ಬ್ಯಾಂಕ್‌ನ ಎಂಪಿಸಿ ಮಾಡಿದ್ದರೆ, ಅದು ಕೂಡ ಹಣದುಬ್ಬರ ಏರುಗತಿಗೆ ತಿರುಗುವಂತೆ ಮಾಡಲು ತನ್ನದೇ ಆದ ಕೊಡುಗೆ ನೀಡುವ ಸಾಧ್ಯತೆ ಇತ್ತು. ರೆಪೊ ಹೆಚ್ಚಿಸುವ ಕೆಲಸ ಮಾಡಿದ್ದರೆ, ಯುದ್ಧದ ಭೀತಿಯಿಂದಾಗಿ ಈಗಾಗಲೇ ಆರ್ಥಿಕ ಬೆಳವಣಿಗೆಗೆ ಎದುರಾಗಿರುವ ಅಪಾಯವು ದರ ಹೆಚ್ಚಳದಿಂದಾಗಿಯೂ ಒಂದಿಷ್ಟು ತೀವ್ರಗೊಳ್ಳಬಹು ದಿತ್ತು. ಇದೊಂದು ಬಗೆಯಲ್ಲಿ, ಏನು ಮಾಡಿದರೂ ಅನಪೇಕ್ಷಿತ ಸಮಸ್ಯೆಯೊಂದನ್ನು ಸೃಷ್ಟಿಸಬಹುದಾದ ಇಕ್ಕಟ್ಟಿನ ಸಂದರ್ಭ.

ಆರ್‌ಬಿಐ ಅಥವಾ ಸರ್ಕಾರಗಳ ನಿಯಂತ್ರಣದಲ್ಲಿ ಇಲ್ಲದ ಸಂಗತಿಗಳ ಕಾರಣದಿಂದಾಗಿ ಹಣದುಬ್ಬರವು ಈಗಾಗಲೇ ಏರಿಕೆಯ ಹಾದಿ ಹಿಡಿದಿದೆ. ಯುದ್ಧದ ಕಾರಣದಿಂದಾಗಿ ಆರ್ಥಿಕ ಬೆಳವಣಿಗೆ ದರದಲ್ಲಿ ತುಸು ಇಳಿಕೆ ಆಗುವ ಸಾಧ್ಯತೆ ಇದೆ ಎಂಬುದನ್ನು ಅಂತರರಾಷ್ಟ್ರೀಯ ರೇಟಿಂಗ್ಸ್ ಸಂಸ್ಥೆಗಳ ಮುನ್ನೋಟ ಹೇಳಿದೆ. ತನ್ನ ನಿಯಂತ್ರಣದಲ್ಲಿ ಇಲ್ಲದ, ನಿಯಂತ್ರಣಕ್ಕೆ ಸಿಗದ ಸಂಗತಿಗಳು ಹಲವಾರು ಇರುವ ಕಾರಣದಿಂದಾಗಿ ಆರ್‌ಬಿಐ ಈಗ ತೆಗೆದುಕೊಂಡಿರುವ ತೀರ್ಮಾನವು ಸೂಕ್ತವಾಗಿದ್ದರೂ, ಆ ತೀರ್ಮಾನವಲ್ಲದೆ ಬೇರೆ ಆಯ್ಕೆಗಳು ಅದಕ್ಕೆ ಇರಲಿಲ್ಲ ಎಂಬುದೂ ನಿಜ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೇರಳದ 'ಮಾದರಿ' ಪಿಎಸ್‌ಸಿ

• ರಾಜೇಶ್ ರೈ ಚಟ್ಲ

ಸ್ವಚ್ಛವಾಗಲಿ



ಸರ್ಕಾರದ ವಿವಿಧ ಇಲಾಖೆಗಳು, ನಿಗಮ ಮಂಡಳಿಗಳು, ಸಾರ್ವಜನಿಕ ವಲಯದ ಉದ್ದಿಮೆಗಳ ಖಾಲಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ವಿಳಂಬವಿಲ್ಲದೆ, ಪಾರದರ್ಶಕವಾಗಿ ನಡೆಸಲು ಪುಟ್ಟ ರಾಜ್ಯ ಕೇರಳದ ಲೋಕಸೇವಾ ಆಯೋಗ ತನ್ನದೇ ಆದ 'ಮಾದರಿ'ಯನ್ನು ಅಳವಡಿಸಿಕೊಂಡಿದೆ. ಹುದ್ದೆ ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನಿಸುವುದರಿಂದ ಆರಂಭಿಸಿ, ಆಯ್ಕೆ ಪಟ್ಟಿ ಪ್ರಕಟಿಸುವವರೆಗಿನ ಎಲ್ಲ ಹಂತಗಳನ್ನು ಯಾವುದೇ ವಿವಾದ–ವ್ಯಾಜ್ಯಗಳಿಗೆ ಅವಕಾಶ ನೀಡದೆ ಪೂರ್ಣಗೊಳಿಸುವ ಮೂಲಕ ಅಲ್ಲಿನ ಲೋಕಸೇವಾ ಆಯೋಗ ಅಭ್ಯರ್ಥಿಗಳ ವಿಶ್ವಾಸ ಗಳಿಸಿದೆ.

ಕೇರಳ ಲೋಕಸೇವಾ ಆಯೋಗದ ಕಾರ್ಯವೈಖರಿಯನ್ನು ಅಧ್ಯಯನ ಮಾಡಿ ಅದರ ಆಧಾರದಲ್ಲಿ ಕರ್ನಾಟಕ ಲೋಕಸೇವಾ ಆಯೋಗವನ್ನು ಬಲಪಡಿಸುವ ಉದ್ದೇಶದಿಂದ, ಕೆಪಿಎಸ್‌ಸಿಯ ಏಳು ಸದಸ್ಯರ ನಿಯೋಗವು 2024ರ ನವೆಂಬರ್‌ನಲ್ಲಿ ಕೇರಳಕ್ಕೆ ಭೇಟಿ ನೀಡಿತ್ತು. ತಿರುವನಂತಪುರದಲ್ಲಿರುವ ಕೇರಳ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಮತ್ತು ಕೊಲ್ಲಂನಲ್ಲಿರುವ ಪ್ರಾದೇಶಿಕ ಕಚೇರಿ ಮತ್ತು ಕೆಲವು ಜಿಲ್ಲಾ ಕಚೇರಿಗಳಿಗೆ ಭೇಟಿ ನೀಡಿದ್ದ ಈ ನಿಯೋಗವು, ಅಲ್ಲಿನ ಕಾರ್ಯ ಚಟುವಟಿಕೆಯ ಸಮಗ್ರ ವಿವರಗಳು ಮತ್ತು ಕರ್ನಾಟಕದಲ್ಲಿಯೂ ಅಳವಡಿಸಿಕೊಳ್ಳಬಹುದಾದ ಅಂಶಗಳ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದೆ.

ಕೇರಳಕ್ಕೆ ತೆರಳಿದ್ದ ನಿಯೋಗದಲ್ಲಿ ಕೆಪಿಎಸ್‌ಸಿ ಸದಸ್ಯರಾದ ಆರ್. ಗಿರೀಶ್, ಎಂ.ಬಿ. ಹೆಗ್ಗಣ್ಣವರ, ಎಚ್.ಎಸ್. ನರೇಂದ್ರ, ಮುಸ್ತಫಾ ಹುಸೇನ್ ಸಯ್ಯದ್ ಅಜೀಜ್, ಆರ್. ಕಾವಳಮ್ಮ, ಪ್ರೊ.ವಿ. ದೇವಪ್ಪ, ಎಲ್ಫೇರಿಡಾ ಡಿಸಿಲ್ವಾ ಇದ್ದರು. ಈ ಪೈಕಿ, ಆರ್. ಗಿರೀಶ್, ಎಂ.ಬಿ. ಹೆಗ್ಗಣ್ಣವರ ಸದಸ್ಯತ್ವ ಅವಧಿ ಈಗಾಗಲೇ ಮುಗಿದಿದೆ.

ಕೇರಳ ಲೋಕಸೇವಾ ಆಯೋಗದ ಅಧ್ಯಕ್ಷರು, ಆಯೋಗದ ಒಟ್ಟು ಕಾರ್ಯನಿರ್ವಹಣೆ ಮತ್ತು ಕಾರ್ಯತಂತ್ರ ಮೇಲ್ವಿಚಾರಣೆ ನಡೆಸಿದರೆ, ಆಯೋಗದಲ್ಲಿರುವ 20 ಸದಸ್ಯರು ನೇಮಕಾತಿ, ನೀತಿ ರಚನೆ ಮತ್ತು ಸಲಹೆ ನೀಡುವ ಕೆಲಸವನ್ನು ಮಾಡುತ್ತಾರೆ. ಆಯೋಗದ ಆಡಳಿತಾತ್ಮಕ ಕೆಲಸಗಳನ್ನು ಕಾರ್ಯದರ್ಶಿ ನಿರ್ವಹಿಸುತ್ತಾರೆ. ಇಡೀ ಆಯೋಗದಲ್ಲಿ ಒಟ್ಟು 1,815 ಸಿಬ್ಬಂದಿ ಇದ್ದಾರೆ. ತಿರುವನಂತಪುರದಲ್ಲಿ ಕೇಂದ್ರ ಕಚೇರಿ ಇದ್ದು, ಮೂರು ಕಡೆ (ಕೊಲ್ಲಂ, ಎರ್ನಾಕುಲಂ, ಕೋಯಿಕ್ಕೋಡ್) ಪ್ರಾದೇಶಿಕ ಕಚೇರಿಗಳಿವೆ. ಪ್ರತಿಯೊಂದು ಪ್ರಾದೇಶಿಕ ಕಚೇರಿಯಲ್ಲಿ ಎಲ್ಲ ವೃಂದಗಳು ಸೇರಿ ತಲಾ 40ರಿಂದ 50 ಸಿಬ್ಬಂದಿ ಇದ್ದಾರೆ. ರಾಜ್ಯದ ಎಲ್ಲ 14 ಜಿಲ್ಲೆಗಳಲ್ಲಿಯೂ ಜಿಲ್ಲಾ ಕಚೇರಿಗಳಿದ್ದು, ಪ್ರತಿ ಜಿಲ್ಲೆಯಲ್ಲಿ ತಲಾ 30ರಿಂದ 40 ಸಿಬ್ಬಂದಿ ಇದ್ದಾರೆ.

ಕೇರಳ ಲೋಕಸೇವಾ ಆಯೋಗವು ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡುವ ಹೊಣೆಯ ಜೊತೆಗೆ, ಬಡ್ತಿ ಮತ್ತು ಸರ್ಕಾರಿ ನೌಕರರ ಶಿಸ್ತುಕ್ರಮ ವಿಷಯಗಳಿಗೆ ಸಂಬಂಧಿಸಿದ ನಿಯಮಗಳನ್ನೂ ರಚಿಸುತ್ತದೆ. ಅರ್ಹ ಸಿಬ್ಬಂದಿಗೆ ಪಾರದರ್ಶಕವಾಗಿ ಮತ್ತು ನ್ಯಾಯಸಮ್ಮತವಾಗಿ ಮುಂಬಡ್ತಿ ನೀಡಲು ಪರೀಕ್ಷೆಗಳು ಮತ್ತು ಇಲಾಖಾ ಪದೋನ್ನತಿ ಸಮಿತಿ (ಡಿಪಿಸಿ) ಸಭೆಗಳನ್ನು ಕೇರಳ ಲೋಕಸೇವಾ ಆಯೋಗವೇ ಮಾಡುತ್ತದೆ. ಜೊತೆಗೆ, ಸರ್ಕಾರ ನೀಡುವ ನಿರ್ದೇಶನದಂತೆ, ಕೆಲವು ವಿಷಯಗಳಲ್ಲಿ ಸಲಹೆಗಾರನ ಕೆಲಸವನ್ನೂ ನಿಭಾಯಿಸುತ್ತದೆ.

ಕೇರಳದಲ್ಲಿ ಅಲ್ಲಿನ ಲೋಕಸೇವಾ ಆಯೋಗವೊಂದೇ ಕೆಳ ಶ್ರೇಣಿಯ ಸೇವೆಯಿಂದ (ಎಲ್‌ಜಿಎಸ್) ಆರಂಭಿಸಿ ಕೇರಳ ನಾಗರಿಕ ಸೇವೆ (ಕೆಎಎಸ್) ಹುದ್ದೆಯವರೆಗೆ 'ಏಕೈಕ' ನೇಮಕಾತಿ ಪ್ರಾಧಿಕಾರ ಎನ್ನುವುದು ವಿಶೇಷ. ಎಲ್ಲ ನೇಮಕಾತಿಗಳು ಈ ಪ್ರಾಧಿಕಾರದ ಮೂಲಕವೇ ಕೇಂದ್ರೀಕೃತವಾಗಿ ನಡೆಯುತ್ತವೆ. ಎಲ್ಲ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ, ದೈಹಿಕ ಪರೀಕ್ಷೆ ಮತ್ತು ಪ್ರಾಯೋಗಿಕ ಪರೀಕ್ಷೆಯ ಜೊತೆಗೆ ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ) ಕಡ್ಡಾಯ.

ಹುದ್ದೆಗೆ ಅಧಿಸೂಚನೆ ಹೊರಡಿಸಿದ ನಂತರ ಅಭ್ಯರ್ಥಿಗಳು ಆಯೋಗದ ಆನ್‌ಲೈನ್ ವ್ಯವಸ್ಥೆಯಲ್ಲಿ 'ಒಂದು ಬಾರಿ ನೋಂದಣಿ' (ಒಟಿಆರ್) ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಒಮ್ಮೆ ನೋಂದಣಿ ಮಾಡಿದರೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಾಗುತ್ತದೆ. ಯಾವುದೇ ಅರ್ಜಿ ಶುಲ್ಕ ಇಲ್ಲ. ನಂತರ ಪ್ರಾಥಮಿಕ ಪರೀಕ್ಷೆ (ಆನ್‌ಲೈನ್/ ಆಫ್‌ಲೈನ್), ಮುಖ್ಯ ಪರೀಕ್ಷೆ (ಆನ್‌ಲೈನ್/ ಆಫ್‌ಲೈನ್), ತಾಳ್ಮೆ ಪರೀಕ್ಷೆ, ದೈಹಿಕ ಸಾಮರ್ಥ್ಯ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆ, ಸಂದರ್ಶನದ ಮೂಲಕ ಆಯ್ಕೆ ನಡೆಯುತ್ತದೆ. ಕೇರಳ ಲೋಕಸೇವಾ ಆಯೋಗ ಪ್ರತ್ಯೇಕ ಐಟಿ ಘಟಕ ಹೊಂದಿದ್ದು, ಅಲ್ಲಿ ಖಾಲಿ ಹುದ್ದೆಗಳನ್ನು ವರದಿ ಮಾಡಲು ಇ–ವೇಕೆನ್ಸಿ ತಂತ್ರಾಂಶ, ನೇಮಕಾತಿ ತಂತ್ರಾಂಶ, ಪರೀಕ್ಷಾ ತಂತ್ರಾಂಶ, ಅಭ್ಯರ್ಥಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಕಾಪಾಡಲು ಪ್ರತ್ಯೇಕ ತಂತ್ರಾಂಶವಿದೆ. ಪರೀಕ್ಷೆಯ ಬಳಿಕ ಒಎಂಆರ್ ಶೀಟ್‌ಗಳನ್ನು ಸ್ಕ್ಯಾನ್ ಮಾಡಿ ಮೌಲ್ಯಮಾಪನ ಮಾಡಲು ಆನ್-ಸ್ಕ್ರೀನ್ ಮಾರ್ಕಿಂಗ್ (ಒಎಸ್‌ಎಂ) ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಲಿಖಿತ ಪರೀಕ್ಷೆಯ ಅಂಕ, ಸಂದರ್ಶನ ಮತ್ತು ಇತರ ಮೌಲ್ಯಮಾಪನಗಳ ಅಂಕಗಳ ಸಹಿತ ಆಯ್ಕೆ ಪಟ್ಟಿ ಪ್ರಕಟಿಸಲಾಗುತ್ತದೆ. ಈ ಆಯ್ಕೆ ಪಟ್ಟಿಯು ಸನ್ನಿವೇಶಕ್ಕೆ ಅನುಗುಣವಾಗಿ ಕನಿಷ್ಠ ಒಂದು ವರ್ಷ ಅಥವಾ ಮೂರು ವರ್ಷದವರೆಗೆ ಮಾನ್ಯವಾಗಿರುತ್ತದೆ. ಬಯೋಮೆಟ್ರಿಕ್ ದೃಢೀಕರಣದ ಮೂಲಕ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ.

ಈ ಎಲ್ಲ ವಿಷಯಗಳ ಕುರಿತು ಅಧ್ಯಯನ ಮಾಡಿದ ಕರ್ನಾಟಕ ಲೋಕಸೇವಾ ಆಯೋಗದ ನಿಯೋಗವು 20 ಪುಟಗಳ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ಆದರೆ, ಈ ವರದಿ ಸಲ್ಲಿಕೆಯಾಗಿ ವರ್ಷ ಕಳೆದರೂ, ಅದರಲ್ಲಿರುವ ಅಂಶಗಳನ್ನು ಜಾರಿಗೆ ತರುವ ವಿಷಯದಲ್ಲಿ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ವರದಿಯಲ್ಲಿರುವ ಶಿಫಾರಸುಗಳೇನು?

- ಕೇರಳ ಲೋಕ ಸೇವಾ ಆಯೋಗದಂತೆಯೇ, ಎಲ್ಲ ರಾಜ್ಯ ಸರ್ಕಾರಿ ಇಲಾಖೆಗಳು, ಮಂಡಳಿಗಳು, ನಿಗಮಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳು ಇ- ವೇಕೆನ್ಸಿ ಸಾಫ್ಟ್‌ವೇರ್ ಮೂಲಕ 3ರಿಂದ 6 ತಿಂಗಳ ಮುಂಚಿತವಾಗಿ ಖಾಲಿ ಹುದ್ದೆಗಳನ್ನು ತಿಳಿಸಬೇಕು. ನೇಮಕಾತಿ ಪ್ರಕ್ರಿಯೆಗಳ ವಿವಿಧ ಹಂತಗಳಿಗೆ ಸಮಯ ನಿಗದಿಪಡಿಸಿ ಯೋಜನೆ ರೂಪಿಸಲು ಇದರಿಂದ ಸಹಾಯ ಆಗಲಿದೆ. ಎಲ್ಲ ನೇಮಕಾತಿಗಳನ್ನು ಕೆಪಿಎಸ್‌ಸಿ ಮೂಲಕವೇ ನಡೆಸಬೇಕು
- ಕರ್ನಾಟಕ ಲೋಕ ಸೇವಾ ಆಯೋಗವು ನೇಮಕಾತಿ ಪ್ರಕ್ರಿಯೆಗಳನ್ನು ನಿರ್ವಹಿಸಲು ಹಣಕಾಸಿನ ಸವಾಲು ಎದುರಿಸುತ್ತಿದೆ. ಅದನ್ನು ಪರಿಹರಿಸಲು, ಅಭ್ಯರ್ಥಿಗಳಿಂದ ಸಂಗ್ರಹಿಸುವ ಶುಲ್ಕವನ್ನು ಆಯೋಗದಲ್ಲಿಯೇ ಆಡಳಿತ, ಮೂಲಸೌಕರ್ಯ ಸುಧಾರಣೆ ಮತ್ತು ಡಿಜಿಟಲ್ ಉನ್ನತೀಕರಣಕ್ಕೆ ಬಳಸಬಹುದು
- ಸರ್ಕಾರದ ಇಲಾಖೆಗಳು ತಮ್ಮ ವೃಂದ ಮತ್ತು ನೇಮಕಾತಿ ನಿಯಮಗಳನ್ನು (ಸಿ ಆ್ಯಂಡ್ ಆರ್) ಕೆಪಿಎಸ್‌ಸಿಗೆ ನೀಡಬೇಕು. ಹುದ್ದೆಗೆ ಅಗತ್ಯವಾದ ಅರ್ಹತೆ ಮತ್ತು ನೇಮಕಾತಿ ಹೇಗೆ ನಡೆಸಬೇಕೆಂಬ ಬಗ್ಗೆ ವಿವರ ಲಭ್ಯವಾದರೆ ನ್ಯಾಯಯುತ, ಪಾರದರ್ಶಕ ಮತ್ತು ಕಾನೂನುಬದ್ಧವಾಗಿ ನೇಮಕಾತಿ ಪ್ರಕ್ರಿಯೆ ನಡೆಸಬಹುದು
- ಕೆಪಿಎಸ್‌ಸಿಯಲ್ಲಿ ಒಟ್ಟು ಸಿಬ್ಬಂದಿ ಕೊರತೆ ಮತ್ತು ಹುದ್ದೆಗಳು ಖಾಲಿ ಇರುವುದರಿಂದ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿದೆ. ಅದನ್ನು ಪರಿಹರಿಸಲು, ಇತರೆ ಸರ್ಕಾರಿ ಇಲಾಖೆಗಳಿಂದ ತಾತ್ಕಾಲಿಕವಾಗಿ ಸಿಬ್ಬಂದಿಯನ್ನು ಪಡೆದುಕೊಳ್ಳಬೇಕು
- ಕೇರಳ ಲೋಕಸೇವಾ ಆಯೋಗವು ಎಲ್ಲ ಗ್ರೂಪ್ 'ಎ', 'ಬಿ' ಮತ್ತು 'ಸಿ' (ತಾಂತ್ರಿಕ) ಹುದ್ದೆಗಳಿಗೆ ವ್ಯಕ್ತಿತ್ವ ಪರೀಕ್ಷೆಯನ್ನು ನಡೆಸುತ್ತದೆ. ಕರ್ನಾಟಕದಲ್ಲೂ ಎಲ್ಲ ಹುದ್ದೆಗಳ ನೇಮಕಕ್ಕೆ ವ್ಯಕ್ತಿತ್ವ ಪರೀಕ್ಷೆ ಅಳವಡಿಸಬೇಕು
- ಕೇರಳ ಲೋಕಸೇವಾ ಆಯೋಗ ಆನ್‌ಲೈನ್ ಪರೀಕ್ಷೆಯ ವ್ಯವಸ್ಥೆ ಅಳವಡಿಸಿಕೊಂಡಿದೆ. ಹೀಗಾಗಿ, ಅಲ್ಲಿನ ನೇಮಕಾತಿ ಪ್ರಕ್ರಿಯೆಯನ್ನು ವೇಗವಾಗಿ, ದೋಷರಹಿತವಾಗಿ ಮಾಡಲು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಪರೀಕ್ಷೆ ಬರೆಯಲು, ಫಲಿತಾಂಶ ನೀಡಲು ಅವಕಾಶವಾಗುತ್ತದೆ
- ಅರ್ಹ ಭಾಷಾಂತರಕಾರರ ಕೊರತೆಯಿಂದಾಗಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲು ವಿಳಂಬವಾಗುತ್ತಿದೆ ಮತ್ತು ತಪ್ಪುಗಳು ಆಗುತ್ತಿವೆ. ಇದನ್ನು ಸರಿಪಡಿಸಲು ನುರಿತ ಅನುವಾದಕರನ್ನು ನೇಮಿಸಿಕೊಳ್ಳಬೇಕು
- ಭದ್ರತೆ ಮತ್ತು ವಿಶ್ವಾಸಾರ್ಹತೆ ಸುಧಾರಣೆಗೆ ಕೆಪಿಎಸ್‌ಸಿಯಲ್ಲಿ ಬಯೋಮೆಟ್ರಿಕ್ ದೃಢೀಕರಣ ಅಳವಡಿಸಿಕೊಳ್ಳಬೇಕು. ಜೊತೆಗೆ, ಭೌತಿಕ ಪರಿಶೀಲನಾ ವ್ಯವಸ್ಥೆಯೂ ಇರಬೇಕು. ಗೋಪ್ಯ, ಭದ್ರತೆ ಮತ್ತು ಪಾರದರ್ಶಕ ನೇಮಕಾತಿ ಖಚಿತಪಡಿಸಿಕೊಳ್ಳಲು ಪ್ರತ್ಯೇಕ ತಾಂತ್ರಿಕ ತಂಡ ಅತೀ ಅತ್ಯಗತ್ಯ. ಕೆಪಿಎಸ್‌ಸಿಯಲ್ಲಿ ಶಾಶ್ವತ ತಾಂತ್ರಿಕ ಸಿಬ್ಬಂದಿ ಇಲ್ಲದೇ ಇರುವುದರಿಂದ ಸುರಕ್ಷಿತವಾಗಿ ಪರೀಕ್ಷೆಗಳನ್ನು ನಡೆಸಲು, ಪ್ರಶ್ನೆಪತ್ರಿಕೆ ಸೋರಿಕೆ ತಡೆಯಲು ಮತ್ತು ಡಿಜಿಟಲ್ ದಾಖಲೆಗಳನ್ನು ನಿರ್ವಹಿಸಲು ಸಮಸ್ಯೆ ಆಗುತ್ತಿದೆ
- ನೇಮಕಾತಿ ಸಮಯದಲ್ಲಿ ಎದುರಾಗುವ ಕಾನೂನು ಸಮಸ್ಯೆಗಳು ಕೂಡಾ ಆಯ್ಕೆ ಪಟ್ಟಿ ಪ್ರಕಟಿಸಲು ವಿಳಂಬಕ್ಕೆ ಪ್ರಮುಖ ಕಾರಣ. ಈ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಪ್ರತ್ಯೇಕವಾದ ಕಾನೂನು ತಂಡದ ಅಗತ್ಯವಿದೆ
- ನೇಮಕಾತಿಗಾಗಿ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದ ಮಾಹಿತಿ ಪಡೆಯಲು ಅನೇಕ ಅಭ್ಯರ್ಥಿಗಳು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಅಭ್ಯರ್ಥಿಗಳಿಗೆ ಸಮಸ್ಯೆಯಾಗುತ್ತಿದೆ. ಅದನ್ನು ತಪ್ಪಿಸಲು ಪ್ರತ್ಯೇಕ ಸಹಾಯವಾಣಿ ಆರಂಭಿಸಬೇಕು
- ದೂರವಾಣಿ ಕರೆ, ಇ–ಮೇಲ್ ಮತ್ತು ನೇರ ಚಾಟ್ ಮೂಲಕ ಸಾಮಾನ್ಯ ಸಮಸ್ಯೆಗಳನ್ನು ತಿಳಿದುಕೊಂಡು ಪರಿಹರಿಸಲು ಕೆಪಿಎಸ್‌ಸಿಯಲ್ಲಿ ದೂರು ಕೋಶ ಸ್ಥಾಪಿಸಬೇಕು
- ಯಾವುದೇ ಹುದ್ದೆಗೆ ನಿರ್ದಿಷ್ಟ ಶೈಕ್ಷಣಿಕ ಅರ್ಹತೆ ಗುರುತಿಸಲು ಸ್ಪಷ್ಟ ಚೌಕಟ್ಟು ರಚಿಸಬೇಕು. ಯುಪಿಎಸ್‌ಸಿ ಅಂತಹ ಚೌಕಟ್ಟು ಹೊಂದಿದೆ
- ಕೇರಳ ಲೋಕಸೇವಾ ಆಯೋಗದಂತೆ ಎಲ್ಲ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ವಿನಾಯಿತಿ ನೀಡಬೇಕು. ಇದರಿಂದಾಗಿ ಆರ್ಥಿಕವಾಗಿ ಹಿಂದುಳಿದವರು ಅರ್ಜಿ ಸಲ್ಲಿಸಲು ಮತ್ತು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲು ಸಾಧ್ಯವಾಗಲಿದೆ
- ಮಂಗಳೂರು ಮತ್ತು ದಾವಣಗೆರೆಯಲ್ಲಿ ಕೆಪಿಎಸ್‌ಸಿಯ ಎರಡು ಹೊಸ ಪ್ರಾದೇಶಿಕ ಕಚೇರಿಗಳನ್ನು ಸ್ಥಾಪಿಸಬೇಕು. ಅಲ್ಲದೆ, ಜಿಲ್ಲಾ ಮಟ್ಟದಲ್ಲಿಯೂ ಕಚೇರಿಗಳನ್ನು ಆರಂಭಿಸಬೇಕು. ಜೊತೆಗೆ ಕೆಪಿಎಸ್‌ಸಿಗೆ ಅಗತ್ಯವಾದ ಸಿಬ್ಬಂದಿಯನ್ನು ಒದಗಿಸಬೇಕು. ಕೇರಳ ಲೋಕ ಸೇವಾ ಆಯೋಗದ 'ಮಾದರಿ'ಯೇ ಅದರ ಯಶಸ್ಸಿಗೆ ಮೂಲ ಕಾರಣ
- ದಕ್ಷತೆ, ನಿಖರತೆ ಮತ್ತು ಪಾರದರ್ಶಕತೆಯಲ್ಲಿ ಸುಧಾರಣೆ ತರಲು ಆಧುನಿಕ ನೇಮಕಾತಿ ಸಾಫ್ಟ್‌ವೇರ್ ನಿರ್ಣಾಯಕವಾಗಿದೆ. ಅರ್ಜಿ ಸಲ್ಲಿಕೆ, ಅಭ್ಯರ್ಥಿಗಳ ಮೌಲ್ಯಮಾಪನ ಮತ್ತು ಆಯ್ಕೆಯಂಥ ಹಂತಗಳನ್ನು ಸುಗಮಗೊಳಿಸುತ್ತದೆ. ಸೂಕ್ಷ್ಮ ದತ್ತಾಂಶಗಳನ್ನು ರಕ್ಷಿಸಲು, ತಂತ್ರಾಂಶವನ್ನು ಅರ್ಹ, ಕಾಯಂ ಸಿಬ್ಬಂದಿ ನಿರ್ವಹಿಸಬೇಕು
- ಕೇರಳ ಸಾರ್ವಜನಿಕ ಸೇವಾ ಆಯೋಗವು ಕಾರ್ಯದರ್ಶಿ, ಪರೀಕ್ಷಾ ನಿಯಂತ್ರಕ, ಜಂಟಿ ಪರೀಕ್ಷಾ ನಿಯಂತ್ರಕ ಹುದ್ದೆಗಳಿಗೆ ತನ್ನದೇ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಆಡಳಿತಾತ್ಮಕ ವ್ಯವಸ್ಥೆಯನ್ನು ಹೊಂದಿದೆ. ಅಲ್ಲಿ ಈ ಹುದ್ದೆಗಳಿಗೆ ಐಎಎಸ್ ಅಧಿಕಾರಿಗಳನ್ನು ನೇಮಿಸುವುದಿಲ್ಲ. ಅದೇ ಮಾದರಿಯನ್ನು ಕರ್ನಾಟಕ ಲೋಕಸೇವಾ ಆಯೋಗವೂ ಅನುಸರಿಸಬೇಕು
- ಎಲ್ಲ ಪರೀಕ್ಷೆಗಳ ಒಎಂಆರ್ ಶೀಟ್‌ಗಳನ್ನು ಸ್ಕ್ಯಾನ್ ಮಾಡಲು ಕೇರಳ ಲೋಕಸೇವಾ ಆಯೋಗ ತನ್ನದೇ ವ್ಯವಸ್ಥೆಯನ್ನು ಹೊಂದಿದೆ. ಸ್ಕ್ಯಾನ್ ಮಾಡುವ ಕೆಲಸವನ್ನು ಆಯೋಗದ ಸಿಬ್ಬಂದಿಯೇ ನಿರ್ವಹಿಸುತ್ತಾರೆ. ಯಾವುದೇ ಬಾಹ್ಯ ಸಂಸ್ಥೆಗೆ ಹೊರಗುತ್ತಿಗೆ ನೀಡುವುದಿಲ್ಲ
- ಎಲ್ಲ ಸರ್ಕಾರಿ ಇಲಾಖೆಗಳು, ನಿಗಮಗಳು ಮತ್ತು ಇತರ ರಾಜ್ಯ ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ ಇಲಾಖಾ ಮುಂಬಡ್ತಿ ಸಮಿತಿ (ಡಿಪಿಸಿ) ಪ್ರಸ್ತಾವಗಳನ್ನು ಸಲಹೆ ಮತ್ತು ಅನುಮೋದನೆಗಾಗಿ ಕೆಪಿಎಸ್‌ಸಿಗೆ ಸಲ್ಲಿಸಬೇಕು

ಸುಧಾರಣೆ ಹಾದಿಯಲ್ಲಿ ಪರೀಕ್ಷಾ ಪ್ರಾಧಿಕಾರ

• ಚಂದ್ರಹಾಸ ಹಿರೇಮಳಲಿ

ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ 1,242 ಹುದ್ದೆಗಳು ಸೇರಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ್ದ ಹಲವು ನೇಮಕಾತಿ ಪ್ರಕ್ರಿಯೆಗಳಲ್ಲೂ ಅಕ್ರಮಗಳು ನಡೆದ ಆರೋಪಗಳು ಎದುರಾಗಿದ್ದವು. ಎರಡು ವರ್ಷಗಳಿಂದ ನೇಮಕಾತಿ ಪರೀಕ್ಷಾ ಪ್ರಕ್ರಿಯೆಗಳಲ್ಲಿ ಕೆಇಎ ಕೆಲ ಸುಧಾರಣೆಗಳನ್ನು ಜಾರಿಗೊಳಿಸುವ ಮೂಲಕ ಉದ್ಯೋಗಾಕಾಂಕ್ಷಿಗಳಲ್ಲಿ ನಂಬಿಕೆ ಮೂಡಿಸುವ ಪ್ರಯತ್ನ ನಡೆಸಿದೆ.

ಒಂದು ಸಾವಿರ ಗ್ರಾಮ ಆಡಳಿತ ಅಧಿಕಾರಿಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ 2024ನೇ ಅಕ್ಟೋಬರ್‌ನಲ್ಲಿ ಪರೀಕ್ಷೆ ನಡೆಸಿತ್ತು. ಪರೀಕ್ಷೆ ನಡೆಸಿದ 20 ದಿನಗಳಲ್ಲೇ ಕೀ ಉತ್ತರ ಪ್ರಕಟಿಸಿ, ಡಿಸೆಂಬರ್‌ನಲ್ಲಿ ಅಂತಿಮ ಪಟ್ಟಿ ಪ್ರಕಟಿಸಿತ್ತು. ದಾಖಲೆಗಳ ಪರಿಶೀಲನೆಯ ನಂತರ ಎರಡೇ ತಿಂಗಳಿಗೆ ಆಯ್ಕೆಯಾದವರಿಗೆ ಕಂದಾಯ ಇಲಾಖೆಯು ಸ್ಥಳ ನಿಯುಕ್ತಿ ಆದೇಶ ನೀಡಿತ್ತು.

ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆ ಅಷ್ಟೇ ಅಲ್ಲ, ಕಳೆದ ಆರು ತಿಂಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ತಾಂತ್ರಿಕ ಶಿಕ್ಷಣ ಇಲಾಖೆ, ರಾಜೀವ್ ಗಾಂಧಿ ವಿಶ್ವವಿದ್ಯಾಲಯ, ಕೃಷಿ ಮಾರಾಟ ಇಲಾಖೆ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿನ 1,006 ಹುದ್ದೆಗಳಲ್ಲಿ 944 ಹುದ್ದೆಗಳಿಗೆ ಕಾಲಮಿತಿಯ ಒಳಗೆ ಪರೀಕ್ಷೆ ನಡೆಸಿ, ಆಯಾ ಇಲಾಖೆಗಳಿಗೆ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಸಲ್ಲಿಸಿದೆ (ಎಲ್ಲ ಪ್ರಕ್ರಿಯೆ ಮುಗಿದಿದ್ದು ಕೆಲ ಇಲಾಖೆಗಳು ಒಳಮೀಸಲಾತಿ ಇತ್ಯರ್ಥಕ್ಕಾಗಿ ಕಾಯುತ್ತಿವೆ). ಇಂತಹ ನಡೆಗಳ ಫಲವಾಗಿ ಪರೀಕ್ಷಾ ಅಕ್ರಮಗಳ ಮಾತುಗಳು ಸದ್ಯಕ್ಕೆ ತೆರೆಗೆ ಸರಿದಿವೆ.

ನೇಮಕಾತಿ ಅಧಿಸೂಚನೆಯಲ್ಲೇ ಪರೀಕ್ಷಾ ದಿನಾಂಕ: ಎರಡು ವರ್ಷಗಳ ಹಿಂದೆ ಕೆಇಎ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ಎಚ್. ಪ್ರಸನ್ನ ಅವರು ಬಂದ ನಂತರ ಪರೀಕ್ಷಾ ಪ್ರಕ್ರಿಯೆಗಳಲ್ಲಿ ಸಾಕಷ್ಟು ಸುಧಾರಣೆ ತಂದಿದ್ದಾರೆ. ಅಧಿಸೂಚನೆಯಲ್ಲೇ ಪರೀಕ್ಷಾ ದಿನಾಂಕ ಪ್ರಕಟ ಮಾಡುವುದು ಸೇರಿದಂತೆ ಇತರ ಕೆಲ ನಿರ್ಧಾರಗಳು ಪರೀಕ್ಷೆಯಲ್ಲಿ ಅಕ್ರಮ ತಡೆಯುವಲ್ಲಿ ಪ್ರಮುಖ ಪಾತ್ರವಹಿಸಿವೆ. ನೇಮಕಾತಿಗಳಲ್ಲಿ ಪ್ರಾಧಿಕಾರವು ಯುಪಿಎಸ್‌ಸಿ ಮಾದರಿ ಅನುಸರಿಸುತ್ತಿದೆ.

ಪರೀಕ್ಷೆಗಳು ನಡೆದ ದಿನವೇ ಅಭ್ಯರ್ಥಿಗಳ ಒಎಂಆರ್ ಶೀಟ್‌ಗಳನ್ನು ಪ್ರಾಧಿಕಾರ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತಿದೆ. ಪರೀಕ್ಷೆಯ ನಂತರ ಒಎಂಆರ್ ಶೀಟ್‌ಗಳನ್ನು ತಿದ್ದದಂತೆ ಮಾಡಲು ಒಎಂಆರ್ ಶೀಟ್‌ಗಳಲ್ಲಿ ನಾಲ್ಕು ವೃತ್ತದ ಬದಲು ಐದು ವೃತ್ತಗಳನ್ನು ಪರಿಚಯಿಸಿದೆ. ಸರಿ ಉತ್ತರ ತಿಳಿಯದ ವಿದ್ಯಾರ್ಥಿಗಳು ಮೊದಲು ಆ ವೃತ್ತಗಳನ್ನು ಖಾಲಿ ಬಿಡುತ್ತಿದ್ದರು. ಈಗ ಉತ್ತರ ಗೊತ್ತಿಲ್ಲದಿದ್ದರೆ ಐದನೇ ವೃತ್ತ (ಉತ್ತರ ಗೊತ್ತಿಲ್ಲ) ತುಂಬುವುದನ್ನು ಕಡ್ಡಾಯಗೊಳಿಸಲಾಗಿದೆ.

ಪರಿಶೀಲನೆಗೆ ಡಿಜಿಟಲ್ ದಾಖಲಾತಿ: ಯಾವುದೇ ನೇಮಕಾತಿಯಲ್ಲಿ ಪರೀಕ್ಷೆಯಷ್ಟೇ, ದಾಖಲೆಗಳ ಪರಿಶೀಲನಾ ಕಾರ್ಯವೂ ಮುಖ್ಯ. ಕೆಪಿಎಸ್‌ಸಿ ನಡೆಸುವ ಬಹುತೇಕ ಪರೀಕ್ಷೆಗಳಲ್ಲಿ ಪಾರದರ್ಶಕತೆ ಕೊರತೆಯು ಹಲವು ಗೊಂದಲ, ಅನುಮಾನಗಳನ್ನು ಮೂಡಿಸುತ್ತಿದೆ. ಅಂತಿಮ ಆಯ್ಕೆಪಟ್ಟಿ ಪ್ರಕಟವಾದ ನಂತರವೂ ದಾಖಲೆಗಳ ಪರಿಶೀಲನೆ, ಸಿಂಧುತ್ವ, ಪೊಲೀಸ್ ವರದಿ ತರಿಸಿಕೊಳ್ಳುವುದರಿಂದ ಸಾಕಷ್ಟು ವಿಳಂಬವಾಗುತ್ತದೆ.

ಆದರೆ, ಕೆಇಎಯು ಎಲ್ಲ ನೇಮಕಾತಿ ಗಳಲ್ಲೂ ಡಿಜಿಟಲ್ ಪರೀಶೀಲನೆಗೆ ಆದ್ಯತೆ ನೀಡಿದೆ. ಗ್ರಾಮ ಆಡಳಿತ ಅಧಿಕಾರಿಗಳ ನೇಮಕಾತಿ ಪಾರದರ್ಶಕವಾಗಿ ನಡೆದ ನಂತರ ಹಲವು ಅಭ್ಯರ್ಥಿಗಳು ಇದೇ ಮಾದರಿಯನ್ನು ಇತರೆ ಪರೀಕ್ಷೆಗಳಲ್ಲೂ ಅನುಸರಿಸಲು ಕ್ರಮಗೈಗೊಳ್ಳುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದು, ಪಾರದರ್ಶಕ ಮತ್ತು ತ್ವರಿತ ನೇಮಕಾತಿ ಪ್ರಕ್ರಿಯೆಗೆ ಕೈಗೊಂಡ ಕ್ರಮಗಳ ವರದಿಯನ್ನು ಸಲ್ಲಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಕೆಇಎಗೆ ಸೂಚಿಸಿದೆ.

ವೃತ್ತಿಶಿಕ್ಷಣ ಕೋರ್ಸ್‌ಗಳಿಗೆ ಪರೀಕ್ಷೆ ನಡೆಸುವ ಜತೆಗೆ ವಿವಿಧ ಇಲಾಖೆಗಳ ಖಾಲಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನೂ ಯಶಸ್ವಿಯಾಗಿ ನಡೆಸುತ್ತಿರುವ ಕೆಇಎ ಸುಧಾರಣಾ ಕ್ರಮಗಳಿಗೆ ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳು ಮೆಚ್ಚುಗೆ ವ್ಯಕ್ತಪಡಿಸಿವೆ. ಅದಕ್ಕಾಗಿ ಅಲ್ಲಿನ ಪರೀಕ್ಷಾ ಪ್ರಾಧಿಕಾರಗಳು ಕೆಇಎಗೆ ಹಲವು ಬಾರಿ ಭೇಟಿ ನೀಡಿದ್ದು, ಈ ಮಾದರಿಯನ್ನು ತಮ್ಮಲ್ಲೂ ಅಳವಡಿಸಿಕೊಳ್ಳುತ್ತಿವೆ.

ಕಾಲಮಿತಿ ಬಹಳ ಮುಖ್ಯ

ಹಣದ ದಂಧೆಗೆ ಬಿದ್ದವರು ವ್ಯವಸ್ಥೆಯ ದಾರಿ ತಪ್ಪಿಸಲು ನಿರಂತರ ಪ್ರಯತ್ನ ಮಾಡುತ್ತಾರೆ. ಆಮಿಷಗಳಿಗೆ ಒಳಗಾಗದೆ ಪಾರದರ್ಶಕ ಪರೀಕ್ಷೆ ನಡೆಸುವುದು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೂ ಸವಾಲಿನ ಕೆಲಸ. 25ರಿಂದ 35 ವರ್ಷ ಕಾರ್ಯಾಂಗದ ಭಾಗವಾಗುವ ಅಧಿಕಾರಿಗಳೂ ಸೇರಿದಂತೆ ಎಲ್ಲ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆಯು ಶೇ 100ರಷ್ಟು ಪಾರದರ್ಶಕ-ವಾಗಿದ್ದಾಗ ಮಾತ್ರ ಆಯ್ಕೆಯಾದವರಿಂದ ಪ್ರಾಮಾಣಿಕತೆ ನಿರೀಕ್ಷಿಸಲು ಸಾಧ್ಯ. ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ವ್ಯವಸ್ಥೆಯ ಮೇಲೆ ಇರುವ ಅಪನಂಬಿ-ಕೆಗಳನ್ನು ಮೊದಲು ದೂರ ಮಾಡಬೇಕು. ತಂತ್ರಜ್ಞಾನ ಬಳಕೆಯ ಮೂಲಕ ಪಾರದರ್ಶಕತೆ ತಂದು, ವಿಳಂಬ ತಪ್ಪಿಸಬೇಕು. ಕಾಲಮಿತಿಯ ಒಳಗೆ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡಾಗ ಪರೀಕ್ಷಾ ವ್ಯವಸ್ಥೆಯ ಮೇಲಿನ ನಂಬಿಕೆಯ ಪುನರ್‌ಸ್ಥಾಪನೆ ಸಾಧ್ಯ



ಎಚ್.ಪ್ರಸನ್ನ
ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಕೆಇಎ ಸುಧಾರಣೆಗಳು

- ಡಿಜಿಟಲ್ ಪೋರ್ಟಲ್‌ಗಳ ಮೂಲಕ ವಿದ್ಯಾರ್ಹತಾ ಪ್ರಮಾಣಪತ್ರಗಳ ಪರಿಶೀಲನೆ. ಭೌತಿಕ ದಾಖಲೆಗಳ ಪರಿಶೀಲನಾ ಕಾರ್ಯಕ್ಕೆ ಕೊನೆ
- ಕನ್ನಡ ಮತ್ತು ಗ್ರಾಮೀಣ ಮೀಸಲು ಪ್ರಮಾಣಪತ್ರಗಳನ್ನು ಶಾಲಾ ಶಿಕ್ಷಣ ಇಲಾಖೆಯ ಸೇವಾ ಸಿಂಧು ಮೂಲಕ ಆನ್‌ಲೈನ್‌ನಲ್ಲೇ ನೀಡಲು ಪ್ರಸ್ತಾವ
- ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗಲೇ ಪೊಲೀಸ್ ಪರಿಶೀಲನಾ ವರದಿ ಅಪ್‌ಲೋಡ್ ಮಾಡುವ ವ್ಯವಸ್ಥೆ
- ಆಯಾ ತಾಲ್ಲೂಕುಗಳಲ್ಲಿ ತಹಶೀಲ್ದಾರ್‌ಗಳು ನೀಡಿದ ಜಾತಿ ಪ್ರಮಾಣಪತ್ರ ಹಾಗೂ ಅಭ್ಯರ್ಥಿಯ ಘೋಷಣಾ ಪತ್ರದ ಆಧಾರದ ಮೇಲೆ ನೇಮಕಾತಿ
- ಪ್ರತಿ ನೇಮಕಾತಿಗೂ ವೆಬ್‌ಕಾಸ್ಟಿಂಗ್ ಕಣ್ಗಾವಲಿನಲ್ಲಿ ಪರೀಕ್ಷೆ ಆಯೋಜನೆ
- ನಕಲಿ ಅಭ್ಯರ್ಥಿಗಳ ಹಾವಳಿ ತಡೆಗೆ ಪರೀಕ್ಷಾ ಕೇಂದ್ರದ ಹೊರಗೆ ಮುಖಚಹರೆ ಗುರುತಿಸುವ ಆ್ಯಪ್ ಬಳಕೆ
- ಪರೀಕ್ಷೆ ನಡೆದ ದಿನವೇ ಅಭ್ಯರ್ಥಿಗಳ ಒಎಂಆರ್ ಶೀಟ್‌ಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು
- ಪರೀಕ್ಷೆ ನಡೆದ ಒಂದು ತಿಂಗಳ ಒಳಗೆ ಫಲಿತಾಂಶ ಮತ್ತು ಅಂತಿಮ ಆಯ್ಕೆ ಪಟ್ಟಿ ಪ್ರಕಟ
- ಪರೀಕ್ಷಾ ಕೇಂದ್ರಗಳ ಬಳಿ ಜಾಮರ್ ಬಳಕೆ, ತಪಾಸಣೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬೆಂಕಿ ಆಕಸ್ಮಿಕದ ವಿಡಿಯೊ ತುಣುಕೊಂದನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. 'ನೊಯಿಡಾ ಕೈಗಾರಿಕಾ ಪ್ರದೇಶದಲ್ಲಿ ವೇತನ ಹೆಚ್ಚಳಕ್ಕೆ ಆಗ್ರಹಿಸಿ ಕಾರ್ಮಿಕರು ನಡೆಸುತ್ತಿರುವ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದು, ಪರಿಸ್ಥಿತಿ ನಿಯಂತ್ರಣಕ್ಕಾಗಿ ಪೊಲೀಸರು ಪ್ರತಿಭಟನಕಾರರ ಮೇಲೆ ಗುಂಡು ಹಾರಿಸಿದ್ದಾರೆ. ಇದರಿಂದ ಆಕ್ರೋಶಗೊಂಡ ಪ್ರತಿಭಟನಕಾರರು ವಾಹನಗಳಿಗೆ ಬೆಂಕಿ ಹಚ್ಚಿ, ಕಲ್ಲು ತೂರಾಟ ನಡೆಸಿದ್ದಾರೆ' ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ ಇದು ಸುಳ್ಳು.



ವಿಡಿಯೊದ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿ ರಿವರ್ಸ್ ಇಮೇಜ್ ಸರ್ಚ್ ವಿಧಾನದಲ್ಲಿ ಹುಡುಕಾಟ ನಡೆಸಿದಾಗ, ಮಹಾರಾಷ್ಟ್ರದ ಅಂಬರ್‌ನಾಥ್‌ನಲ್ಲಿ ಸಂಭವಿಸಿದ ಬೆಂಕಿ ಅನಾಹುತದ ಬಗ್ಗೆ ಮರಾಠಿ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿದ್ದು ಕಂಡಿತು.. ಈ ವರದಿಗಳೊಂದಿಗೆ ಅಪ್‌ಲೋಡ್ ಮಾಡಲಾಗಿದ್ದ ವಿಡಿಯೊಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ವಿಡಿಯೊಗಳೇ ಆಗಿವೆ. ಈ ವರ್ಷದ ಮಾರ್ಚ್ 9ರಂದು ಅಂಬರ್‌ನಾಥ್‌ನ ಆನಂದನಗರ ಎಂಐಡಿಸಿನ ಗಣೇಶ್ ಕೆಮಿಕಲ್ ಕಂಪನಿಯಲ್ಲಿ ಭಾರಿ ಅಗ್ನಿ ಆಕಸ್ಮಿಕ ಸಂಭವಿಸಿತ್ತು. ಆ ಸಂದರ್ಭದಲ್ಲಿ ಚಿತ್ರೀಕರಿಸಲಾಗಿದ್ದ ವಿಡಿಯೊವನ್ನು ಈಗ ನೊಯಿಡಾದಲ್ಲಿ ನಡೆದ ಘಟನೆಯ ವಿಡಿಯೊ ಎಂದು ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ದೇವರ ವರದಾನ

ನುಡಿ ಬೆಳಗು



ರೇಣುಕಾ ನಿಡಗುಂದಿ

ಒಂದು ಹುಣ್ಣಿಮೆಯ ರಾತ್ರಿ ಕೆಲವು ಜನ ಬೆಸ್ತರು ಕಂಠಪೂರ್ತಿ ಹೆಂಡ ಕುಡಿದು ದೂರದ ದ್ವೀಪಕ್ಕೆ ಹೋಗಬೇಕೆಂದು ದೋಣಿಯೇರಿ ಕುಳಿತರು. ಇಬ್ಬರು ಒಂದೇ ಸಮನೆ ಹುಟ್ಟುಗೋಲು ಹಾಕಿ ದೋಣಿಯನ್ನು ನಡೆಸತೊಡಗಿದರು. ಕುಡಿದ ಆವೇಶದಲ್ಲಿ ಅವರು ಇಡೀ ರಾತ್ರಿ ಹುಟ್ಟುಗೋಲು ಹಾಕಿದರು. ಬೆಳಕು ಹರಿಯತೊಡಗಿದಂತೆ ಅವರ ನಶೆಯೂ ಇಳಿಯತೊಡಗಿತು. ಬೆಳಗಾಗುತ್ತಲೇ ಇನ್ನೇನು ಆ ದ್ವೀಪ ಬಂದಿರಬೇಕೆಂದು ಕಣ್ಣುಜ್ಜಿ ನೋಡುತ್ತಾರೆ, ಅರೇ… ಇದೇನಿದು, ರಾತ್ರಿ ಹೊರಟ ಕಡಲ ಕಿನಾರೆಯಲ್ಲಿಯೇ ಇದೆ ಅವರ ದೋಣಿ. ಗೂಟದಿಂದ ಅವರು ಆ ದೋಣಿಯನ್ನು ಬಿಚ್ಚಿಯೇ ಇರಲಿಲ್ಲ. ಗುರುದೇವ ರಾಮಕೃಷ್ಣ ಪರಮಹಂಸರು ಹೇಳುತ್ತಿದ್ದ ಕಥೆ ಇದು.

ದೋಣಿಯನ್ನು ಕಟ್ಟಿಹಾಕಿದ ಗೂಟದಿಂದ ಬಿಚ್ಚದೇ ಎಷ್ಟೇ ಹುಟ್ಟುಗೋಲು ಹಾಕಿದರೂ ಅದು ಹೇಗೆ ವ್ಯರ್ಥವೋ ಹಾಗೆಯೇ ಅಂತರಂಗದಿಂದ ಉಚ್ಚರಿಸದೇ ಯಾಂತ್ರಿಕವಾಗಿ ಬಾಯಲ್ಲಿ ಮಂತ್ರವನ್ನು ಎಷ್ಟೇ ಮಣಮಣಿಸಿದರೂ ವ್ಯರ್ಥವೇ ಎಂದು ಅವರು ಹೇಳುತ್ತಾರೆ.

ಮೋಟಾರು ಗಾಡಿಗೆ ಪೆಟ್ರೋಲ್ ತುಂಬಿಸಿಕೊಂಡಾಗ ಗಾಡಿ ಓಡುತ್ತದೆ. ಅದೇ ರೀತಿ ಜಪದ ಮೂಲಕ, ಧ್ಯಾನದ ಮೂಲಕ ನಮ್ಮ ಅಂತಃಶಕ್ತಿಯನ್ನು ಉದ್ದೀಪಿಸಿಕೊಳ್ಳುವುದರಿಂದ ನಮ್ಮ ಜೀವನದ ಗಾಡಿಯೂ ಓಡುತ್ತಿರುತ್ತದೆ ಮತ್ತು ಆ ಜಪ, ಧ್ಯಾನದ ಮೂಲಕ ನಮ್ಮನ್ನು ಪಾಲಿಸುತ್ತಿರುವ ಆ ದೇವರೆಂಬ ತತ್ವಕ್ಕೆ ಧನ್ಯವಾದಗಳನ್ನು ಅರ್ಪಿಸುವುದು ನಮ್ಮ ಮನುಷ್ಯರ ಕರ್ತವ್ಯವಾಗಿದೆ ಎನ್ನುತ್ತಾರೆ ಗುರುಗಳು.

ಈ ಮಾತು ಕೇವಲ ಜಪ ತಪಕ್ಕೇ ಸೀಮಿತವಾಗಿಲ್ಲ. ನಾವದನ್ನು ದಿನನಿತ್ಯದ ಬದುಕಿನಲ್ಲಿಯೂ ಅಳವಡಿಸಿಕೊಳ್ಳುವುದರಿಂದ ಲಾಭವೇ ಹೊರತು ನಷ್ಟವೇನಿಲ್ಲ. ಅದು ಕಚೇರಿಯಾಗಿರಲಿ ಅಥವಾ ಸ್ವಂತದ ಕೆಲಸವಾಗಿರಲಿ ಮಾಡುವ ಕೆಲಸವನ್ನು ತಪಸ್ಸಿನಂತೆ ಮಾಡಿದಾಗ ಅದರ ಫಲ ಆಶ್ಚರ್ಯಪಡುವಷ್ಟು ಮಧುರವಾಗಿರುತ್ತದೆ. ಯಾವತ್ತೂ ಸ್ವಂತ ಉದ್ಯಮವನ್ನು ಮಾಡದ ವ್ಯಕ್ತಿಯೊಬ್ಬ ಒಂದು ಕಾರ್ಖಾನೆಯನ್ನೋ, ಗಿರಣಿಯನ್ನೋ, ಕಿರಾಣಿ ಅಂಗಡಿಯನ್ನೋ ಅಥವಾ ಯಂತ್ರಗಳ ಬಿಡಿ ಭಾಗಗಳ ಅಂಗಡಿಯನ್ನೋ ಹಾಕಿದ್ದಾನೆಂದುಕೊಳ್ಳಿ. ಅದು ಒಮ್ಮೆಲೇ ಲಾಭವನ್ನು ಸೃಷ್ಟಿಸಿಕೊಡುವುದಿಲ್ಲ. ಆರಂಭದಲ್ಲಿ ನಷ್ಟವಾಗಬಹುದು, ಹಾಕಿದ ಹಣವೂ ಬಾರದೇ ಕೈಸುಟ್ಟುಕೊಳ್ಳಬಹುದು. ಆದರೆ, ನಿರಂತರವಾದ ಪರಿಶ್ರಮದಿಂದ ಮಾಡುವ ಕೆಲಸದಲ್ಲಿ ಎಷ್ಟೇ ಅಡ್ಡಿ ಆತಂಕಗಳು ಬಂದರೂ ಅವರು ನಿಲ್ಲುವುದಿಲ್ಲ. ನಡೆಯುವ ಹಾದಿಯನ್ನು ಬದಲಿಸುವುದಿಲ್ಲ. ದೇವರು ಕೊಡುವ ಎಲ್ಲಾ ಕಷ್ಟಗಳೂ ಯಶಸ್ಸಿನ ಮೆಟ್ಟಲುಗಳೆಂದೇ ಸಹಿಸಿಕೊಂಡು ಕೆಲಸ ಮಾಡುತ್ತಿದ್ದರೆ ಯಶಸ್ಸು ಒಂದಿನ ಕದ ತಟ್ಟುತ್ತದೆ. ಅಂತಹ ಕಠಿಣ ಸಮಯದಲ್ಲಿ ಸಾಕಪ್ಪಾ ಎಂದು ಕೈಚೆಲ್ಲುವ ಮನಸ್ಸೂ ಚಂಚಲವಾಗಬಹುದು. ಆದರೆ ತಪಸ್ಸಿನಂತೆ ದೃಢತೆಯಿಂದ ಮಾಡುವ ಕಾರ್ಯದಲ್ಲಿ ಸೋಲು ಎಂಬುದಿಲ್ಲ. ಕಗ್ಗತ್ತಲ ಸುರಂಗದ ಆಚೆ ಬೆಳಕು ಇದ್ದೇ ಇದೆ.

ಬಿತ್ತಿದ ಒಂದು ಕೇಜಿ ಬೀಜವು ನೂರು ಕೆ.ಜಿ ಫಸಲನ್ನು ಕೊಡುವಂತೆ ನಾವು ಆರಂಭಿಸುವ ಸಣ್ಣ ಹೆಜ್ಜೆಯೂ ಹತ್ತಾರು ಮೈಲುಗಳ ದೂರವನ್ನು ಕ್ರಮಿಸಬಹುದು. ನೆಡುವ ಒಂದು ಮರವೂ ಹೆಮ್ಮರವಾಗಿ ನೂರಾರು ಜನರಿಗೆ ನೆರಳು ನೀಡಬಹುದು. ಯಾವ ಪ್ರಯತ್ನವನ್ನೂ ಮಾಡದೇ ಗೂಟಕ್ಕೆ ಕಟ್ಟಿದ ದೋಣಿಯನ್ನು ಬಿಚ್ಚದೇ ದೋಣಿ ಸಾಗುವುದಾದರೂ ಹೇಗೆ? ಇದನ್ನೇ ಶರಣರು 'ಕಾಯಕವೇ ಕೈಲಾಸ' ಎಂದರು. ಹತ್ತು ಬೆರಳುಗಳನ್ನು ದುಡಿಸಿ ಐದು ಬೆರಳುಗಳಿಂದ ಉಣ್ಣು ಎಂದರು ಹಿರಿಯರು. ಜಪ, ತಪ, ಧ್ಯಾನಗಳಂತೆಯೇ ಪರಿಶ್ರಮವೂ ಮನುಷ್ಯನಿಗೆ ದೇವರು ನೀಡಿದ ವರದಾನವೇ ಹೊರತು ಶಾಪವಲ್ಲ.

ಪದಬಂಧ 6376

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಶಿವನ ಬಳಿಯಿರಿಸಿದ ಮಣ್ಣಿನ ಬಾನಿ (3)
3.ಸಮೀಪದಲ್ಲಿದ್ದು ಸೂಕ್ಷ್ಮವಾಗಿಯೇ ಪರಿಶೀಲಿಸುವವ (4)
5.ವ್ಯಾಕರಣದ ವಿಭಕ್ತಿಗಳಲ್ಲಿ ಮೊದಲನೆಯದು (3)
6.ಕಲೆಸಿದ ಗೋಧಿ ಹಿಟ್ಟು (3)
8.ಒಳ್ಳೆಯ ಅದೃಷ್ಟವನ್ನು ಹೊಂದಿರುವುದು (3)
10.ಸಂತಸದಿಂದ ಉಕ್ಕಿದ ಕಣ್ಣೀರು (4)
11.ದಾಳಿ ವೇಳೆಯಲ್ಲಿ ಕಾಣಿಸಿದ್ದು ಈ ಜಾತಿಯ ಕಬ್ಬು! (4)
12.ಹೊಂಗೆಯ ಮರವಿದು (3)
14.ಬನವಾಸಿಯನ್ನಾಳಿದ ರಾಜವಂಶ (3)
16.ಅತ್ಯಾಸಕ್ತಿಯಿಂದ ಕೂಡಿದವನು (3)
18.ವೇದಾದಿಗಳನ್ನು ಅಧ್ಯಯನ ಮಾಡಿದವನೀತ (4)
19.ಬೆಲೆ ಕೊಟ್ಟು ಕೊಂಡುಕೊಳ್ಳುವಿಕೆ (3)

ಮೇಲಿಂದ ಕೆಳಕ್ಕೆ
2.ಪವಿತ್ರತೆಯನ್ನು ಕಾಪಾಡಿಕೊಂಡು ಬಂದಿರುವ ಬ್ರಾಹ್ಮಣ (2)
3.ಆರಂಭವಾಗಿದೆ ಈ ಉತ್ಸವ! (4)
4.ಸ್ವಲ್ಪ ಕಾಲದಲ್ಲಿಯೇ ನಾಶವಾಗತಕ್ಕದ್ದು (3)
7.ಈ ಬಾಳೆಗಿಡದಲ್ಲಿ ಕಳಿತ ಫಲವಿದೆ (3)
8.ಅಶ್ರು ಏಕೆ? ಪ್ರಾಚೀನ ವೈದ್ಯ ಇಲ್ಲಿಹನಲ್ಲಾ? (3)
9.ದುಷ್ಟಶಕ್ತಿಗಳ ಹತ್ತಿರ ನಂಜು ಇದೆಯಲ್ಲಾ! (3)
10.ದೈವ ಧರ್ಮಗಳಲ್ಲಿ ಈತನಿಗೆ ಬಲು ನಂಬಿಕೆ! (3)
13.ಮಾತು ಆಡುತ್ತಲೇ ಬಂದಿರುವ ಸೋದರಮಾವನ ಹೆಂಡತಿ (4)
15.ದುಡ್ಡು ಕಾಸು ಏನೂ ಇಲ್ಲದವನು (3)
17.ಸಖ್ಯತೆ ಬೆಳಸಿಕೊಂಡಿರುವವನು (2)

1		2	■	3		4		■
■	■	5			■		■	■
■	■	■	■		■	6		7
■	■	■	8		9	■	■	
10				■	11			
	■	■	12	13		■	■	■
14		15	■		■	■	■	■
■	■		■	16		17	■	■
■	18				■	19		

6375ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪವೀತ 3.ನಿರರ್ಥಕ
5.ವಲಯ 6.ರಜಕ
8.ಮಂಡೂಕ 9.ಕನ್ನಡಿ
10.ಪದವಿ 14.ಧುರೀಣ
15.ಗಡಿಯಾರ 16.ಬಲಿದಾನ

ಮೇಲಿಂದ ಕೆಳಕ್ಕೆ:
1.ಉಪಕಾರ 2.ತವಕ
3.ನಿಯಮ 4.ಕರಣಿಕ
7.ಕರಡಿ 8.ಮಂಟಪ
9.ಕವಾಡಿಗ 11.ವಿಕಸನ
12.ಮಧುರ 13.ವೆಣಬ

ಸುಡೊಕು 6759

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			3		4		6
4		1	5		2			
				4			5	1
	9				4	6		
6		2		8				5
		4	2			3		
				2				9
	1	3			5		6	
9	4		6		3	8		2

6758 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ಏಪ್ರಿಲ್ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಅಮಾವಾಸ್ಯೆ ಗಂ. 17-22. ನಕ್ಷತ್ರ: ರೇವತಿ ಗಂ. 12-02 ಯೋಗ: ವೈಧೃತಿ ಗಂ. 7-22 ನಂತರ ವಿಷ್ಕಂಭ ಗಂ 27-46 ಕರಣ: ಚತುಷ್ಪಾದ ಗಂ. 6-50 ಮೇಷ ಮಾಸದ 04 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-20 ಸೂರ್ಯಾಸ್ತ : 06-40, ಮುಸ್ಲಿಂ ದಿನಾಂಕ : 28 ಶವ್ವಾಲ್, ಅದೃಷ್ಟ ಸಂಖ್ಯೆ : 8, 11

ಮೇಷ: ಬಾಕಿ ಇರಿಸಿದ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನವಹಿಸಿ. ವಾಹನಗಳ ಬಿಡಿ ಭಾಗಗಳ ಮಾರಾಟಗಳಿಂದ ಲಾಭ ಪಡೆಯುವಿರಿ.

ವೃಷಭ: ಹೊಸ ಉದ್ಯೋಗ ಅಥವಾ ಕರಾರುಗಳ ವಿಚಾರಗಳಲ್ಲಿ ಮುಂದುವರಿಯುವುದು ಸರಿಯಲ್ಲ. ಮಾಧ್ಯಮ ಕ್ಷೇತ್ರದಲ್ಲಿರುವವರಿಗೆ ಉತ್ತಮ ದಿನ. ಬಂಧುಗಳೊಂದಿಗೆ ಮನಸ್ತಾಪ ಉಂಟಾಗಬಹುದು.

ಮಿಥುನ: ಕುಟುಂಬದ ಸದಸ್ಯರು ಜೊತೆಗೂಡಿ ಸಂತೋಷಮಯವಾಗಿ ಕಾಲ ಕಳೆಯುವ ಅವಕಾಶ ಲಭ್ಯ. ಸ್ನೇಹಿತರ ಸಹಾಯ, ಸಹಕಾರ ಹಾಗೂ ಸಲಹೆಯಿಂದ ಎಲ್ಲವೂ ಸರಾಗವಾಗಿ ನಡೆಯಲಿವೆ.

ಕರ್ಕಾಟಕ: ನಾಳೆಯ ಕಾರ್ಯಕ್ರಮಗಳಿಗೆ ಇಂದಿನಿಂದಲೇ ತಯಾರಿಯನ್ನು ನಡೆಸಿ. ಹೊಸ ಕ್ರಿಯಾಶೀಲ ಉದ್ಯೋಗದಿಂದ ತೃಪ್ತಿ ಕಾಣುವಿರಿ. ದೈನಂದಿನ ಕೆಲಸಗಳಲ್ಲಿ ಬದಲಾವಣೆಗಳಿರುವುದಿಲ್ಲ.

ಸಿಂಹ: ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರಗಳಿಂದ ಲಾಭ ಗಳಿಸುವಿರಿ. ಹೊಸ ವಸ್ತುಗಳನ್ನು ಕೊಳ್ಳುವ ಯೋಗವಿದೆ. ವಾಹನಾದಿ ಯಂತ್ರಗಳಿಂದ ಧನ ಮತ್ತು ಸಮಯ ವ್ಯಯವಾಗಬಹುದು. ಮಹಾಗಣಪತಿಯನ್ನು ಆರಾಧಿಸಿ.

ಕನ್ಯಾ: ಸಂಸಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಏಕಾಏಕಿ ನಿರ್ಧಾರ ತೆಗೆದು-ಕೊಳ್ಳುವುದರ ಬದಲು ಮಡದಿಯೊಂದಿಗೆ ಲಾಭ-ನಷ್ಟದ ಬಗ್ಗೆ ಚರ್ಚೆ ನಡೆಸಿ. ಸ್ನೇಹಿತರ ಆತ್ಮೀಯ ಮಾತುಗಳು ಜೀವನದಲ್ಲಿ ಧೈರ್ಯ ಬಂದಂತಾಗುತ್ತದೆ.

ತುಲಾ: ಮೌನವೆಂಬ ಅಸ್ತ್ರವು ಹಲವು ಸಮಸ್ಯೆಗಳಿಂದ ದೂರ ಉಳಿಯುವ ಹಾಗೆ ಮಾಡಲಿದೆ. ರಾಜಕೀಯ ವಲಯದಲ್ಲಿ ನಿರೀಕ್ಷಿತ ಕೆಲಸ ಕಾರ್ಯಗಳು ನೆರವೇರಲಿವೆ.

ವೃಶ್ಚಿಕ: ವಿದೇಶಿ ವ್ಯವಹಾರಗಳು ಲಾಭದಾಯಕವಾಗಿರುತ್ತವೆ. ವ್ಯವಹಾರಕ್ಕಾಗಿ ವಿದೇಶ ಯಾನ ಮಾಡುವ ಪರಿಸ್ಥಿತಿ ಬರಬಹುದು. ಬಾಡಿಗೆದಾರರಿಂದ ಸಣ್ಣ-ಪುಟ್ಟ ಕಿರಿಕಿರಿ ತಪ್ಪಿದ್ದಲ್ಲ. ಆರೋಗ್ಯದಲ್ಲಿ ಕಾಳಜಿ ಇರಲಿ.

ಧನು: ಹೃದ್ರೋಗ ಇರುವವರಿಗೆ ರೋಗ ಉಲ್ಬಣವಾಗುವ ಸಾಧ್ಯತೆಗಳಿವೆ. ಪ್ರಯಾಣ ಮತ್ತು ಹೊಸಬರ ಪರಿಚಯ ಅನುಕೂಲಕರವಾಗಲಿದೆ. ಇಂದಿನ ಕೆಲಸಗಳಿಗೆ ಆತ್ಮಸ್ಥೈರ್ಯ ಮುಖ್ಯ.

ಮಕರ: ನೇರ ನಡೆ-ನುಡಿಯು ಕಲಹ ಉಂಟಾಗಲು ಕಾರಣವಾಗಬಹುದು. ಭವಿಷ್ಯದ ಭರವಸೆ ಕಳೆದುಕೊಳ್ಳುವಂತಾಗಲಿದೆ. ದೇಹದಲ್ಲಿ ಉತ್ಸಾಹವಿರುವು-ದರಿಂದ ಎಲ್ಲ ಕಾರ್ಯಗಳಲ್ಲಿ ಯಶಸ್ಸು ದೊರೆಯುವುದು.

ಕುಂಭ: ಹಿರಿಯ ಅಧಿಕಾರಿಗಳ ಆಕಸ್ಮಿಕ ಭೇಟಿ ಫಲವಾಗಿ ಉದ್ಯೋಗದಲ್ಲಿ ಹುದ್ದೆ, ಅಧಿಕಾರ ಪ್ರಾಪ್ತಿ. ಸ್ನೇಹಪರ ಸ್ವಭಾವದಿಂದ ವೈಯಕ್ತಿಕ ಸ್ಥಾನ ಮಾನಗಳು ಲಭಿಸಲಿವೆ. ಆತ್ಮವಿಶ್ವಾಸವೇ ಶ್ರೀರಕ್ಷೆಯಾಗಿರುತ್ತದೆ.

ಮೀನ: ಆಡಳಿತ ಮಂಡಳಿ ಎದುರು ಕಾರ್ಮಿಕರ ಪರವಾಗಿ ನಿಲ್ಲುವುದು ಉದ್ಯೋಗಕ್ಕೆ ಕಂಟಕವನ್ನು ತಂದೊಡ್ಡಲಿದೆ. ಉದ್ವೇಗಕ್ಕೆ ಒಳಗಾಗದಿದ್ದರೆ ಯಶಸ್ಸು ನಿಮ್ಮದೇ.

ಗುಂಡಣ್ಣ



‘ಮುಸ್ಲಿಮರನ್ನು ಲಘುವಾಗಿ ಕಂಡರೆ ತಕ್ಕ ಪಾಠ’

ಕಾಂಗ್ರೆಸ್ ವಿರುದ್ಧ ಧಾರ್ಮಿಕ ಮುಖಂಡರ ಅಸಮಾಧಾನ

• ಸಮುದಾಯ ದೂರವಾದರೆ ಕಾಂಗ್ರೆಸ್ ದುರ್ಬಲ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಒಂದು ಕುಟುಂಬಕ್ಕಾಗಿ ಮುಸ್ಲಿಮರನ್ನು ಕೈಬಿಟ್ಟು, ಸಮುದಾಯದ ಮುಖಂಡರ ಮೇಲೆ ಕ್ರಮ ಕೈಗೊಳ್ಳುತ್ತಿದೆ. ಪಕ್ಷದ ಈ ನಡೆ ನಮಗೆ ಅಸಮಾಧಾನವನ್ನುಂಟು ಮಾಡಿದೆ. ಕಾಂಗ್ರೆಸ್ ಹೊರತುಪಡಿಸಿ ನಮಗೆ ಬೇರೆ ಆಯ್ಕೆಗಳಿವೆ’ ಎಂದು ಮುಸ್ಲಿಂ ಧಾರ್ಮಿಕ ಮುಖಂಡರು ಎಚ್ಚರಿಕೆ ನೀಡಿದರು.

ಮುಖ್ಯಾಂಶಗಳು

- ನಸೀರ್ ಅಹಮದ್ ವಜಾ, ಅಬ್ದುಲ್ ಜಬ್ಬಾರ್ ಅಮಾನತು: ಆಕ್ರೋಶ
- ಸಮುದಾಯದ ಸಭೆ ನಡೆಸಲು ನಿರ್ಧಾರ
- ‘ಅಲ್ಪಸಂಖ್ಯಾತ ಅಭ್ಯರ್ಥಿಗೆ ಟಿಕೆಟ್ ನೀಡದೆ ಅನ್ಯಾಯ’

ಉಲಮಾ ಎ ಕರ್ನಾಟಕ ಸಂಸ್ಥೆಯು ಗುರುವಾರ ಇಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಮೀಯತ್ ಉಲಮಾ ಕರ್ನಾಟಕದ ಅಧ್ಯಕ್ಷ ಮುಫ್ತಿ ಇಫ್ತಿಖಾರ್ ಅಹ್ಮದ್ ಖಾಸ್ಮಿ, ‘ಮುಸ್ಲಿಮರು ಕಾಂಗ್ರೆಸ್‌ನಿಂದ ದೂರವಾದರೆ ಕರ್ನಾಟಕದಲ್ಲಿಯೂ ಆ ಪಕ್ಷ ದುರ್ಬಲವಾಗುತ್ತದೆ. ಅನಗತ್ಯವಾಗಿ ಮುಸ್ಲಿಂ ಸಮುದಾಯದವರಿಗೆ ತೊಂದರೆ ನೀಡುವುದನ್ನು ನಾವು ಸಹಿಸುವುದಿಲ್ಲ. ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಸೀರ್ ಅಹಮದ್ ಅವರ ವಜಾ ಮತ್ತು ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ಪಕ್ಷದಿಂದ ಅಮಾನತುಗೊಳಿಸಿರುವುದು ಬೇಸರ ತಂದಿದೆ. ಕಾಂಗ್ರೆಸ್ ಹೈಕಮಾಂಡ್ ಮಧ್ಯ ಪ್ರವೇಶಿಸದಿದ್ದರೆ, ಸಮುದಾಯದ ಹಿತಾಸಕ್ತಿ, ಗೌರವ, ಘನತೆ ಕಾಪಾಡಲು ಹಾಗೂ ಮುಂದಿನ ನಡೆ ಬಗ್ಗೆ ಚರ್ಚಿಸಲು ಸಮುದಾಯದ ಸಭೆ ಕರೆಯುತ್ತೇವೆ’ ಎಂದು ಹೇಳಿದರು.

ಮುಸ್ಲಿಂ ಮುಖಂಡ ಜುಲ್ಫಿಕಾರ್ ಅಹ್ಮದ್ ನೂರಿ, ‘ದಾವಣಗೆರೆ ದಕ್ಷಿಣ ಮತ್ತು ಉತ್ತರ ಕ್ಷೇತ್ರದಲ್ಲಿ ನಮ್ಮ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಂದು ಕ್ಷೇತ್ರದಲ್ಲಾದರೂ ಮುಸ್ಲಿಮರಿಗೆ ಟಿಕೆಟ್ ನೀಡುವಂತೆ ಹಿಂದಿನಿಂದಲೂ ಒತ್ತಾಯಿಸುತ್ತಾ ಬರಲಾಗಿತ್ತು. ಉಪ ಚುನಾವಣೆ ಘೋಷಣೆಯಾದ ಬಳಿಕ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಜತೆಗೆ ನಡೆಸಿದ ಚರ್ಚೆಯಲ್ಲಿ, ಅಲ್ಪಸಂಖ್ಯಾತ ಅಭ್ಯರ್ಥಿಗೆ ಟಿಕೆಟ್ ನೀಡುವುದಾಗಿ ಅವರು ಭರವಸೆ ನೀಡಿದ್ದರು. ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗನ ಹೆಸರು ಘೋಷಿಸಿದಾಗ ನಾವು ಆಘಾತಕ್ಕೆ ಒಳಗಾದೆವು. ಚುನಾವಣೆಯ ನಂತರದ ಬೆಳವಣಿಗೆಗಳು ಕಾಂಗ್ರೆಸ್ ಬಗ್ಗೆ ಅಸಮಾಧಾನ ಹೆಚ್ಚಿಸಿವೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಮಾತ್ ಅಹಲೆ ಸುನ್ನತ್ ಕರ್ನಾಟಕದ ಅಧ್ಯಕ್ಷ ತನ್ವೀರ್ ಪೀರಾನ್ ಹಾಶ್ಮಿ, ‘ಈ ಹಿಂದಿನ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದ್ದೇವೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವಲ್ಲಿ ಮುಸ್ಲಿಮರು ಕೊಡುಗೆ ನೀಡಿದ್ದಾರೆ. ಆದರೆ, ಸಮುದಾಯಕ್ಕೆ ನೀಡಿದ ಭರವಸೆಗಳನ್ನು ಮರೆತಿರುವ ಪಕ್ಷ, ಈಗ ಮುಸ್ಲಿಂ ವಿರೋಧಿ ಕ್ರಮಗಳನ್ನು ಕೈಗೊಳ್ಳುತ್ತಿದೆ’ ಎಂದು ದೂರಿದರು.

ದಾರುಲ್ ಶಾ ವಸೀವುಲ್ಲಾ ಪ್ರಾಂಶುಪಾಲ ಮೊಹ್ಮದ್ ಜೈನುಲ್ ಅಬಿದ್ದೀನ್ ರಶಾದಿ ಮಜ್‌ಹರಿ, ವೆಲ್ಫೇರ್ ಆಫ್ ಹುಮ್ಯಾನಿಟಿ ಫೌಂಡೇಷನ್ ಅಧ್ಯಕ್ಷ ಶಬ್ಬೀರ್ ಅಹ್ಮದ್ ನದ್ವಿ ಉಪಸ್ಥಿತರಿದ್ದರು.

‘ಯಾವ ಸಮುದಾಯವನ್ನೂ ಗುರಿ ಮಾಡಿಲ್ಲ’

ಮಾಲೂರು (ಕೋಲಾರ): ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ವೇಳೆ ನಡೆದ ಕಾಂಗ್ರೆಸ್ ಪಕ್ಷದ ಒಳಗಿನ ಚಟುವಟಿಕೆಗಳ ಪ್ರಾಥಮಿಕ ವರದಿ ಆಧಾರದ ಮೇಲೆ ಹೈಕಮಾಂಡ್ ಕೆಲವು ಕಠಿಣ ನಿರ್ಧಾರ ತೆಗೆದುಕೊಂಡಿದೆ. ಇನ್ನೂ ಸಮಗ್ರ ವರದಿ ಬರಬೇಕಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.


ಶರಣ ಪ್ರಕಾಶ ಪಾಟೀಲ

ದಾವಣಗೆರೆ ದಕ್ಷಿಣ ಕ್ಷೇತ್ರದ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್‌ನಲ್ಲಿ ನಡೆದಿರುವ ತಲೆದಂಡದ ಕುರಿತು ತಾಲ್ಲೂಕಿನ ಟೇಕಲ್‌ನಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಕಾಂಗ್ರೆಸ್ ಪಕ್ಷ ಯಾವುದೇ ಸಮುದಾಯ ಅಥವಾ ಮುಖಂಡರನ್ನು ಗುರಿ ಮಾಡಿಲ್ಲ. ಪಕ್ಷದಲ್ಲಿ ಯಾರನ್ನೂ ಕಡೆಗಣಿಸುವ ಪ್ರಶ್ನೆ ಇಲ್ಲ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರೂ ಟಿಕೆಟ್ ಕೇಳಿದ್ದರು. ಅದರಲ್ಲೇನೂ ತಪ್ಪು ಇಲ್ಲ. ಯಾರನ್ನೂ ಕಡೆಗಣಿಸುವ ಪ್ರಶ್ನೆ ಇಲ್ಲ. ಹಾಲಿ ಶಾಸಕರು ಮೃತಪಟ್ಟಾಗ ಅವರ ಕುಟುಂಬದ ಸದಸ್ಯರಿಗೆ ಟಿಕೆಟ್ ನೀಡುವ ಪರಿಪಾಠ ಕಾಂಗ್ರೆಸ್‌ನಲ್ಲಿದೆ ಎಂದು ಸಮರ್ಥಿಸಿಕೊಂಡರು.

ಒಂದು ಕುಟುಂಬಕ್ಕಾಗಿ ಅಹಿಂದ ಸಮಾಜ ಬಲಿಕೊಡಲಾಗುತ್ತಿದೆಯೇ ಎಂಬುದಕ್ಕೆ, ‘ಕಾಂಗ್ರೆಸ್ ಪಕ್ಷ ಎಲ್ಲಾ ಸಮಾಜ, ವರ್ಗದ ಜನರ ಹಿತ ಕಾಪಾಡುತ್ತಿದೆ. ಸಾಮಾಜಿಕ ನ್ಯಾಯದ ಪರವಾಗಿರುವ ಪಕ್ಷ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ಹೇಳಿದರು.

ಸುದ್ದಿ 2 ನಿಮಿಷ


ಜಾನಪದ ಹೊರತಾದ ಕೋರ್ಸ್: ಪರಿಶೀಲನೆಗೆ ಸಮಿತಿ

ಬೆಂಗಳೂರು: ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಜಾನಪದಕ್ಕೆ ಹೊರತಾದ ವಿವಿಧ ಕೋರ್ಸ್‌ಗಳ ಕಲಿಕೆಗೆ ಅವಕಾಶ ಮಾಡಿಕೊಟ್ಟಿರುವುದನ್ನು ಪರಿಶೀಲಿಸಿ ವರದಿ ನೀಡಲು ವಿಶ್ರಾಂತ ಕುಲಪತಿ ಹಿ.ಚಿ. ಬೋರಲಿಂಗಯ್ಯ ನೇತೃತ್ವದಲ್ಲಿ ರಾಜ್ಯ ಸರ್ಕಾರ ಸಮಿತಿ ರಚಿಸಿದೆ.

ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರ ಅನುಮತಿ ಪಡೆಯದೇ ಪಠ್ಯಕ್ರಮಗಳ ನಿಯಮ ರೂಪಿಸಿಕೊಂಡು, ತನ್ನ ವಿಶೇಷತೆಗೆ ಸಂಬಂಧಿಸದ ಸ್ನಾತಕೋತ್ತರ ಪಠ್ಯಕ್ರಮಗಳನ್ನು ಅಳವಡಿಸಿಕೊಂಡಿದೆ ಎಂಬ ದೂರು ಬಂದಿತ್ತು. ಇದರ ಆಧಾರದಲ್ಲಿ ಉನ್ನತ ಶಿಕ್ಷಣ ಇಲಾಖೆ ಸಮಿತಿ ರಚಿಸಿದ್ದು, 15 ದಿನಗಳ ಒಳಗೆ ವರದಿ ಸಲ್ಲಿಸುವಂತೆ ಸೂಚಿಸಿದೆ.

ಇದು ಜಾನಪದ ಅಧ್ಯಯನಕ್ಕೆ ಮಾತ್ರ ಸೀಮಿತವಾದ ವಿಶೇಷ ವಿಶ್ವವಿದ್ಯಾಲಯವಾಗಿದೆ. ಎಂಟು ವರ್ಷಗಳಿಂದ ಅರ್ಥಶಾಸ್ತ್ರ, ಸಮಾಜ ಸೇವಾ ಕಾರ್ಯ, ಸಮಾಜ ಶಾಸ್ತ್ರ, ಪ್ರದರ್ಶನ ಕಲೆಗಳು ಹಾಗೂ ದೃಶ್ಯಕಲೆಗಳಂತಹ ವಿಷಯಗಳಲ್ಲಿ ಕೋರ್ಸ್‌ಗಳನ್ನು ನಡೆಸುತ್ತಿದೆ.

‘ಜಾನಪದ ವಿಷಯಗಳಿಗೆ ಸಂಬಂಧಿಸಿದ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲಷ್ಟೇ ಅನುಮತಿ ಇದ್ದರೂ 2018–19ರಿಂದ ಬೇರೆಬೇರೆ ಕೋರ್ಸ್‌ಗಳನ್ನು ನಡೆಸಲಾಗುತ್ತಿದ್ದು, ವಿವಿಧ ಕೋರ್ಸ್‌ಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ, ಪದವಿ ಪಡೆದವರ ವಿವರ, ಪಠ್ಯಕ್ರಮ, ಅಧ್ಯಯನ ಮಂಡಳಿ ಸದಸ್ಯರು, ಅದರ ನಿರ್ಣಯ, ಸಿಂಡಿಕೇಟ್ ಸಭೆಗಳ ವಿವರ ಸಲ್ಲಿಸಬೇಕು’ ಎಂದು ಸಮಿತಿಯು ವಿ.ವಿ.ಯನ್ನು ಕೋರಿದೆ.



ಅಶುತೋಷ್ ಹೆಗಡೆ ವಿರುದ್ಧದ ವಿಚಾರಣೆಗೆ ತಡೆ

ಬೆಂಗಳೂರು: ಕಾರಿನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ದಾಬಸ್‌ಪೇಟೆಯ ಬಳಿ ಹೆದ್ದಾರಿಯಲ್ಲಿ ನಡೆದಿದ್ದ ರಸ್ತೆ ರಂಪಾಟ ಪ್ರಕರಣದಲ್ಲಿ ಕೇಂದ್ರದ ಮಾಜಿ ಸಚಿವ ಅನಂತಕುಮಾರ್ ಹೆಗಡೆ ಪುತ್ರ ಅಶುತೋಷ್ ಹೆಗಡೆ ವಿರುದ್ಧದ ಅಧೀನ ಕೋರ್ಟ್ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

‘ನಮ್ಮ ವಿರುದ್ಧ ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಅನಂತ ಕುಮಾರ್ ಹೆಗಡೆ, ಶಶಿಧರ ಬಿದ್ದಾಡಪ್ಪ ತೆಗ್ಗಿನವರ ಮತ್ತು ಮಹೇಶ್ ರಾಜು ಶೆಟ್ಟಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯಲ್ಲಿನ ಅಶುತೋಷ್ ಅವರ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯ ಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಚ್. ಪವನಚಂದ್ರ ಶೆಟ್ಟಿ, ‘ಎಫ್‌ಐಆರ್, ದೋಷಾರೋಪ ಪಟ್ಟಿಯಲ್ಲಿ ಅಶುತೋಷ್ ಹೆಸರು ಇಲ್ಲದಿರುವುದರಿಂದ ಅವರನ್ನು ಕೈಬಿಡಬೇಕು’ ಎಂದು ಮನವಿ ಮಾಡಿದರು. ಇದಕ್ಕೆ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಅರ್ಜಿಯಲ್ಲಿ ಮೊದಲಿಗೆ ಅಶುತೋಷ್ ಪಕ್ಷಗಾರ ಆಗಿರಲಿಲ್ಲ. ತಿದ್ದುಪಡಿ ಅಥವಾ ಪ್ರತ್ಯೇಕ ಅರ್ಜಿ ಸಲ್ಲಿಸಿದರೆ ಅದನ್ನು ಪರಿಗಣಿಸಬಹುದು’ ಎಂದರು. ‘ಅಶುತೋಷ್ ವಿರುದ್ಧ ಮೇಲ್ನೋಟಕ್ಕೆ ಅಪರಾಧ ಪ್ರವೃತ್ತಿಯ ಆರೋಪಗಳಿಲ್ಲ’ ಎಂದ ನ್ಯಾಯಪೀಠ ವಿಚಾರಣಾ ಪ್ರಕ್ರಿಯೆಗೆ ತಡೆ ನೀಡಿತು.

ನ್ಯಾಯಾಧೀಶ ಸಂತೋಷ ಗಜಾನನ ಭಟ್ ವರ್ಗಾವಣೆ

ಬೆಂಗಳೂರು: ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆ ಹಾಗೂ ತಾಲ್ಲೂಕು ನ್ಯಾಯಾಲಯಗಳ 369 ನ್ಯಾಯಾಧೀಶರನ್ನು ವರ್ಗಾವಣೆ ಮಾಡಿ ಗುರುವಾರ ಆದೇಶಿಸಲಾಗಿದೆ.

ಸಂತೋಷ ಗಜಾನನ ಭಟ್ ಅವರನ್ನು ‘ಕರ್ನಾಟಕ ಮಧ್ಯಸ್ಥಿಕೆ ಕೇಂದ್ರ’ದ ನಿರ್ದೇಶಕ ಸ್ಥಾನಕ್ಕೆ ವರ್ಗಾವಣೆ ಮಾಡಲಾಗಿದೆ. ಅಕ್ರಮವಾಗಿ ಅದಿರು ಸಾಗಣೆ ಮಾಡಿದ ಆರೋಪ ಪ್ರಕರಣದಲ್ಲಿ ಕಾರವಾರ ಕ್ಷೇತ್ರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಮತ್ತು ದೇಶದಾದ್ಯಂತ ಸಂಚಲನ ಮೂಡಿಸಿದ್ದ ಲೈಂಗಿಕ ಹಗರಣ ಆರೋಪ ಪ್ರಕರಣದಲ್ಲಿ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಶಿಕ್ಷೆ ವಿಧಿಸುವ ಮೂಲಕ ದೇಶದ ಗಮನ ಸೆಳೆಯುವ ತೀರ್ಪುಗಳನ್ನು ಅವರು ನೀಡಿದ್ದರು.

ಸಂತೋಷ ಗಜಾನನ ಭಟ್ ಅವರಿಂದ ತೆರವಾಗುತ್ತಿರುವ ಸ್ಥಾನಕ್ಕೆ ಮಂಡ್ಯ ಜಿಲ್ಲಾ 1ನೇ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸುತ್ತಿರುವ ಕೆ.ಬಿ.ಶಿವಪ್ರಸಾದ್ ಅವರನ್ನು ನೇಮಕ ಮಾಡಲಾಗಿದೆ.

ಅಂತೆಯೇ, ಹೈಕೋರ್ಟ್‌ನ ಹಾಲಿ ರಿಜಿಸ್ಟ್ರಾರ್ ಜನರಲ್ ಕೆ.ಎಸ್.ಭರತ್‌ಕುಮಾರ್ ಅವರನ್ನು ಬೆಂಗಳೂರು ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ಪ್ರಧಾನ ನ್ಯಾಯಾಧೀಶರನ್ನಾಗಿ ನಿಯೋಜಿಸಲಾಗಿದೆ. ಪ್ರತಿ ವರ್ಷ ಬೇಸಿಗೆ ರಜೆಗೂ ಮುನ್ನ ನಡೆಯುವ ಅಧೀನ ನ್ಯಾಯಾಲಯಗಳ ವರ್ಗಾವಣೆ ಪ್ರಕ್ರಿಯೆಯ ಭಾಗವಾಗಿ ಈ ವರ್ಗಾವಣೆ ನಡೆದಿದ್ದು, ವರ್ಗಾವಣೆ ಆದವರಲ್ಲಿ 115 ಜಿಲ್ಲಾ ನ್ಯಾಯಾಧೀಶರು, 115 ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು 139 ಸಿವಿಲ್ ನ್ಯಾಯಾಧೀಶರು ಇದ್ದಾರೆ. ಈ ವರ್ಗಾವಣೆ ಆದೇಶ ಜೂನ್ 1ರಿಂದ ಅನ್ವಯವಾಗಲಿದ್ದು, ಹೆಚ್ಚಿನ ವಿವರಗಳಿಗೆ ಹೈಕೋರ್ಟ್‌ನ ಅಧಿಕೃತ ವೆಬ್‌ಸೈಟ್ ಪರಿಶೀಲಿಸಬಹುದಾಗಿದೆ.

‘ಯೋಗೀಶ್‌ಗೌಡ ಕೊಲೆ ಪ್ರಕರಣ: ನಾನು ಯಾರಿಗೂ ಅನ್ಯಾಯ ಮಾಡಿಲ್ಲ’

ಶಾಸಕ ವಿನಯಗೆ ಶಿಕ್ಷೆ: ಇಂದು ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್ ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ, ಧಾರವಾಡ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಸೇರಿದಂತೆ 17 ಜನ ತಪ್ಪಿತಸ್ಥರ ಶಿಕ್ಷೆಯ ಪ್ರಮಾಣವನ್ನು ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಶುಕ್ರವಾರ (ಮಾರ್ಚ್ 17) ಪ್ರಕಟಿಸಲಿದೆ.


ವಿನಯ ಕುಲಕರ್ಣಿ

ಪ್ರಕರಣದಲ್ಲಿನ 17 ಆರೋಪಿಗಳನ್ನು ‘ಅಪರಾಧಿಗಳು’ ಎಂದು ಬುಧವಾರ ನಿರ್ಣಯಿಸಿದ್ದ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು, ಗುರುವಾರ ಶಿಕ್ಷೆಯ ಪ್ರಮಾಣ ನಿರ್ಧರಿಸುವ ಮುನ್ನ ಕಾನೂನಿನ ತತ್ವಗಳಿಗೆ ಅನುಗುಣವಾಗಿ ಗರಿಷ್ಠ ಶಿಕ್ಷೆಗೆ ವಿನಾಯ್ತಿ ಕೋರುವ ಅಪರಾಧಿಗಳ ಮನವಿ ಆಲಿಸಿದರು.

ಸಿಬಿಐ ಪರವಾಗಿ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿದ್ದ ಭಾರತದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ‘ಅಪರಾಧಿಗಳು ತಮಗಿರುವ ರಾಜಕೀಯ ಪ್ರಭಾವದಿಂದ ಪ್ರಕರಣದ ದಾರಿತಪ್ಪಿಸುವ ಕೆಲಸ ಮಾಡಿದ್ದರು. ಪೊಲೀಸರನ್ನು ಬಳಸಿಕೊಂಡು ಸಾಕ್ಷ್ಯ ನಾಶ ಮಾಡಿ, ಸಾಕ್ಷಿಗಳಿಗೆ ಬೆದರಿಸಲಾಗಿತ್ತು. ಅವರಿಗೆ ಹಣ ನೀಡಲಾಗಿತ್ತು. ಈ ಕೊಲೆ ತಕ್ಷಣಕ್ಕೆ ನಡೆದದ್ದಲ್ಲ. ಸಂಪೂರ್ಣ ಪೂರ್ವ ನಿಯೋಜಿತ, ನಿರ್ದಯಿ ಮತ್ತು ಭಾವವಿಹೀನವಾದ ಕ್ರೂರ ಕೊಲೆ. ಈ ಪ್ರಕರಣದಲ್ಲಿ ಪ್ರಾಸಿಕ್ಯೂಟರ್ ಅವರನ್ನು ಹೆದರಿಸುವ ಕೆಲಸವೂ ನಡೆದಿತ್ತು. ಹೀಗಾಗಿ, ಅಪರಾಧಿಗಳಿಗೆ ಜೀವಿತಾವಧಿ ಶಿಕ್ಷೆ ನೀಡುವಂತೆ ಆದೇಶಿಸಬೇಕು’ ಎಂದರು.

ವಿನಯ ಕುಲಕರ್ಣಿ ಪರ ವಾದ ಮಂಡಿಸಬೇಕಿದ್ದ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್ ಗೈರಾಗಿದ್ದ ಕಾರಣ ಮತ್ತೊಬ್ಬ ಪದಾಂಕಿತ ಹಿರಿಯ ವಕೀಲರಾದ ಎಂ.ಎಸ್.ಶ್ಯಾಮಸುಂದರ್ ಅವರು, ‘ವಿನಯ ಕುಲಕರ್ಣಿ ಜನರಿಂದ ಆಯ್ಕೆಯಾಗಿದ್ದಾರೆ. ಯಾವುದೇ ವ್ಯಕ್ತಿ ಸುಧಾರಣೆ ಹೊಂದಲು 14 ವರ್ಷ ಸಾಕು. ಅಷ್ಟು ವರ್ಷಗಳಲ್ಲಿ ಒಬ್ಬ ವ್ಯಕ್ತಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಬಲಿಷ್ಠವಾಗಿ ಉಳಿದಿರಲು ಸಾಧ್ಯವಿಲ್ಲ. ಹೀಗಾಗಿ, ಸಾಧ್ಯವಾದಷ್ಟು ಕಡಿಮೆ ಪ್ರಮಾಣದ ಶಿಕ್ಷೆ ನೀಡಬೇಕು’ ಎಂದು ಸುಪ್ರೀಂ ಕೋರ್ಟ್‌ನ ಹಲವು ಪೂರ್ವ ನಿದರ್ಶನಗಳನ್ನು ಉಲ್ಲೇಖಿಸಿದರು.

‘ನೀವು ಏನನ್ನಾದರೂ ಹೇಳುವುದಿದೆಯೇ’ ಎಂಬ ನ್ಯಾಯಾಧೀಶರ ಪ್ರಶ್ನೆಗೆ ವಿನಯ ಕುಲಕರ್ಣಿ, ‘ನಾನು ಯಾರಿಗೂ ಅನ್ಯಾಯ ಮಾಡಿಲ್ಲ. ನನ್ನ ಮೇಲಿನ ರಾಜಕೀಯ ದ್ವೇಷದಿಂದ ಈ ಆರೋಪ ಹೊರಿಸಲಾಗಿತ್ತು. ಈಗ ನನ್ನ ಕ್ಷೇತ್ರದ ಜನಕ್ಕೆ ಅನ್ಯಾಯ ಆಗಿದೆ’ ಎಂದರು. ಅಂತಿಮವಾಗಿ ಎಲ್ಲ ಅಪರಾಧಿಗಳ ವೈಯಕ್ತಿಕ ಅಳಲು ಆಲಿಸಿದ ನ್ಯಾಯಾಧೀಶರು ಶಿಕ್ಷೆಯ ಪ್ರಮಾಣವನ್ನು ಶುಕ್ರವಾರ ಪ್ರಕಟಿಸುವುದಾಗಿ ತಿಳಿಸಿದರು.

‘ಜೀವಾವಧಿ ಶಿಕ್ಷೆಯಾಗಲಿ’

ಹುಬ್ಬಳ್ಳಿ: ‘ನನ್ನ ಸಹೋದರ ಯೋಗೇಶಗೌಡ ಗೌಡರ್‌ಗೆ ಕೊನೆಗೂ ನ್ಯಾಯ ಸಿಕ್ಕಿದೆ. ಆತನ ಹತ್ಯೆ ಮಾಡಿದ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಬೇಕು’ ಎಂದು ಯೋಗೇಶಗೌಡ ಗೌಡರ್ ಅವರ ಸಹೋದರಿ ಅಕ್ಕಮಹಾದೇವಿ ಗೌಡರ್ ಒತ್ತಾಯಿಸಿದರು.

‘ಸಹೋದರನನ್ನು ಮೋಸ ದಿಂದ ಕೊಲೆ ಮಾಡಿದರು. ಕೊಲೆ ಮಾಡಿಸಿದ ವ್ಯಕ್ತಿ ಅಧಿಕಾರದ ದರ್ಪದಲ್ಲಿದ್ದ. ದೇವರು ಹಾಗೂ ಕಾನೂನು ನಮ್ಮ ಕೈ ಹಿಡಿದಿದೆ. ನ್ಯಾಯ ಸಿಕ್ಕಿದ್ದರಿಂದ ಖುಷಿಯಾಗಿದೆ’ ಎಂದು ತಿಳಿಸಿದರು.

12 ಜಿಲ್ಲೆಗಳಲ್ಲಿ ಬಲಗೈ ಒಕ್ಕೂಟದಿಂದಲೇ ಗಣತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಲಗೈ ಸಮುದಾಯದಲ್ಲಿ ಎಷ್ಟು ಜನರಿದ್ದಾರೆ ಎಂಬುದನ್ನು ಕಂಡುಕೊಳ್ಳಲು 12 ಜಿಲ್ಲೆಗಳನ್ನಷ್ಟೇ ಆಯ್ಕೆ ಮಾಡಿಕೊಂಡು ನಾವೇ ಗಣತಿ ಮಾಡುವ ಇರಾದೆ ಇದೆ’ ಎಂದು ನಿವೃತ್ತ ಐಎಎಸ್ ಅಧಿಕಾರಿ ಸಿದ್ದಯ್ಯ ಹೇಳಿದರು.

ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟವು ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಒಳಮೀಸಲಾತಿ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ‘ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಬಲಗೈ ಒಕ್ಕೂಟದಿಂದಲೇ ಜನಗಣತಿ ಮಾಡಬೇಕು ಎಂಬ ಕನಸಿದ್ದರೂ ನಮಗೆ ಆರ್ಥಿಕ ಬೆಂಬಲವಿಲ್ಲ. ಹಾಗಾಗಿ, ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆಗಳನ್ನಷ್ಟನ್ನೇ ಆಯ್ಕೆ ಮಾಡಿಕೊಳ್ಳಲು ಚಿಂತನೆ ನಡೆಸಿದ್ದೇವೆ’ ಎಂದರು.

2011ರ ಜನಗಣತಿಯಲ್ಲಿ ಬಲಗೈ ಸಮುದಾಯದ ಜನಸಂಖ್ಯೆಯು ಸುಮಾರು 31 ಲಕ್ಷ ಇತ್ತು. 14 ವರ್ಷಗಳ ನಂತರ ಎಲ್ಲ ಸಮುದಾಯಗಳ ಜನಸಂಖ್ಯೆ ಹೆಚ್ಚಾಯಿತು. ಆದರೆ, ಬಲಗೈ ಸಮುದಾಯದ ಜನಸಂಖ್ಯೆ 30 ಲಕ್ಷ ಎಂದು ನ್ಯಾ. ನಾಗಮೋಹನದಾಸ್ ಆಯೋಗದ ವರದಿಯಲ್ಲಿದೆ. ಇದು ಹೇಗೆ ಸಾಧ್ಯ ಎಂದು ಅವರು ಪ್ರಶ್ನಿಸಿದರು.

ಕಳೆದ ತಿಂಗಳು ಬೃಹತ್ ಸಮಾವೇಶ ಮಾಡಿದ ಬಳಿಕ ಒಳಮೀಸಲಾತಿ ಜಾರಿಯಾಗುವುದು ಸದ್ಯಕ್ಕೆ ನಿಂತಿದೆ. ಆದರೆ, ಇಷ್ಟಕ್ಕೆ ಸಮಾಧಾನ ಪಡುವಂತಿಲ್ಲ. ಶೇ 50ರಷ್ಟು ಜನರನ್ನಷ್ಟೇ ಸಮೀಕ್ಷೆ ಮಾಡಿರುವ ಆಯೋಗದ ವರದಿಯನ್ನು ತಿರಸ್ಕರಿಸುವವರೆಗೆ ಹೋರಾಟ ನಡೆಸಬೇಕು ಎಂದು ಹೇಳಿದರು.

ಒಂದು ಕುಟುಂಬದಲ್ಲಿ ಸರಾಸರಿ ಐದು ಜನ ಇರುತ್ತಾರೆ ಎಂದು ಅಂಕಿ ಅಂಶ ಹೇಳುತ್ತದೆ. ಆದರೆ, ಬಲಗೈ ಸಮುದಾಯದಲ್ಲಿ ಸರಾಸರಿ 2.5 ಎಂದು ನಾಗಮೋಹನದಾಸ್ ಆಯೋಗದ ವರದಿಯಲ್ಲಿದೆ. ಬಲಗೈ ಸಮುದಾಯದೊಳಗೆ ಬರುವ ಅನೇಕ ಜಾತಿಗಳನ್ನು ಬೇರೆ ಸಮುದಾಯಗಳೊಂದಿಗೆ ತೋರಿಸಲಾಗಿದೆ. ಇದು ಬಲಗೈ ಸಮುದಾಯದ ಸಂಖ್ಯೆಯನ್ನು ಕಡಿಮೆ ಮಾಡುವ ಹುನ್ನಾರ ಎಂದು ಆರೋಪಿಸಿದರು.

ಬಲಗೈಯವರನ್ನೆಲ್ಲ ಒಂದೇ ಕಡೆ ಸೇರಿಸಬೇಕು. ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಎಂದು ಗುರುತಿಸಿಕೊಂಡವರ ಮೂಲ ಜಾತಿ ಪತ್ತೆ ಹಚ್ಚಿ, ಅದರಲ್ಲಿ ಎಡಗೈ ಯಾರು, ಬಲಗೈ ಯಾರು ಎಂಬುದನ್ನು ಗುರುತಿಸಿ ಆಯಾ ಗುಂಪಿಗೆ ಸೇರಿಸಬೇಕು. ಈ ಬಾರಿ ಕೇಂದ್ರ ಸರ್ಕಾರ ನಡೆಸುವ ಜನಗಣತಿ ಮತ್ತು ಜಾತಿ ಗಣತಿಯ ಸಂದರ್ಭದಲ್ಲಿ ಎಲ್ಲರೂ ಪಾಲ್ಗೊಂಡು ನೈಜ ಜಾತಿ ನಮೂದಿಸಬೇಕು ಎಂದು ಸಲಹೆ ನೀಡಿದರು.

ಉರಿಲಿಂಗಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ, ಮೈಸೂರಿನ ಜ್ಞಾನ ಸ್ವರೂಪ ಸ್ವಾಮೀಜಿ, ಸಮುದಾಯದ ಮುಖಂಡರಾದ ಡಿ.ಜಿ. ಸಾಗರ್, ಚಂದ್ರಶೇಖರಯ್ಯ ಉಪಸ್ಥಿತರಿದ್ದರು.

ತಂಗಾಳಿ ಬೀಸುತಾ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ದಿನೇದಿನೇ ಬಿಸಿಲಿನ ತಾಪ ಹೆಚ್ಚುತ್ತಿರುವುದರಿಂದ ಕಲಬುರಗಿಯ ಸೂಪರ್ ಮಾರುಕಟ್ಟೆಯ ಅಂಗಡಿಯೊಂದರ ಬಳಿ ಗುರುವಾರ ಕಾರ್ಮಿಕರೊಬ್ಬರು ಏರ್ ಕೂಲರ್‌ಗಳನ್ನು ಮಾರಾಟಕ್ಕೆ ಜೋಡಿಸಿದರು

ಲೋಕಾಯುಕ್ತಕ್ಕೆ 40: ವಿಶೇಷ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಾಯುಕ್ತಕ್ಕೆ ಇದೇ ಜನವರಿಯಲ್ಲಿ 40 ವರ್ಷ ತುಂಬಿದ್ದು, ಅದರ ಅಂಗವಾಗಿ ‘ಕರ್ನಾಟಕ ಲೋಕಾಯುಕ್ತದ ನಾಲ್ಕು ದಶಕಗಳ ಪಯಣ’ ಕಾರ್ಯಕ್ರಮ ನಡೆಯಲಿದೆ.

ಇದೇ ಶನಿವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಮುಖ್ಯ ಕಾರ್ಯಕ್ರಮದ ನಂತರ ‘ಭ್ರಷ್ಟಾಚಾರ ಮತ್ತು ದುರಾಡಳಿತ ತಡೆ’, ‘ಲೋಕಾಯುಕ್ತ ಕಾಯ್ದೆ ಅಡಿ ಕುಂದುಕೊರತೆ ಪರಿಹಾರ’ ಮತ್ತು ‘ಭ್ರಷ್ಟಾಚಾರ ತಡೆಯುವುದು ಹೇಗೆ’ ಕುರಿತ ಉಪನ್ಯಾಸ ಏರ್ಪಡಿಸಲಾಗಿದೆ.

1.51 ಲಕ್ಷ ಪ್ರಕರಣ ವಿಲೇವಾರಿ: 1986ರ ಜ.15ರಂದು ಕರ್ನಾಟಕ ಲೋಕಾಯುಕ್ತ ರಚನೆ ಆಯಿತು. ಅಲ್ಲಿಂದ ಈವರೆಗೆ ಲೋಕಾಯುಕ್ತದಲ್ಲಿ ಒಟ್ಟು 1,75,126 ಪ್ರಕರಣಗಳು ದಾಖಲಾಗಿವೆ. ಈ ಅವಧಿಯಲ್ಲಿ ಲೋಕಾಯುಕ್ತವು 1,51,233 ಪ್ರಕರಣಗಳನ್ನು ವಿಲೇವಾರಿ ಮಾಡಿದೆ. 23,893 ಪ್ರಕರಣಗಳು ವಿಚಾರಣೆಯ ವಿವಿಧ ಹಂತಗಳಲ್ಲಿ ಇವೆ.

ಜನಪ್ರತಿನಿಧಿಗಳ ಆಸ್ತಿ ವಿವರಕ್ಕೆ ಪೋರ್ಟಲ್

ರಾಜ್ಯದ ಚುನಾಯಿತ ಜನಪ್ರತಿನಿಧಿಗಳ ಆಸ್ತಿ ವಿವರ ಇರುವ ಪೋರ್ಟಲ್ ಅನ್ನು ಕಾರ್ಯಕ್ರಮದಲ್ಲಿ ಅನಾವರಣ ಮಾಡಲಾಗುತ್ತದೆ.

ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರ ಸ್ಥಿರಾಸ್ತಿ ಮತ್ತು ಚರಾಸ್ತಿ ವಿವರ, ಅವರ ಸಾಲ ಮತ್ತು ಹೊಣೆಗಾರಿಕೆಗಳ ವಿವರ ಪೋರ್ಟಲ್‌ನಲ್ಲಿ ಇರಲಿದೆ. ಸಾರ್ವಜನಿಕರು ತಮ್ಮ ಶಾಸಕರ ವಿವರಗಳನ್ನು ಬೆರಳತುದಿಯಲ್ಲಿ ಪರಿಶೀಲಿಸಬಹುದಾಗಿದೆ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ತಡೆಗೆ ಸರ್ಕಾರದ ಕ್ರಮ

‘ರೋಹಿತ್ ವೇಮುಲ’ ಮಸೂದೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರ ಹಿಂದುಳಿದ ವರ್ಗಗಳು ಹಾಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ ಮತ್ತು ಶಿಕ್ಷಣದ ಹಕ್ಕು ಕಲ್ಪಿಸುವ ಉದ್ದೇಶದಿಂದ ರೂಪಿಸಿರುವ ‘ಕರ್ನಾಟಕ ರೋಹಿತ್ ವೇಮುಲ’ ಮಸೂದೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ತಡೆಯಲು ‘ಕರ್ನಾಟಕ ರೋಹಿತ್ ವೇಮುಲ’ (ಬಹಿಷ್ಕಾರ ಅಥವಾ ಅನ್ಯಾಯ ತಡೆಗಟ್ಟುವಿಕೆ) (ಶಿಕ್ಷಣ ಮತ್ತು ಘನತೆಯ ಹಕ್ಕು) ಮಸೂದೆಯನ್ನು ಸರ್ಕಾರ ರೂಪಿಸಿದೆ.

‘ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಯಾರೊಬ್ಬರೂ ಜಾತಿ ಆಧಾರದಲ್ಲಿ ತಾರತಮ್ಯ ಎದುರಿಸಬಾರದು. ಇದನ್ನು ಖಾತ್ರಿಪಡಿಸಲು ‘ರೋಹಿತ್ ವೇಮುಲ ಕಾಯ್ದೆ’ ಹೆಸರಿನ ಕಾನೂನು ಕರ್ನಾಟಕದಲ್ಲೂ ರೂಪಿಸಿ, ಜಾರಿಗೊಳಿಸಬೇಕು’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಹಿಂದೆ ಪತ್ರ ಬರೆದು ಆಗ್ರಹಿಸಿದ್ದರು.


ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ನಂತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವರ್ಗಗಳು, ಜಾತಿಗಳು, ಮತಗಳು, ಲಿಂಗ, ದೇಶ ಎಂಬ ತಾರತಮ್ಯ ಇಲ್ಲದೆ ಮುಕ್ತ ವಾತಾವರಣ ಇರಲಿದೆ. ಈ ಸಂಸ್ಥೆಗಳಲ್ಲಿನ ಪ್ರವೇಶವು ಜಾತಿ, ವರ್ಗ, ಮತ, ಲಿಂಗ ಅಥವಾ ದೇಶ ಎಂಬ ಭೇದ ಇಲ್ಲದೆ ಎಲ್ಲರಿಗೂ ಮುಕ್ತವಾಗಿರುತ್ತದೆ. ಅರ್ಹತಾ ಪರೀಕ್ಷೆಗಳಲ್ಲಿನ ಅಂಕಗಳ ಆಧಾರದಲ್ಲಿ ಪ್ರವೇಶಾತಿ ಸಿಗಲಿದೆ. ನಿಯಮವನ್ನು ಉಲ್ಲಂಘಿಸಿದ ವ್ಯಕ್ತಿಗಳಿಗೆ ಒಂದು ವರ್ಷ ಜೈಲು ಶಿಕ್ಷೆ, ₹10 ಸಾವಿರ ದಂಡ ವಿಧಿಸಲು ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಂತ್ರಸ್ತನಿಗೆ ಆರೋಪಿಯು ಸೂಕ್ತ ಪರಿಹಾರ ನೀಡುವಂತೆ ನ್ಯಾಯಾಲಯ ಅನುಮತಿಸಲು ಕೂಡ ಅವಕಾಶ ಸಿಗಲಿದೆ. ಆ ಮೊತ್ತವು ಗರಿಷ್ಠ ₹1 ಲಕ್ಷದವರೆಗೆ ಮತ್ತು ಅದಕ್ಕೆ ಹೆಚ್ಚುವರಿಯಾಗಿ ಬಡ್ಡಿಯೂ ಇರಲಿದೆ. ಈ ಹಿಂದೆ ಅಪರಾಧ ಎಸಗಿದ ಕಾರಣಕ್ಕೆ ಶಿಕ್ಷೆಗೊಳಗಾದವರು ಮತ್ತೆ ಈ ಕಾಯ್ದೆಯಡಿ ಶಿಕ್ಷೆಗೆ ಒಳಗಾದರೆ, ಅಂಥವರಿಗೆ ಕನಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಲು ಮತ್ತು ₹ 1 ಲಕ್ಷ ದಂಡ ವಿಧಿಸಬೇಕೆಂಬ ಪ್ರಸ್ತಾವವೂ ಈ ಮಸೂದೆಯಲ್ಲಿದೆ.

ಈ ಕಾಯ್ದೆಯಡಿ ಎಸಗುವ ಪ್ರತಿಯೊಂದು ಅಪರಾಧವು ಸಂಜ್ಞೇಯ ಮತ್ತು ಜಾಮೀನು ರಹಿತ ಎಂದು ಪರಿಗಣಿಸಲಾಗುವುದು. ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸುವ ಸಂಸ್ಥೆಗೆ ರಾಜ್ಯ ಸರ್ಕಾರವು ಯಾವುದೇ ಆರ್ಥಿಕ ನೆರವು ಅಥವಾ ಅನುದಾನ ನೀಡಬಾರದು. ಅಪರಾಧ ಎಸಗುವ ಪ್ರತಿಯೊಬ್ಬ ವ್ಯಕ್ತಿ ಮತ್ತು ಕೃತ್ಯ ಎಸಗಲು ಇನ್ನೊಬ್ಬರಿಗೆ ಸಹಾಯ ಮಾಡುವ ಅಥವಾ ಪ್ರಚೋದಿಸುವ ವ್ಯಕ್ತಿ ಕೂಡ ಅಪರಾಧದಲ್ಲಿ ಭಾಗವಹಿಸಿದ್ದಾರೆಂದು ಪರಿಗಣಿಸಲಾಗುತ್ತದೆ ಎಂದು ಮಸೂದೆ ಪ್ರಸ್ತಾಪಿಸಿದೆ.

ಸಲೀಂ ಸೇವಾವಧಿ ವಿಸ್ತರಣೆ

ಬೆಂಗಳೂರು: ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಎಂ.ಎ.ಸಲೀಂ ಅವರ ಸೇವಾವಧಿಯನ್ನು 2027ರ ಆಗಸ್ಟ್ 29ರ ವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.


ಎಂ.ಎ. ಸಲೀಂ

2025ರ ಮೇ 21ರಂದು ಪ್ರಭಾರ ಡಿಜಿ–ಐಜಿಪಿಯಾಗಿ ಸಲೀಂ ಅಧಿಕಾರ ಸ್ವೀಕರಿಸಿದ್ದರು. ಅದೇ ವರ್ಷದ ಆಗಸ್ಟ್‌ನಲ್ಲಿ ಅವರನ್ನು ಪೂರ್ಣಾವಧಿ ಡಿಜಿಪಿಯಾಗಿ ನೇಮಕ ಮಾಡಲಾಗಿತ್ತು. 1993ನೇ ಬ್ಯಾಚ್ ಐಪಿಎಸ್ ಅಧಿಕಾರಿಯಾದ ಸಲೀಂ ಮುಂದಿನ ಜೂನ್‌ನಲ್ಲಿ ನಿವೃತ್ತರಾಗಬೇಕಿತ್ತು. ಅವರ ಕರ್ತವ್ಯದ ಅವಧಿಯನ್ನು 14 ತಿಂಗಳು ವಿಸ್ತರಣೆ ಮಾಡಲಾಗಿದೆ.

ಒಳಮೀಸಲಾತಿ: ಇದೇ 24ಕ್ಕೆ ವಿಶೇಷ ಸಂಪುಟ ಸಭೆ

ಬೆಂಗಳೂರು: ಪರಿಶಿಷ್ಟ ಜಾತಿಯೊಳಗೆ ಒಳಮೀಸಲಾತಿ ಕಲ್ಪಿಸುವ ಉದ್ದೇಶಕ್ಕಾಗಿ ಇದೇ 24ರಂದು ವಿಶೇಷ ಸಚಿವ ಸಂಪುಟ ಸಭೆ ನಿಗದಿಯಾಗಿದೆ. ಈ ವಿಷಯವಾಗಿ ಚರ್ಚಿಸಲು ಈ ಹಿಂದೆ ವಿಶೇಷ ಸಂಪುಟ ಸಭೆ ಕರೆಯಲಾಗಿತ್ತು. ಆದರೆ, ಅದೇ ವೇಳೆ ಎರಡು ಕ್ಷೇತ್ರಗಳ ಉಪ ಚುನಾವಣೆ ಘೋಷಣೆಯಾಗಿದ್ದರಿಂದ ವಿಶೇಷ ಸಂಪುಟ ಸಭೆಯನ್ನು ಮುಂದೂಡಲಾಗಿತ್ತು. ಮುಂದಿನ ವಾರ ನಡೆಯಲಿರುವ ಸಭೆಯಲ್ಲಿ ಒಳ ಮೀಸಲಾತಿ ಕುರಿತು ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಗುರುವಾರ (ಏ.16) ನಡೆದ ಸಚಿವ ಸಂಪುಟ ಸಭೆಯಲ್ಲಿ ಪರಿಶಿಷ್ಟ ಜಾತಿಯನ್ನು ಪ್ರತಿನಿಧಿಸುವ ಸಚಿವರು ಈ ವಿಷಯ ಪ್ರಸ್ತಾಪಿಸಿದರು. ಹೀಗಾಗಿ ವಿಶೇಷ ಸಂಪುಟ ಸಭೆ ನಡೆಸಲು ನಿರ್ಧರಿಸಲಾಯಿತು ಎಂದು ಸರ್ಕಾರದ ಮೂಲಗಳು ಹೇಳಿವೆ.

ಇ-ಖಾತಾ ...ಲಭ್ಯ

ಯಾವುದೇ ಪ್ರಮುಖ ಸಮಸ್ಯೆಗಳಿಲ್ಲದೆ ಸುಗಮವಾಗಿ ನಡೆಯುತ್ತಿದೆ. ಪ್ರತಿದಿನ 1,000ಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಸರಾಸರಿ ಪ್ರತಿ 30 ಸೆಕೆಂಡಿಗೆ ಒಂದು ಇ-ಖಾತಾ ವಿತರಿಸಲಾಗುತ್ತಿದೆ ಎಂದರು.

'ಖಾತಾ ತಿದ್ದುಪಡಿ ಪ್ರಕ್ರಿಯೆಯಲ್ಲಿ ಕೆಲವು ಸವಾಲುಗಳು ಗಮನಕ್ಕೆ ಬಂದಿದ್ದು, ಇದನ್ನು ಸರಿಪಡಿಸಲು 'ಡಿಜಿಟಲ್ ಆಡಿಟ್' ತಂಡವನ್ನು ರಚಿಸಲಾಗಿದೆ. ಈ ತಂಡವು ತಿರಸ್ಕೃತ ಅರ್ಜಿಗಳನ್ನು ಪರಿಶೀಲಿಸುತ್ತಿದ್ದು, ಮರುಪರಿಶೀಲಿಸಿ ಮಂಜೂರು ಮಾಡಲಾಗುತ್ತಿದೆ' ಎಂದು ಹೇಳಿದರು.

'ಮ್ಯೂಟೇಷನ್ ಪ್ರಕ್ರಿಯೆಯಲ್ಲಿ ವಿಳಂಬವನ್ನು ಕಡಿಮೆ ಮಾಡಲು ಸ್ವಯಂಚಾಲಿತ ಮ್ಯೂಟೇಷನ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಉಪ-ನೋಂದಣಾಧಿಕಾರಿ ಕಚೇರಿಯಲ್ಲಿ ನಡೆದ ವಹಿವಾಟು ಈಗ ಸ್ವಯಂಚಾಲಿತವಾಗಿ ಮ್ಯೂಟೇಷನ್ ಆಗಲಿವೆ. ನೋಟಿಸ್ ಅವಧಿ ಪೂರ್ಣಗೊಂಡ ನಂತರ ಮ್ಯೂಟೇಷನ್ ಪೂರ್ಣಗೊಳ್ಳುತ್ತದೆ ಮತ್ತು ಏಳನೇ ದಿನದ ಬಳಿಕ ನಾಗರಿಕರಿಗೆ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗುತ್ತದೆ' ಎಂದು ಹೇಳಿದರು.

ಪೌತಿ (ವಾರಸುದಾರರ) ಪ್ರಕರಣಗಳಲ್ಲಿಯೂ ವಿಳಂಬವನ್ನು ತಪ್ಪಿಸಲು ಸ್ವಯಂ ಮ್ಯೂಟೇಷನ್ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ ಎಂದರು.

...ತಿದಾರ

...ುನೀಶ್ ಮೌದ್ಗಿಲ್

...ಕ್ಕೂ ಕಡಿಮೆ

...ಸ್ವಯಂ ಗಣತಿಗೆ ಅವಕಾಶ ಕಲ್ಪಿಸ ...ಮಿ ಮಂದಿ ಸ್ವಯಂ ಗಣತಿಯಲ್ಲಿ ...-ಮನೆಗಳಿಗೆ ಭೇಟಿ ನೀಡಲಿದ್ದಾರೆ. ಪ್ರತಿ ...ದಲ್ಲಿ ಪಾಲ್ಗೊಳ್ಳುವುದು ಶಾಸನಬದ್ಧ ... 1948 ಅನ್ವಯ ಕಡ್ಡಾಯವಾಗಿ ...ವಿರುದ್ಧ ಕಾಯ್ದೆಯ ಅನುಸಾರ ...ಂದು ಮುನೀಶ್ ಮೌದ್ಗಿಲ್

ಮನೆಗೆ ಪುನಃ ಬಂದು ಗಣತಿ ಕಾರ್ಯ ನಡೆಸಲಾಗುತ್ತದೆ ಎಂದು ಹೇಳಿದರು.

ಹೆಚ್ಚುವರಿ ಅವಧಿ: ಗಣತಿದಾರರು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಮನೆ-ಮನೆಗೆ ಭೇಟಿ ನೀಡಿ ಮನೆ ಗಣತಿ ಕಾರ್ಯ ನಡೆಸಲಿದ್ದಾರೆ. ಒಂದು ವಾರದ ನಂತರ ಮುಂಜಾನೆ 6ರಿಂದ ಬೆಳಿಗ್ಗೆ 10 ಹಾಗೂ ಸಂಜೆ 6 ರಿಂದ ರಾತ್ರಿ 9ರವರೆಗೆ ಗಣತಿ ಕಾರ್ಯ ನಡೆಸಲಾಗುತ್ತದೆ. ನಾಗರಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

...: ಕಟ್ಟುನಿಟ್ಟಿನ ...ಯ

...ಜಾರಿಯಲ್ಲಿನ ವಿಳಂಬವನ್ನು ಈ ಆದೇಶ ನಿವಾರಿಸುತ್ತದೆ ಎಂದು ಸಂಘಟನೆಯ ಅಧ್ಯಕ್ಷೆ ಚಂದ್ರಕುಮಾರಿ ಹಾಗೂ ಪ್ರಧಾನ ಕಾರ್ಯದರ್ಶಿ ...ದೇವಿ ಪ್ರತಿಪಾದಿಸಿದ್ದಾರೆ.

ಮಹಿಳೆ ಮತ್ತು ಪುರುಷರು ಸಮಾನರೆಂದು ಕಾನೂನು ಇದ್ದರೂ ಕೆಲವು ಜೈವಿಕ ಅಂಶಗಳು ಅವರನ್ನು ಪರಸ್ಪರ ಪ್ರತ್ಯೇಕಿಸುತ್ತವೆ. ಮುಟ್ಟಿನ ರಜೆ ನ್ಯಾಯಯುತವಾಗಿದ್ದು, ಮಹಿಳೆಯೊಬ್ಬರು ಎದುರಿಸುವ ಸಮಸ್ಯೆಗಳನ್ನು ಹೈಕೋರ್ಟ್ ಪರಿಗಣಿಸಿದೆ. ನ್ಯಾಯಾಲಯದ ಆದೇಶದಂತೆ, ಸರ್ಕಾರವು ಮುಟ್ಟಿನ ರಜೆಯನ್ನು ತಕ್ಷಣವೇ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಆಗ್ರಹಿಸಿದೆ.

ಲೆಬನಾನ್– ಇಸ್ರೇಲ್ ನಡುವೆ ಕದನ ವಿರಾಮ

ವಾಷಿಂಗ್ಟನ್(ಎಎಫ್‌ಪಿ): 'ಇಸ್ರೇಲ್ ಹಾಗೂ ಲೆಬನಾನ್ ನಡುವೆ ಐತಿಹಾಸಿಕ 10 ದಿನಗಳ ಕಾಲ ಕದನ ವಿರಾಮ ಏರ್ಪಟ್ಟಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ರಾತ್ರಿ ಘೋಷಿಸಿದ್ದಾರೆ. ಇದು ತಾನು ನಿಲ್ಲಿಸಿದ 10ನೇ ಯುದ್ಧವಾಗಿದೆ ಎಂದು ಈ ವೇಳೆ ತಿಳಿಸಿದ್ದಾರೆ.

ಶ್ವೇತಭವನದಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಲೆಬನಾನ್‌ನ ಕದನ ವಿರಾಮವು ಹಿಜ್ಬುಲ್ಲಾ ಬಂಡುಕೋರರನ್ನು ಒಳಗೊಂಡಿದೆ ಎಂದು ಸ್ಪಷ್ಟಪಡಿಸಿದ್ದಾರೆ.

'ಮುಂದಿನ ವಾರದಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹಾಗೂ ಲೆಬನಾನ್‌ನ ಅಧ್ಯಕ್ಷ ಜೋಸೆಫ್ ಔನ್ ಅವರು ಭೇಟಿಯಾಗಿ ಒಪ್ಪಂದಕ್ಕೆ ಸಹಿ ಹಾಕಲಿದ್ದಾರೆ. ಸೂಕ್ತ ಸಮಯದಲ್ಲಿ ನಾನು ಕೂಡ ಲೆಬನಾನ್‌ಗೆ ಭೇಟಿ ನೀಡಲಿದ್ದೇನೆ' ಎಂದು ಟ್ರಂಪ್ ತಿಳಿಸಿದ್ದಾರೆ.

ದಶಕಗಳ ನಂತರ ಇಸ್ರೇಲ್ ಹಾಗೂ ಲೆಬನಾನ್‌ನ ರಾಜತಾಂತ್ರಿಕ ಅಧಿಕಾರಿಗಳು ಮಂಗಳವಾರ ವಾಷಿಂಗ್ಟನ್‌ನಲ್ಲಿ ಸಭೆ ಸೇರಿ ನಡೆಸಿದ್ದರು. ಇದರ ಬೆನ್ನಲ್ಲೇ, ಕದನ ವಿರಾಮ ಜಾರಿಯಾಗಿದೆ.

ದಕ್ಷಿಣ ಲೆಬನಾನ್‌ನಿಂದ ಅಂತರ ರಾಷ್ಟ್ರೀಯ ಗಡಿಗೆ ಇಸ್ರೇಲ್ ಸೇನೆ ಹಿಂತಿರುಗಬೇಕು ಎಂದು ಹಿಜ್ಬುಲ್ಲಾ ಪಟ್ಟುಹಿಡಿದಿದ್ದರೆ, ಸೇನೆಯು ಹಿಂದಕ್ಕೆ ಕರೆಸಿಕೊಳ್ಳುವುದಿಲ್ಲ ಎಂದು ನೆತನ್ಯಾಹು ಸ್ಪಷ್ಟಪಡಿಸಿದ್ದಾರೆ.

ತಮಿಳು ನೆಲದಲ್ಲಿ ಕನ್ನಡಿಗ ನಿರ್ಣಾಯಕ!

ಗಡಿ ಭಾಗದಲ್ಲಿ ಚುನಾವಣೆ ಕಾವು

• ಥಳೀ ಕ್ಷೇತ್ರದಲ್ಲಿ ಒಕ್ಕಲಿಗರ ಪ್ರಾಬಲ್ಯ

• ಎಸ್.ಮಹೇಶ್ ಕುಮಾರ

ಆನೇಕಲ್: ನೆರೆಯ ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆ ರಂಗೇರುತ್ತಿದ್ದು, ಗಡಿ ಭಾಗವಾದ ಆನೇಕಲ್ ತಾಲ್ಲೂಕಿನಲ್ಲಿಯೂ ಚುನಾವಣಾ ಕಾವು ಕಾಣಿಸುತ್ತಿದೆ.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಥಳೀ ಹಾಗೂ ಹೊಸೂರು ವಿಧಾನಸಭಾ ಕ್ಷೇತ್ರಗಳು ಆನೇಕಲ್ ತಾಲ್ಲೂಕಿನೊಂದಿಗೆ ಗಡಿ ಹಂಚಿಕೊಂಡಿವೆ. ಈ ಎರಡೂ ಕ್ಷೇತ್ರಗಳಲ್ಲಿ ಕನ್ನಡಿಗ ಮತದಾರರು ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ಯಾವುದೇ ಹಳ್ಳಿಗೆ ಹೋದರೂ ಕನ್ನಡಿಗರು ಎದುರಾಗುತ್ತಾರೆ. ಕಣದಲ್ಲಿರುವ ಹೆಚ್ಚಿನ ಅಭ್ಯರ್ಥಿಗಳಿಗೂ ಕನ್ನಡ ಚೆನ್ನಾಗಿ ಗೊತ್ತು.

ವಾಣಿಜ್ಯ, ದೈನಂದಿನ ವ್ಯಾಪಾರ, ವಹಿವಾಟು, ಶಿಕ್ಷಣ, ವೈದ್ಯಕೀಯ ಹಾಗೂ ವೈವಾಹಿಕ ಸಂಬಂಧ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಥಳೀ ಹಾಗೂ ಹೊಸೂರು ಕ್ಷೇತ್ರಗಳು ಆನೇಕಲ್ ತಾಲ್ಲೂಕಿನೊಂದಿಗೆ ಸುದೀರ್ಘ ಒಡನಾಟ ಹೊಂದಿವೆ. ಅಲ್ಲಿಯ ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳು ಇಲ್ಲಿಯವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ.

ಥಳೀ ವಿಧಾನಸಭಾ ಕ್ಷೇತ್ರ ಭೌಗೋಳಿಕವಾಗಿ ಆನೇಕಲ್ ಹಾಗೂ ಬೆಂಗಳೂರು ದಕ್ಷಿಣ(ರಾಮನಗರ) ಜಿಲ್ಲೆಯ ಕನಕಪುರ ತಾಲ್ಲೂಕಿನೊಂದಿಗೆ ಗಡಿ ಹಂಚಿಕೊಂಡಿದೆ. ಸೋಲೂರು ದಾಟಿದರೆ ಥಳೀ ಕ್ಷೇತ್ರದ ವ್ಯಾಪ್ತಿ ಶುರುವಾಗುತ್ತದೆ. ಇಲ್ಲಿರುವ ಒಕ್ಕಲಿಗರು, ಕುರುಬರು, ಲಿಂಗಾಯತರು, ಬಲಿಜಿಗರು ಮತ್ತು ಪರಿಶಿಷ್ಟರು ತಮ್ಮನ್ನು ಕನ್ನಡಿಗರು ಎಂದೇ ಗುರುತಿಸಿಕೊಳ್ಳಲು ಹೆಮ್ಮೆ ಪಡುತ್ತಾರೆ. ತಮಿಳರು ಕೂಡ ಇವರನ್ನು ಗುರುತಿಸಿ, ಗೌರವಿಸುವುದು ಕನ್ನಡಿಗರೆಂದೇ ಹೊರತು ಅವರ ಜಾತಿಯಿಂದಲ್ಲ.

ಸಿಪಿಐನಿಂದ ಹಾಲಿ ಶಾಸಕ ಟಿ.ರಾಮಚಂದ್ರನ್ ಮತ್ತು ಬಿಜೆಪಿಯಿಂದ ಡಾ.ಸಿ. ನಾಗೇಶ್ ಕಣದಲ್ಲಿದ್ದಾರೆ. ಕಳೆದ ಬಾರಿಯೂ ಮುಖಾಮುಖಿಯಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿರುವ ರಾಮಚಂದ್ರನ್ ಮತ್ತು ವೈದ್ಯರಾಗಿರುವ ನಾಗೇಶ್ ಇಬ್ಬರೂ ಒಕ್ಕಲಿಗರು. ಇಬ್ಬರೂ ಚೆನ್ನಾಗಿ ಕನ್ನಡ ಬಲ್ಲವರು. ರಾಮಚಂದ್ರನ್ ಬೆಂಗಳೂರು ವಿ.ವಿ ಪುರಂ ಕಾಲೇಜಿನಲ್ಲಿ ಓದಿದ್ದಾರೆ.

ಸ್ವತಂತ್ರರಾಗಿ ಪದಾರ್ಪಣೆ: 2006ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ವಿಧಾನಸಭೆಗೆ ಪದಾರ್ಪಣೆ ಮಾಡಿದ ಟಿ. ರಾಮಚಂದ್ರನ್, 2011 ಹಾಗೂ 2021ರಲ್ಲಿ ಸಿಪಿಐನಿಂದ ಆಯ್ಕೆ ಯಾದರು. 2016 ರಲ್ಲಿ ಡಿಎಂಕೆ ಅಭ್ಯರ್ಥಿ ವೈ.ಪ್ರಕಾಶ್, ರಾಮಚಂದ್ರನ್‌ಗೆ ಸೋಲಿನ ರುಚಿ ತೋರಿಸಿದರು. 2021ರಲ್ಲಿ ಸಿಪಿಐ, ಡಿಎಂಕೆ ಮತ್ತು ಕಾಂಗ್ರೆಸ್ ಮೈತ್ರಿಕೂಟ ಸೇರಿತು. ಥಳೀ ಕ್ಷೇತ್ರ ಸಿಪಿಐ ಪಾಲಾಯಿತು. ಶಾಸಕರಾಗಿದ್ದ ಪ್ರಕಾಶ್‌ಗೆ ಹೊಸೂರು ಟಿಕೆಟ್ ನೀಡಲಾಯಿತು. ಅಲ್ಲಿಂದಲೂ ಅವರು ಆಯ್ಕೆಯಾಗಿದ್ದರು. ಈ ಬಾರಿ ಅವರಿಗೆ ಅಲ್ಲಿಯೂ ಡಿಎಂಕೆ ಟಿಕೆಟ್ ನಿರಾಕರಿಸಿದೆ.

ಪ್ರಕಾಶ್ ಈ ಚುನಾವಣೆಯಲ್ಲಿ ಎಷ್ಟು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ ಎಂಬುದರ ಮೇಲೆ ರಾಮಚಂದ್ರನ್ ಗೆಲುವು ಅವಲಂಬಿತವಾಗಿದೆ. ಮೇಲಾಗಿ ಕ್ಷೇತ್ರದ ಕೆಲವೆಡೆ ಡಿಎಂಕೆ ಮತ್ತು ಸಿಪಿಐ ಪಕ್ಷಗಳ ಕಾರ್ಯಕರ್ತರು ಮತ್ತು ಸ್ಥಳೀಯ ಮುಖಂಡರ ನಡುವೆ ಪರಸ್ಪರ ಹೊಂದಾಣಿಕೆ ಇಲ್ಲ.

ಸವಾಲು ಹಲವು: ನಾಲ್ಕನೇ ಬಾರಿ ಶಾಸಕರಾಗಲು ಹೊರಟಿರುವ ರಾಮಚಂದ್ರನ್ ಅವರಿಗೆ ಎರಡೂ ಪಕ್ಷಗಳ ಕಾರ್ಯಕರ್ತರನ್ನು ಒಗ್ಗೂಡಿಸುವುದೇ ಸವಾಲಿನ ಕೆಲಸವಾಗಿದೆ. ಇಲ್ಲಿಂದ ಸ್ಪರ್ಧಿಸಲು ರಾಜ್ಯ ಬಿಜೆಪಿ ಕಾರ್ಯದರ್ಶಿ ಅಮರಪ್ರಸಾದ ರೆಡ್ಡಿ ಸಿದ್ಧತೆ ನಡೆಸಿದ್ದರು. ಬಿಜೆಪಿ ಟಿಕೆಟ್ ನಿರಾಕರಿಸಿದೆ. ನಾಗೇಶ್‌ಗೆ ಇದು ಎರಡನೇ ಚುನಾವಣೆ.

'ಸ್ಥಳೀಯ ಚುನಾವಣೆಯಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸುವ ಪಕ್ಷಗಳು ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳುತ್ತವೆ. ಆಗ ಪರಸ್ಪರ ವೈರಿಗಳಂತೆ ಕಚ್ಚಾಡಿ ಈಗ ಒಟ್ಟಾಗಿ ಮತ ಕೇಳಲು ಮುಜುಗರವಾಗುತ್ತದೆ' ಎನ್ನುತ್ತಾರೆ ಕಾರ್ಯಕರ್ತರು. ಬಿಜೆಪಿ ಅಭ್ಯರ್ಥಿ ಪರ ಮತ ಕೇಳಲು ಎಐಎಡಿಎಂಕೆ ಕಾರ್ಯಕರ್ತರು, ಸಿಪಿಐ ಅಭ್ಯರ್ಥಿ ಪರ ಪ್ರಚಾರಕ್ಕೆ ಡಿಎಂಕೆ ಮುಖಂಡರು ಹಿಂಜರಿಯುತ್ತಿದ್ದಾರೆ. ಇದನ್ನು ಮೆಟ್ಟಿ ನಿಲ್ಲುವುದು ಎರಡೂ ಪಕ್ಷಗಳ ಅಭ್ಯರ್ಥಿಗಳಿಗೆ ತಲೆನೋವಾಗಿದೆ.



ತಮಿಳುನಾಡಿನ ಥಳೀ ಕ್ಷೇತ್ರದಲ್ಲಿ ಮತಯಾಚಿಸುತ್ತಿರುವ ಸಿಪಿಐ ಅಭ್ಯರ್ಥಿ ಟಿ.ರಾಮಚಂದ್ರನ್

ಜಾತಿ ಸಮೀಕರಣ

ಕೃಷ್ಣಗಿರಿ ಜಿಲ್ಲೆಯ ಥಳೀ ವಿಧಾನಸಭಾ ಕ್ಷೇತ್ರದಲ್ಲಿ 2,35,984 ಮತದಾರರಿದ್ದಾರೆ. ಅಷೈಕಿ ಶೇ60ಕ್ಕಿಂತ ಹೆಚ್ಚು ಕನ್ನಡಿಗರಿದ್ದಾರೆ. ಒಕ್ಕಲಿಗರು, ಕುರುಬರು, ಲಿಂಗಾಯತರು, ಬಲಿಜಗರು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕ್ಷೇತ್ರದಲ್ಲಿ ಅಹಿಂದ ಮತದಾರರ ಪ್ರಾಬಲ್ಯ ಕಡೆಗಣಿಸುವಂತಿಲ್ಲ. ಗ್ರಾಮೀಣ ಮತದಾರರು ಸಂಖ್ಯೆ ಹೆಚ್ಚಾಗಿದೆ.

ಕಾವಾಡಿ ಮೇಲೆ ಸಾಕಾನೆ 'ಸುಗ್ರೀವ'ನಿಂದ ದಾಳಿ

ಬೇಲೂರು (ಹಾಸನ ಜಿಲ್ಲೆ): ಕಾಡಾನೆ ಸೆರೆಗೆ ದುಬಾರೆ ಶಿಬಿರದಿಂದ ಕರೆತಂದಿದ್ದ ಸಾಕಾನೆ ಸುಗ್ರೀವ ಮದವೇರಿ ಗುರುವಾರ ಬೆಳಿಗ್ಗೆ ಕಾವಾಡಿ ರಾಜು ಅವರ ಮೇಲೆ ದಾಳಿ ನಡೆಸಿದೆ.

ವಿಕ್ರೋಟಿನ ಸಸ್ಯಕ್ಷೇತ್ರದಲ್ಲಿ ತಾತ್ಕಾಲಿಕ ಆನೆ ಶಿಬಿರದಲ್ಲಿ ಅವರು ಮೇವು ಕೊಡುವಾಗ ಕೋರೆಯಿಂದ ಎದೆಭಾಗಕ್ಕೆ ಹೊಟ್ಟೆಗೆ ತಿವಿದು, ಸಣ್ಣಕರುಳಿನ ಭಾಗವು ಹೊರಬಂದಿತ್ತು.

ತಾಲ್ಲೂಕು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹಾಸನದ ಹಿಮ್ಸ್‌ನಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಘಟನೆ ಬಳಿಕ ಶಿಬಿರದಲ್ಲಿ ಕೆಲಕಾಲ ಆತಂಕ ಮೂಡಿದ್ದು, ಅರಣ್ಯ ಸಿಬ್ಬಂದಿ ಆನೆಯನ್ನು ನಿಯಂತ್ರಣಕ್ಕೆ ತಂದಿದ್ದಾರೆ.

ಮಂಗಳವಾರ ದುಬಾರೆ ಶಿಬಿರದಿಂದ ಸುಗ್ರೀವ, ಧನಂಜಯ, ಹರ್ಷ, ಲಕ್ಷ್ಮಣ, ಶ್ರೀರಾಮ, ಅಯ್ಯಪ್ಪ ಸಾಕಾನೆಗಳು ವಿಕ್ರೋಟಿಗೆ ಬಂದು, ಬುಧವಾರ ಒಂಟಿ ಕೋರೆ ಕಾಡಾನೆಯನ್ನು ಸೆರೆಹಿಡಿದಿದ್ದವು. ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಸುಗ್ರೀವ ದಾಳಿ ನಡೆಸಿರುವುದು ಅಧಿಕಾರಿಗಳಿಗೆ ಆಶ್ಚರ್ಯತಂದಿದೆ.

'ಸುಗ್ರೀವ ಮತ್ತು ಲಕ್ಷ್ಮಣ ಸಾಕಾನೆಗಳನ್ನು ದುಬಾರೆ ಶಿಬಿರಕ್ಕೆ ವಾಪಸ್ ಕಳುಹಿಸಲಾಗಿದ್ದು, ಬೇರೆ ಆನೆಗಳನ್ನು ಕರೆಸಿಕೊಂಡು ಕಾರ್ಯಾಚರಣೆ ಪ್ರಾರಂಭಿಸಲಾಗುವುದು' ಎಂದು ಡಿಎಫ್‌ಒ ಸೌರಭ್ ಕುಮಾರ್ ಅವರು ತಿಳಿಸಿದ್ದಾರೆ.

'ಬುಧವಾರ ತಪ್ಪಿಸಿಕೊಂಡಿರುವ ಆನೆಯನ್ನು ಶೀಘ್ರದಲ್ಲೇ ಸೆರೆ ಹಿಡಿಯಲಾಗುತ್ತದೆ. ತಾತ್ಕಾಲಿಕ ಆನೆ ಶಿಬಿರಕ್ಕೆ ಸಾರ್ವಜನಿಕರು ಬಾರದಂತೆ ನಿರ್ಬಂಧ ಹೇರಲಾಗಿದೆ' ಎಂದು ಸಿಸಿಎಫ್ ಏಡುಕೊಂಡಲ ತಿಳಿಸಿದ್ದಾರೆ.

ಟಿವಿಕೆ ಪ್ರಣಾಳಿಕೆ ಬಿಡುಗಡೆ: ವಧುಗಳಿಗೆ 8ಗ್ರಾಂ ಚಿನ್ನ

'ಮಹಿಳೆಯರಿಗೆ ಮಾಸಿಕ ₹2,500'

ಚೆನ್ನೈ (ಪಿಟಿಐ): ತಮಿಳುನಾಡಿನ ವಿಧಾನಸಭಾ ಚುನಾವಣೆ ಸಂಬಂಧ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರು ಗುರುವಾರ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಮಹಿಳೆಯರ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ.

60 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮಾಸಿಕ ₹2,500 ನೆರವು, ಬಡ ಕುಟುಂಬದ ವಧುಗಳಿಗೆ 8 ಗ್ರಾಂ ಚಿನ್ನ, ಗುಣಮಟ್ಟದ ರೇಷ್ಮೆ ಸೀರೆ ಮತ್ತು ಮಹಿಳೆಯರು ನಡೆಸುವ ಸ್ವಸಹಾಯ ಸಂಘಗಳಿಗೆ ₹5 ಲಕ್ಷಗಳವರೆಗೆ ಬಡ್ಡಿರಹಿತ ಸಾಲ ನೀಡಲಾಗುವುದು. ಅಧಿಕಾರಕ್ಕೆ ಬಂದರೆ ಭ್ರಷ್ಟಾಚಾರ ಮುಕ್ತ ಉತ್ತಮ ಆಡಳಿತ ನೀಡುವುದಾಗಿ ವಿಜಯ್ ಅವರು ಭರವಸೆ ನೀಡಿದ್ದಾರೆ.

ಆಸ್ಪತ್ರೆಗಳ ಆಧುನೀಕರಣ, ₹25 ಲಕ್ಷ ಮೊತ್ತದ ಕುಟುಂಬ ಆರೋಗ್ಯ ವಿಮಾ ಯೋಜನೆ ಪರಿಚಯಿಸಲಾಗುವುದು. ವೃದ್ಧರು ಮತ್ತು ಅಂಗವಿಕಲರಿಗೆ ಮಾಸಿಕ ₹3 ಸಾವಿರ ಪಿಂಚಣಿ, 200 ಯೂನಿಟ್ ಉಚಿತ ವಿದ್ಯುತ್ ನೀಡಲಾಗುವುದು ಎಂಬ ಹಲವು ವಾಗ್ದಾನ ನೀಡಿದ್ದಾರೆ.

ಪ್ರಣಾಳಿಕೆಯ ಪ್ರಮುಖ ಅಂಶಗಳು

- 100 ವಿಶೇಷ ವಸತಿ ಶಾಲೆಗಳ ಸ್ಥಾಪನೆ
- ಮಕ್ಕಳು ಶಾಲೆ ಬಿಡುವುದನ್ನು ತಡೆಗಟ್ಟಲು, ಸರ್ಕಾರಿ ಮತ್ತು ರಾಜ್ಯ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ತಾಯಂದಿರು ಅಥವಾ ಪೋಷಕರಿಗೆ ವಾರ್ಷಿಕ ₹15 ಸಾವಿರ ನೆರವು
- ಮಾಜಿ ಮುಖ್ಯಮಂತ್ರಿ ಕಾಮರಾಜ್ ಅವರ ಹೆಸರಿನಲ್ಲಿ 100 ವಿಶೇಷ ವಸತಿ ಶಾಲೆಗಳ ಸ್ಥಾಪನೆ
- ₹20 ಲಕ್ಷವರೆಗಿನ ಉನ್ನತ ಶಿಕ್ಷಣ ಸಾಲ
- ಎ.ಐ ಸಚಿವಾಲಯ, ಎ.ಐ ವಿಶ್ವವಿದ್ಯಾಲಯ ಮತ್ತು ಎ.ಐ ನಗರಗಳ ಸ್ಥಾಪನೆ
- ಐದು ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ರೈತರು ಕೃಷಿ ಸಹಕಾರ ಸಂಘಗಳಲ್ಲಿ ಪಡೆದ ಬೆಳೆ ಸಾಲಗಳ ಸಂಪೂರ್ಣ ಮನ್ನಾ
- ಐದು ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರಿಗೆ ಶೇ 50ರಷ್ಟು ಸಾಲ ಮನ್ನಾ
- ಭತ್ತಕ್ಕೆ ಪ್ರತಿ ಕ್ವಿಂಟಲ್‌ಗೆ ₹3,500 ಮತ್ತು ಪ್ರತಿ ಟನ್ ಕಬ್ಬು ಬೆಳೆಗೆ ₹4,500 ಕನಿಷ್ಠ ಬೆಂಬಲ ಬೆಲೆ ನೀಡಲಾಗುವುದು
- ನಿರುದ್ಯೋಗ ನಿವಾರಣೆಗೆ ಐದು ಲಕ್ಷ ಹೊಸ ಸರ್ಕಾರಿ ಉದ್ಯೋಗಗಳ ಸೃಷ್ಟಿ, ಐದು ಲಕ್ಷ ಗೌರವಧನಸಹಿತ ಇಂಟರ್ನ್‌ಶಿಪ್ ಒದಗಿಸುವುದು
- ನಿರುದ್ಯೋಗಿ ಪದವೀಧರರಿಗೆ ಮಾಸಿಕ ₹4 ಸಾವಿರವರೆಗೆ ಸಹಾಯಧನ
- ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆ ಪರಿಗಣಿಸುವುದು ಮತ್ತು ದಾದಿಯರು ಸೇರಿದಂತೆ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸುವುದು
- ಜನರ ಆರೋಗ್ಯದ ದೃಷ್ಟಿಯಿಂದ ಮಾದಕವಸ್ತುಗಳ ಮುಕ್ತ ತಮಿಳುನಾಡು ನಿರ್ಮಿಸುವ ಗುರಿ

9 ನವಿಲುಗಳ ಕಳೇಬರ ಪತ್ತೆ

ಸಂತೇಬಾಚಹಳ್ಳಿ (ಮಂಡ್ಯ ಜಿಲ್ಲೆ): ಸಮೀಪದ ಬೆಟ್ಟದಪುರ ಹಾಗೂ ಸೋಮೇನಹಳ್ಳಿ ಗಡಿ ಪ್ರದೇಶದಲ್ಲಿ 9 ನವಿಲುಗಳ ಕಳೇಬರಗಳು ಪತ್ತೆಯಾಗಿವೆ.

'ಬೆಟ್ಟದಪುರ ಸರ್ವೆ ನಂಬರ್ 2ರ ಹಳ್ಳ ಹಾಗೂ ಬೇಲಿ ಸರಹದ್ದಿನಲ್ಲಿ 7 ನವಿಲುಗಳು ಹಾಗೂ ಸೋಮೇನಹಳ್ಳಿಯ 54ನೇ ಸರ್ವೆ ನಂಬರ್‌ನಲ್ಲಿ ಎರಡು ನವಿಲುಗಳ ಕಳೇಬರ ಪತ್ತೆಯಾಗಿವೆ' ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹರೀಶ್ ಹೇಳಿದರು. ವಲಯ ಅರಣ್ಯಾಧಿಕಾರಿ ಅನಿತಾ ಮಾತನಾಡಿ, 'ನವಿಲುಗಳ ಅಂಗಾಂಗ ಮಾದರಿಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ವರದಿ ಬಂದ ಬಳಿಕ ಕ್ರಮ ಕೈಗೊಳ್ಳಲಾಗುವುದು' ಎಂದರು.

ಬಿಲ್ಲೇನಹಳ್ಳಿ ಗ್ರಾಮದಲ್ಲಿ ಈಚೆಗೆ 7 ನವಿಲುಗಳು ಮೃತಪಟ್ಟಿದ್ದವು.

ಮಠ ತೊರೆಯಲು ಟ್ರಸ್ಟ್‌ನಿಂದ ಸ್ವಾಮೀಜಿಗೆ ಗಡುವು


ದಾವಣಗೆರೆ: 'ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಿಂದ ಉಚ್ಚಾಟಿತರಾಗಿರುವ ವಚನಾನಂದ ಸ್ವಾಮೀಜಿ ಏ.23ರ ಒಳಗೆ ಮಠದಿಂದ ಗೌರವಯುತವಾಗಿ ನಿರ್ಗಮಿಸಬೇಕು. ಇಲ್ಲವಾದರೆ ಸಾವಿರಾರು ಭಕ್ತರು ಮಠಕ್ಕೆ ಧಾವಿಸಿ ಹೊರಹಾಕುತ್ತೇವೆ' ಎಂದು ಗುರುಪೀಠದ ಟ್ರಸ್ಟಿ ಎಚ್.ಎಸ್. ನಾಗರಾಜ್ ತಿಳಿಸಿದರು.

'ಟ್ರಸ್ಟ್ ತೀರ್ಮಾನವನ್ನು ಮೀರಿ ಸ್ವಾಮೀಜಿ ಮಠದಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಟ್ರಸ್ಟ್ ವಿರುದ್ಧ ಭಕ್ತರನ್ನು ಎತ್ತಿಕಟ್ಟುವ ಪ್ರಯತ್ನವೂ ಫಲ ನೀಡುವುದಿಲ್ಲ. ಸ್ವಯಂ ಪ್ರೇರಿತವಾಗಿ ಮಠವನ್ನು ತೊರೆಯದೇ ಇದ್ದರೆ ಮುಂದಿನ ಪರಿಣಾಮ ಎದುರಿಸ ಬೇಕಾಗುತ್ತದೆ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

'8 ವರ್ಷಗಳ ಹಿಂದೆ ವಚನಾನಂದ ಸ್ವಾಮೀಜಿ ಅವರನ್ನು ಗುರು ಪೀಠಕ್ಕೆ ತರಲಾಗಿತ್ತು. ಮಠಕ್ಕೆ ಬರುವ ಭಕ್ತರಿಗೆ ಸ್ವಾಮೀಜಿ ಸಿಗುತ್ತಿರಲಿಲ್ಲ. ಅವರ ನಡವಳಿಕೆ ಅನುಮಾನ ತಂದಿದೆ' ಎಂದರು.

'ಮಾಜಿ ಸಚಿವ ಮುರುಗೇಶ ನಿರಾಣಿ ಅವರು ಎರಡು ವರ್ಷಗಳ ಹಿಂದೆ ಮಠದ ಏಳಿಗೆಗೆ ₹ 2 ಕೋಟಿ ದೇಣಿಗೆ ನೀಡಿದ್ದರು. ಇದನ್ನು ಸ್ವಾಮೀಜಿ ವೈಯಕ್ತಿಕ ಹಿತಾಸಕ್ತಿಗೆ ಬಳಸಿಕೊಂಡಿದ್ದಾರೆ. ಮಠದ ಕಾರ್ಯಚಟುವಟಿಕೆಗಳನ್ನು ಟ್ರಸ್ಟ್ ನೋಡಿಕೊಳ್ಳುತ್ತಿರುವಾಗ ವಚನಾನಂದ ಸ್ವಾಮೀಜಿ ಅವರಿಗೆ ಹಣದ ವ್ಯಾಮೋಹ ಏಕೆ? ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗಿರುವ ಇಂಥವರು ಗುರುಪೀಠದಲ್ಲಿ ಮುಂದುವರಿಯಬಾರದು' ಎಂದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,231
ಇಂದಿನ ಅಂತ್ಯ: 24,196
ದಿನದ ಕನಿಷ್ಠ: 24,102
34

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹570
12 ಕ್ಕೆ ₹78
ಮೈಸೂರು: 100 ಕ್ಕೆ ₹580

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹228
ಆರ್‌ಎಸ್‌ಎಸ್-5 ₹221
ಗುಡ್ ಲಾಟ್ ₹200

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹350-728
ದ್ವಿತಳಿ (ಬಿ.ವಿ) ₹356-835

ಮುದ್ರಮನೆ ಕಾಫಿ (50 ಕೆಜಿಗೆ)
ಎಪಿ ₹23800
ಎಸಿ ₹14000
ಆರ್‌ಪಿ ₹18350
ಆರ್‌ಸಿ ₹9950

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1730 (1740)
ಸೋಯಾ (ರಿಫೈನ್ಡ್) ₹1540 (1530)
ಸೂರ್ಯಕಾಂತಿ (ರಿಫೈನ್ಡ್) ₹1680 (1680)
ಪಾಮೋಲಿನ್ ₹1440 (1460)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹23500-28500
ತಿಪಟೂರು ₹33000-38018
ತುಮಕೂರು ₹28100-32600
ತುರುವೇಕೆರೆ ₹37500-37500

ವಿದೇಶಿ ಪ್ರವಾಸಿಗರ ಪ್ರಮಾಣ ಶೇ 20 ಇಳಿಕೆ

₹18 ಸಾವಿರ ಕೋಟಿ ನಷ್ಟ ಅನುಭವಿಸುವ ಭೀತಿಯಲ್ಲಿ ದೇಶದ ವಿಮಾನಯಾನ ಉದ್ಯಮ: ವರದಿ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾದ ಬಳಿಕ ಭಾರತಕ್ಕೆ ಬರುವ ವಿದೇಶಿ ಪ್ರವಾಸಿಗರ ಸಂಖ್ಯೆ ಶೇ 15ರಿಂದ ಶೇ 20ರಷ್ಟು ಇಳಿಕೆಯಾಗಿದೆ. ಇದೇ ಅವಧಿಯಲ್ಲಿ ದೇಶದ ವಿಮಾನಯಾನ ಉದ್ಯಮವು ಅಂದಾಜು ₹18 ಸಾವಿರ ಕೋಟಿ ನಷ್ಟ ಅನುಭವಿಸುವ ಭೀತಿಯಲ್ಲಿದೆ ಎಂದು ವರದಿಯೊಂದು ಗುರುವಾರ ತಿಳಿಸಿದೆ.

ಸಂಘರ್ಷದಿಂದ ವಿಮಾನಯಾನ ಉದ್ಯಮವು ಹೆಚ್ಚು ತೊಂದರೆಗೆ ಒಳಗಾಗಿದೆ. ವಿಮಾನಗಳ ಹಾರಾಟ ರದ್ದತಿ, ವಾಯು ಪ್ರದೇಶದ ಬಳಕೆ ಮೇಲಿನ ನಿರ್ಬಂಧಗಳು, ಅಂತರ ರಾಷ್ಟ್ರೀಯ ವಿಮಾನಗಳ ಮಾರ್ಗಗಳಲ್ಲಿ ಬದಲಾವಣೆಯಂತಹ ಸಮಸ್ಯೆಗಳು ಸೃಷ್ಟಿ ಆಗಿವೆ ಎಂದು ವರದಿ ತಿಳಿಸಿದೆ.

ಅಡಚಣೆಯ ಕಾರಣದಿಂದ ವಿಮಾನಗಳ ಹಾರಾಟದ ಅವಧಿ ಪ್ರಮುಖ ಮಾರ್ಗಗಳಲ್ಲಿ 2ರಿಂದ 4 ಗಂಟೆಯಷ್ಟು ಹೆಚ್ಚಳವಾಗಿದೆ. ಇದರ ಪರಿಣಾಮ ವಿಮಾನಗಳ ಇಂಧನ ಬಳಕೆ ಮತ್ತು ಕಾರ್ಯಾಚರಣೆ ವೆಚ್ಚ ತೀವ್ರ ಹೆಚ್ಚಳವಾಗಿದೆ.

ಮುಖ್ಯಾಂಶಗಳು

- ಪಶ್ಚಿಮ ಏಷ್ಯಾ ಸಂಘರ್ಷದಿಂದ ಆತಿಥ್ಯ ವಲಯಕ್ಕೆ ತೊಂದರೆ
- ರೆಸ್ಟೋರೆಂಟ್ ಉದ್ಯಮಕ್ಕೆ ದಿನಕ್ಕೆ ಅಂದಾಜು ₹2,650 ಕೋಟಿ ನಷ್ಟ
- ಎಲ್‌ಪಿಜಿ ಪೂರೈಕೆಯಲ್ಲಿನ ಅಡಚಣೆ ಉದ್ಯಮದ ಕಾರ್ಯಾಚರಣೆಗೆ ಅಡ್ಡಿ



ವಿಮಾನಗಳ ಕಾರ್ಯಾಚರಣೆ ವೆಚ್ಚದಲ್ಲಿ ಇಂಧನದ ಪಾಲು ಶೇ 35ರಿಂದ ಶೇ 40ರಷ್ಟಿದೆ. ಈಗ ಉಂಟಾಗಿರುವ ಸಂಘರ್ಷದ ಸನ್ನಿವೇಶವು ಉದ್ಯಮದ ಲಾಭ ಪ್ರಮಾಣವನ್ನು ಕಡಿಮೆ ಮಾಡಿದೆ. ಸಂಘರ್ಷದಿಂದ ವಿಮಾನಗಳ ಹಾರಾಟ ಕಡಿಮೆ ಆಗಿದ್ದಲ್ಲದೆ, ಟಿಕೆಟ್ ದರ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಟಿಕೆಟ್‌ಗಳ ಬುಕಿಂಗ್ ವಿಧಾನ, ಟಿಕೆಟ್ ರದ್ದತಿ ಮತ್ತು ಕಾರ್ಯಾಚರಣೆ ವೆಚ್ಚದ ಹೆಚ್ಚಳದ ಕುರಿತು ಸಂಬಂಧಪಟ್ಟ ಪಾಲುದಾರರಿಂದ ಪ್ರತಿಕ್ರಿಯೆ ಪಡೆದು ರೇಟಿಂಗ್ ಏಜೆನ್ಸಿ ಐಸಿಆರ್‌ಎ, ವಿಮಾನಯಾನ ಉದ್ಯಮವು ಒಟ್ಟಾರೆ ₹18 ಸಾವಿರ ಕೋಟಿಯಷ್ಟು ನಿವ್ವಳ ನಷ್ಟ ಕಾಣಬಹುದು ಎಂದು ಹೇಳಿದೆ ಎಂದು ವಾಣಿಜ್ಯೋದ್ಯಮಗಳ ಸಂಘಟನೆಯಾದ ಪಿಎಚ್‌ಡಿಸಿಸಿಐ ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ವಿದೇಶಿ ಪ್ರವಾಸಿಗರು ಎಚ್ಚರಿಕೆಯ ನಡೆ ಅನುಸರಿಸುತ್ತಿದ್ದಾರೆ. ಇದರಿಂದ ದೇಶಕ್ಕೆ ಬರುವ ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ಶೇ 15ರಿಂದ ಶೇ 20ರಷ್ಟು ಇಳಿಕೆ ಆಗಿದೆ.

ಸರಕುಗಳ ದರ ಏರಿಕೆ: ಸಂಘರ್ಷದಿಂದ ರೆಸ್ಟೋರೆಂಟ್ ಮತ್ತು ಆಹಾರ ಸೇವಾ ವಲಯವು ಕೂಡ ಮಿಶ್ರ ಪರಿಣಾಮವನ್ನು ಕಾಣುತ್ತಿದೆ. ಭಾರತದ ರಾಷ್ಟ್ರೀಯ ರೆಸ್ಟೋರೆಂಟ್ ಸಂಘದ (ಎನ್‌ಆರ್‌ಎಐ) ಪ್ರಕಾರ, ಆಮದು ಮಾಡಿಕೊಂಡ ಸರಕುಗಳು, ಸಾರಿಗೆ ಮತ್ತು ಇಂಧನದ ಬೆಲೆಯಲ್ಲಿನ ಹೆಚ್ಚಳದಿಂದ ಸರಕುಗಳ ದರ ಶೇ 10ರಿಂದ ಶೇ 15ರವರೆಗೆ ಏರಿಕೆಯಾಗಿದೆ.

'ಎಲ್‌ಪಿಜಿ ಪೂರೈಕೆಯಲ್ಲಿನ ಅಡಚಣೆಯು ರೆಸ್ಟೋರೆಂಟ್ ಉದ್ಯಮದ ಕಾರ್ಯಾಚರಣೆಗೆ ಹೆಚ್ಚಿನ ಅಡ್ಡಿ ಉಂಟು ಮಾಡಿದೆ. ಸರಿಸುಮಾರು ಶೇ 10ರಷ್ಟು ರೆಸ್ಟೋರೆಂಟ್‌ಗಳು ತಾತ್ಕಾಲಿಕವಾಗಿ ಮುಚ್ಚಿವೆ. ಶೇ 60ರಿಂದ ಶೇ 70ರಷ್ಟು ರೆಸ್ಟೋರೆಂಟ್‌ಗಳು ಇಂಡಕ್ಷನ್ ಒಲೆ, ಪರ್ಯಾಯ ಇಂಧನ ಬಳಕೆ ಮಾಡಲು ಮುಂದಾಗಿವೆ. ಆಹಾರದ ಪಟ್ಟಿಯಲ್ಲಿ ಬದಲಾವಣೆ ಆಗಿದೆ ಅಥವಾ ಉದ್ಯಮದ ಕಾರ್ಯಾಚರಣೆ ಅವಧಿ ಕಡಿಮೆ ಆಗಿದೆ' ಎಂದು ಎನ್‌ಆರ್‌ಎಐನ ಅಧ್ಯಕ್ಷ ಸಾಗರ್ ದರ್ಯಾನಿ ಹೇಳಿದ್ದಾರೆ.

2024ರಲ್ಲಿ ದೇಶದ ಆಹಾರ ಸೇವೆಗಳ ಮಾರುಕಟ್ಟೆ ಮೌಲ್ಯ ₹5.69 ಲಕ್ಷ ಕೋಟಿಯಷ್ಟಾಗಿತ್ತು. ಇದು 2028ರ ವೇಳೆಗೆ ₹7.76 ಲಕ್ಷ ಕೋಟಿಯಾಗುವ ಅಂದಾಜಿದೆ. 2026ರಲ್ಲಿ ₹6.46 ಲಕ್ಷ ಕೋಟಿಯಷ್ಟಾಗಲಿದ್ದು, ದಿನವೊಂದಕ್ಕೆ ಉದ್ಯಮದ ವಹಿವಾಟು ಅಂದಾಜು ₹17,700 ಕೋಟಿ ಆಗಲಿದೆ ಎಂದು ಉದ್ಯಮವು ಅಂದಾಜಿಸಿದೆ.

ಉದ್ಯಮದ ವಹಿವಾಟು ಶೇ 15ರಿಂದ ಶೇ 20ರಷ್ಟು ಇಳಿಕೆ ಆಗುವುದರಿಂದ ದಿನವೊಂದಕ್ಕೆ ಅಂದಾಜು ₹2,650 ಕೋಟಿ ನಷ್ಟ ಉಂಟಾಗಬಹುದು. ಇದು ತಿಂಗಳಿಗೆ ₹79 ಸಾವಿರ ಕೋಟಿಯಷ್ಟಾಗಲಿದ್ದು, ಆರ್ಥಿಕತೆಗೆ ತೊಂದರೆ ಉಂಟು ಮಾಡಲಿದೆ ಎಂದು ಹೇಳಿದೆ.

7 ಲಕ್ಷ ಉದ್ಯೋಗ ಕಡಿತ ಸಾಧ್ಯತೆ

ಸಂಘರ್ಷವು ರೆಸ್ಟೋರೆಂಟ್ ಉದ್ಯಮದ ಉದ್ಯೋಗದ ಮೇಲೂ ಪರಿಣಾಮ ಬೀರುವ ಆತಂಕ ಸೃಷ್ಟಿಯಾಗಿದೆ. ಪ್ರಸ್ತುತ ರೆಸ್ಟೋರೆಂಟ್ ಉದ್ಯಮವು 85 ಲಕ್ಷಕ್ಕೂ ಹೆಚ್ಚಿನ ಉದ್ಯೋಗಿಗಳನ್ನು ಹೊಂದಿದೆ. ಸಂಘರ್ಷವು ದೀರ್ಘಾವಧಿಗೆ ಮುಂದುವರಿದರೆ 5ರಿಂದ 7 ಲಕ್ಷ ಉದ್ಯೋಗಿಗಳು ತಮ್ಮ ಕೆಲಸ ಕಳೆದುಕೊಳ್ಳುವ ಸಾಧ್ಯತೆ ಇದೆ. ಇದರ ಜೊತೆಗೆ ಹೊಸ ನೇಮಕಾತಿಯು ಸ್ಥಗಿತಗೊಳ್ಳಲಿದೆ ಮತ್ತು ರೆಸ್ಟೋರೆಂಟ್‌ಗಳ ವಿಸ್ತರಣೆ ಆಲೋಚನೆಯು ವಿಳಂಬ ಆಗಲಿದೆ ಎಂದು ವರದಿ ತಿಳಿಸಿದೆ.

ಜಿಡಿಪಿ: ಶೇ 6.3ರಷ್ಟು ಪ್ರಗತಿ ನಿರೀಕ್ಷೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಚ್ಚಾ ತೈಲ ದರವು ಪ್ರತಿ ಬ್ಯಾರಲ್‌ಗೆ ಸರಾಸರಿ 130 ಡಾಲರ್‌ಗೆ ತಲುಪಿದರೆ, ಭಾರತದ ಆರ್ಥಿಕ ಬೆಳವಣಿಗೆ ದರ ಶೇ 6.3ರಷ್ಟಾಗುವ ನಿರೀಕ್ಷೆ ಇದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ಸ್ ಹೇಳಿದೆ.

ಭಾರತದಲ್ಲಿ ಸಾಲದ ಹೊರೆಯನ್ನು ತಗ್ಗಿಸಿಕೊಳ್ಳುವ ರಾಜಕೀಯ ಬದ್ಧತೆ ಇದೆ. ಹೀಗಾಗಿ ತೈಲ ಬೆಲೆ ಏರಿಕೆಯಿಂದ ಉಂಟಾಗುವ ಹಣಕಾಸಿನ ಒತ್ತಡವು ದೇಶದ ಕ್ರೆಡಿಟ್ ರೇಟಿಂಗ್ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿಲ್ಲ ಎಂದು ಹೇಳಿದೆ.

2026–27ರಲ್ಲಿ ಕಚ್ಚಾ ತೈಲ ದರವು ಪ್ರತಿ ಬ್ಯಾರಲ್‌ಗೆ 85 ಡಾಲರ್‌ಗೆ ತಲುಪಿದರೆ ದೇಶದ ಜಿಡಿಪಿ ಶೇ 7.1ರಷ್ಟಾಗಲಿದೆ ಎಂದು ಎಸ್ ಆ್ಯಂಡ್ ಪಿ ನಿರ್ದೇಶಕ (ಸಾವರಿನ್ ಮತ್ತು ಅಂತರರಾಷ್ಟ್ರೀಯ ಸಾರ್ವಜನಿಕ ಹಣಕಾಸು ರೇಟಿಂಗ್ಸ್) ಯೀ ಫಾರ್ನ್ ಫುವಾ ಹೇಳಿದ್ದಾರೆ.

ವಿಪ್ರೊದಿಂದ ಷೇರು ಮರುಖರೀದಿ

ನವದೆಹಲಿ (ಪಿಟಿಐ): ಐ.ಟಿ. ಸೇವಾ ವಲಯದ ಪ್ರಮುಖ ಕಂಪನಿಗಳ ಪೈಕಿ ಒಂದಾಗಿರುವ ವಿಪ್ರೊ, ತನ್ನ ಷೇರುದಾರರಿಂದ ₹15 ಸಾವಿರ ಕೋಟಿ ಮೊತ್ತದ ಷೇರುಗಳನ್ನು ಮರುಖರೀದಿ ಮಾಡಲು ಮುಂದಾಗಿದೆ.

ಪ್ರತಿ ಷೇರಿಗೆ ₹250 ದರ ನೀಡಿ ಅದು ಷೇರುಗಳನ್ನು ಮರುಖರೀದಿ ಮಾಡಲಿದೆ. ಇದು ಸೋಮವಾರದ ಷೇರುಬೆಲೆಗೆ (₹210.20) ಹೋಲಿಸಿದರೆ ಶೇ 18ರಷ್ಟು ಹೆಚ್ಚು ಮೊತ್ತ.

ಈ ಸಂಗತಿಯನ್ನು ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ಅಪರ್ಣಾ ಅಯ್ಯರ್ ಅವರು ಗುರುವಾರ ತಿಳಿಸಿದ್ದಾರೆ. 'ಇದು ಕಂಪನಿಯು ಈವರೆಗೆ ಕೈಗೊಂಡಿರುವ ಅತಿದೊಡ್ಡ ಮೊತ್ತದ ಷೇರು ಮರುಖರೀದಿ ಕ್ರಮ' ಎಂದಿದ್ದಾರೆ.

ಷೇರು ಮರುಖರೀದಿ ಪ್ರಕ್ರಿಯೆಯ ಅನುಷ್ಠಾನಕ್ಕೆ ವಿಪ್ರೊ ಕಂಪನಿಯು ಸಮಿತಿಯೊಂದನ್ನು ರಚಿಸಿದೆ.

ಕಂಪನಿಯು 2023ರಲ್ಲಿ ₹12 ಸಾವಿರ ಕೋಟಿ ಮೊತ್ತದ ತನ್ನ ಷೇರುಗಳನ್ನು ಮರುಖರೀದಿಸಿತ್ತು.



ಬೆಂಗಳೂರಿನಲ್ಲಿ ಪ್ರಧಾನ ಕಚೇರಿ ಹೊಂದಿರುವ ಇನ್ನೊಂದು ಪ್ರಮುಖ ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ ₹18 ಸಾವಿರ ಕೋಟಿ ಮೊತ್ತದ ಷೇರು ಮರುಖರೀದಿ ಪ್ರಕ್ರಿಯೆಯನ್ನು ಕಳೆದ ವರ್ಷದ ನವೆಂಬರ್‌ನಲ್ಲಿ ಪೂರ್ಣಗೊಳಿಸಿದೆ.

ದೇಶದ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಟಿಸಿಎಸ್ ₹17 ಸಾವಿರ ಕೋಟಿ ಮೊತ್ತದ ಷೇರು ಮರುಖರೀದಿ ಪ್ರಕ್ರಿಯೆಯನ್ನು 2023ರ ಡಿಸೆಂಬರ್‌ನಲ್ಲಿ ನಡೆಸಿದೆ.

ಕಂಪನಿಗಳು ತಮ್ಮ ಬಳಿ ಇರುವ ಹೆಚ್ಚುವರಿ ಹಣವನ್ನು ಷೇರುದಾರರಿಗೆ ಮರಳಿಸುವ ಉದ್ದೇಶದಿಂದ, ಪ್ರತಿ ಷೇರಿನ ಗಳಿಕೆಯ ಮೊತ್ತವನ್ನು ಹೆಚ್ಚಿಸಲು ಹಾಗೂ ತನ್ನ ಹಣಕಾಸಿನ ಸ್ಥಿತಿಯ ಬಗ್ಗೆ ವಿಶ್ವಾಸವನ್ನು ಸೂಚಿಸುವ ಉದ್ದೇಶದಿಂದ ಷೇರು ಮರುಖರೀದಿ ಪ್ರಕ್ರಿಯೆಗೆ ಮುಂದಾಗುತ್ತವೆ.

ಲಾಭ ಶೇ 1.8ರಷ್ಟು ಇಳಿಕೆ

ನವದೆಹಲಿ (ಪಿಟಿಐ): ವಿಪ್ರೊ ಕಂಪನಿಯು ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹3,501 ಕೋಟಿ ನಿವ್ವಳ ಲಾಭ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿ ಗಳಿಸಿದ್ದ ₹3,569 ಕೋಟಿ ಲಾಭಕ್ಕೆ ಹೋಲಿಸಿದರೆ ಶೇ 1.89ರಷ್ಟು ಕಡಿಮೆ.

ಅರ್ಥ ವ್ಯವಸ್ಥೆಯಲ್ಲಿ ಹಲವು ಬಗೆಯ ಸವಾಲುಗಳು ಇರುವ ಸಂದರ್ಭದಲ್ಲಿ ಕಂಪನಿಯ ಲಾಭದ ಪ್ರಮಾಣ ಇಳಿಕೆ ಕಂಡಿದೆ. ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟುಗಳು ಹಾಗೂ ನೀತಿಗಳಲ್ಲಿನ ಬದಲಾವಣೆಯು 'ಹೊಸ ಕಾಲದ ಸಹಜ ಸ್ಥಿತಿ' ಎಂದು ಕಂಪನಿಯ ಸಿಇಒ ಹಾಗೂ ಎಂ.ಡಿ ಶ್ರೀನಿ ಪಲ್ಲಿಯಾ ಅವರು ಬಣ್ಣಿಸಿದ್ದಾರೆ. ಆದರೆ ಒಟ್ಟಾರೆಯಾಗಿ ಐ.ಟಿ ಸೇವೆಗಳ ಮೇಲಿನ ವೆಚ್ಚಗಳು ಕಡಿಮೆ ಆಗಿಲ್ಲ ಎಂದು ತಿಳಿಸಿದ್ದಾರೆ.

ಕಂಪನಿಯ ವರಮಾನವು ಶೇ 7.6ರಷ್ಟು ಹೆಚ್ಚಳ ಕಂಡಿದ್ದು ₹24,236 ಕೋಟಿಗೆ ತಲುಪಿದೆ. ಇದು ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹22,504 ಕೋಟಿ ಆಗಿತ್ತು. 2025–26ರ ಡಿಸೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಕಂಪನಿಯ ಲಾಭವು ಶೇ 12.2ರಷ್ಟು ಹಾಗೂ ವರಮಾನವು ಶೇ 2.8ರಷ್ಟು ಹೆಚ್ಚಾಗಿದೆ.

ಅಡಿಕೆ ಧಾರಣೆ

ಕುಮಟಾ	
ಚಾಲಿ	44657-47058
ಪುತ್ತೂರು	
ಕೋಕ	20000-34500
ಹೊಸತು	30000-48500
ಹಳತು	50000-55500
ಸಾಗರ	
ಬಿಳಿಗೋಟು	20827-34899
ಚಾಲಿ	34899-44099
ಕೋಕ	12127-38199
ಕೆಂಪುಗೋಟು	28999-40399
ರಾಶಿ	36999-57310
ಸಿಪ್ಪೆಗೋಟು	6659-23469
ಶಿವಮೊಗ್ಗ	
ಸರಕು	55509-96999
ಬೆಟ್ಟೆ	53099-65369
ರಾಶಿ	42669-57009
ಗೊರಬಲು	19030-43338
ಸಿದ್ದಾಪುರ	
ಬಿಳಿಗೋಟು	27319-39619
ಚಾಲಿ	42299-48239
ಕೋಕ	23899-34589
ಕೆಂಪುಗೋಟು	30100-35500
ರಾಶಿ	50099-54599
ತಟ್ಟಿಬೆಟ್ಟೆ	38099-51699
ಶಿರಸಿ	
ಬೆಟ್ಟೆ	41299-50709
ಬಿಳಿಗೋಟು	26899-39869
ಚಾಲಿ	44089-49099
ಕೆಂಪುಗೋಟು	32558-37989
ರಾಶಿ	50300-53899
ಯಲ್ಲಾಪುರ	
ಆಪಿ	63689-63689
ಬಿಳಿಗೋಟು	16612-41899
ಚಾಲಿ	38412-49009
ಕೋಕ	12000-33899
ಕೆಂಪುಗೋಟು	18612-37316
ರಾಶಿ	49869-59000
ತಟ್ಟಿಬೆಟ್ಟೆ	38199-51165

ಮಹಿಳಾ ಮೀಸಲಾತಿ ಮಸೂದೆ ರಾಜಕೀಯ ತಂತ್ರ ಎನಿಸುತ್ತದೆಯೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮುಂಬೈ ಧಾರಣೆ (ಶೇಂಗಾ)

16-04-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1740 (1750)
ಒಂದು ವಾರದ ಡೆಲಿವರಿ	1735 (1745)
ಪಾಮ್ ವಾರದ ಡೆಲಿವರಿ	1438 (1458)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1580)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,52,500 (1,52,500)
ಬೆಳ್ಳಿ ಕೆ.ಜಿಗೆ	2,51,500 (2,50,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಜೋಸ್ ಅಲುಕ್ಕಾಸ್‌ನಲ್ಲಿ ಗ್ರಾಹಕರಿಗೆ ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಸ್ ಅಲುಕ್ಕಾಸ್ ಕಂಪನಿಯು ಅಕ್ಷಯ ತೃತೀಯಾ ಭಾಗವಾಗಿ ವಿಶೇಷ ಕೊಡುಗೆಗಳನ್ನು ಘೋಷಿಸಿದೆ.

ಕೊಡುಗೆಯ ಭಾಗವಾಗಿ, ಗ್ರಾಹಕರು ತಾವು ಖರೀದಿಸಲು ಬಯಸುವ ಆಭರಣದ ಶೇ 10ರಷ್ಟು ಮೊತ್ತ ಪಾವತಿಸಿ ಚಿನ್ನದ ದರದ ಏರಿಕೆಯ ಪರಿಣಾಮದಿಂದ ಪಾರಾಗಬಹುದು ಎಂದು ಕಂಪನಿ ತಿಳಿಸಿದೆ.

ಅಲ್ಲದೆ, ಆಯ್ದ ಚಿನ್ನ, ವಜ್ರ ಮತ್ತು ಪ್ಲಾಟಿನಂ ಆಭರಣಗಳ ಮೇಕಿಂಗ್ ಶುಲ್ಕದ ಮೇಲೆ ಶೇ 50ರಷ್ಟು ರಿಯಾಯಿತಿ ಪಡೆಯಬಹುದು. ವಜ್ರದ ಮೌಲ್ಯದ ಮೇಲಿನ ಶೇ 30ರಷ್ಟು ರಿಯಾಯಿತಿಯ ವಿಶೇಷ ಕೊಡುಗೆಯು ಎಲ್ಲ ಸಂಗ್ರಹಗಳಲ್ಲಿ ಲಭ್ಯವಿದೆ.

ಗ್ರಾಹಕರು 10 ಗ್ರಾಂ ಚಿನ್ನಾಭರಣ ಖರೀದಿಸಿದಾಗ ಒಂದು ಚಿನ್ನದ ನಾಣ್ಯವನ್ನು ಉಚಿತವಾಗಿ ಪಡೆಯಬಹುದು. ವಜ್ರ ಖರೀದಿಯ ಮೇಲೆ ಪ್ರತಿ ಕ್ಯಾರಟ್‌ಗೆ ಉಚಿತ ಚಿನ್ನದ ನಾಣ್ಯ ಸಿಗುತ್ತದೆ. ಹಳೆಯ 22 ಕ್ಯಾರಟ್ ಚಿನ್ನ ವಿನಿಮಯ ಮಾಡಿದಾಗ ನಷ್ಟದ ಶುಲ್ಕ ಇರುವುದಿಲ್ಲ.

'ತೈಲ ಖರೀದಿ ನಿರ್ಬಂಧ ವಿನಾಯಿತಿ ಇಲ್ಲ'

ವಾಷಿಂಗ್ಟನ್ (ಪಿಟಿಐ): ರಷ್ಯಾ ಅಥವಾ ಇರಾನ್‌ನಿಂದ ತೈಲ ಖರೀದಿಯ ಮೇಲೆ ವಿಧಿಸಿರುವ ನಿರ್ಬಂಧಗಳಿಗೆ ಯಾವುದೇ ವಿನಾಯಿತಿ ನೀಡುವುದನ್ನು ಅಮೆರಿಕ ಬುಧವಾರ ತಳ್ಳಿಹಾಕಿದೆ.


ಸ್ಕಾಟ್ ಬೆಸೆಂಟ್

ಶ್ವೇತಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್, 'ರಷ್ಯಾದ ತೈಲದ ಮೇಲಿನ ಸಾಮಾನ್ಯ ಪರವಾನಗಿಯನ್ನು ನವೀಕರಿಸುವುದಿಲ್ಲ. ಇರಾನ್‌ನ ತೈಲದ ಮೇಲಿನ ಸಾಮಾನ್ಯ ಪರವಾನಗಿಯನ್ನೂ ನವೀಕರಿಸುವುದಿಲ್ಲ. ಮಾರ್ಚ್ 11ಕ್ಕಿಂತ ಮೊದಲು ಸಮುದ್ರ ಮಾರ್ಗದಲ್ಲಿ ಸಾಗಣೆ ಮಾಡುತ್ತಿದ್ದ ತೈಲವನ್ನು ಈಗಾಗಲೇ ಬಳಸಲಾಗಿದೆ' ಎಂದು ಹೇಳಿದ್ದಾರೆ.

ಮಾರ್ಚ್ 5ರಂದು ಅಮೆರಿಕವು ಭಾರತಕ್ಕೆ ತೈಲ ಖರೀದಿ ಮೇಲಿನ ನಿರ್ಬಂಧದಿಂದ 30 ದಿನಗಳವರೆಗೆ ವಿನಾಯಿತಿ ನೀಡಿತ್ತು. ರಷ್ಯಾದ ತೈಲ ಖರೀದಿಸುವುದಕ್ಕೂ ಭಾರತಕ್ಕೆ ಅನುಮತಿ ನೀಡಿತ್ತು. ಕೆಲ ದಿನಗಳ ನಂತರ, ಈ ವಿನಾಯಿತಿಯನ್ನು ಇತರ ರಾಷ್ಟ್ರಗಳಿಗೂ ವಿಸ್ತರಿಸಿತ್ತು. ಇದು ಏಪ್ರಿಲ್ 11ರಂದು ಮುಕ್ತಾಯಗೊಂಡಿತ್ತು.

'ಫೆಬ್ರುವರಿಯಲ್ಲಿ ಕಡಿಮೆ ತೈಲ ಖರೀದಿಸಿದ್ದ ಭಾರತವು ಮಾರ್ಚ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೈಲ ಖರೀದಿಸಿದೆ' ಎಂದು ಯುರೋಪಿನ ಚಿಂತಕರ ಚಾವಡಿಯಾದ 'ಸೆಂಟರ್ ಫಾರ್ ರಿಸರ್ಚ್ ಆನ್ ಎನರ್ಜಿ ಆ್ಯಂಡ್ ಕ್ಲೀನ್ ಏರ್' ತನ್ನ ವರದಿಯಲ್ಲಿ ತಿಳಿಸಿದೆ.

'2026ರ ಮಾರ್ಚ್‌ನಲ್ಲಿ ರಷ್ಯಾದ ಪಳೆಯುಳಿಕೆ ಇಂಧನಗಳನ್ನು ಖರೀದಿಸಿದ ದೇಶಗಳಲ್ಲಿ ಭಾರತವು ಎರಡನೇ ಸ್ಥಾನದಲ್ಲಿದೆ. ಈ ಅವಧಿಯಲ್ಲಿ ಭಾರತವು ಒಟ್ಟು 580 ಕೋಟಿ ಯುರೋ (ಸುಮಾರು ₹63,724 ಕೋಟಿ) ಮೌಲ್ಯದ ರಷ್ಯಾದ ಹೈಡ್ರೋಕಾರ್ಬನ್‌ಗಳನ್ನು ಆಮದು ಮಾಡಿಕೊಂಡಿದೆ. ಇದರಲ್ಲಿ ಕಚ್ಚಾ ತೈಲ ಉತ್ಪನ್ನಗಳೇ ಶೇಕಡ 91ರಷ್ಟಿದ್ದು, ಅವುಗಳ ಒಟ್ಟು ಮೌಲ್ಯ 530 ಕೋಟಿ ಯುರೋ (ಸುಮಾರು ₹58,231 ಕೋಟಿ) ಆಗಿದೆ' ಎಂದು ಹೇಳಿದೆ.

33.7 ಕೋಟಿ ಯುರೋ (ಸುಮಾರು ₹3,702 ಕೋಟಿ) ಮೌಲ್ಯದ ಕಲ್ಲಿದ್ದಲು ಮತ್ತು 17.85 ಕೋಟಿ ಯುರೋ (ಸುಮಾರು ₹1,961 ಕೋಟಿ) ಮೌಲ್ಯದ ತೈಲ ಉತ್ಪನ್ನಗಳನ್ನು ಖರೀದಿಸಿತ್ತು. ಫೆಬ್ರುವರಿಯಲ್ಲಿ ಭಾರತವು ಮೂರನೇ ಅತಿದೊಡ್ಡ ಆಮದು ದೇಶವಾಗಿದ್ದು, ರಷ್ಯಾದಿಂದ 180 ಕೋಟಿ ಯುರೋ (₹19,776 ಕೋಟಿ) ಮೌಲ್ಯದ ಹೈಡ್ರೋಕಾರ್ಬನ್‌ಗಳನ್ನು ಖರೀದಿಸಿತ್ತು.

ಕಾರವಾರ ತಲುಪಿದ ಯುಎಇ ಹಡಗು

ಪ್ರಜಾವಾಣಿ ವಾರ್ತೆ

ಕಾರವಾರ: ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ತಾತ್ಕಾಲಿಕ ವಿರಾಮ ಸಿಕ್ಕ ಬೆನ್ನಲ್ಲೇ ಸಂಯುಕ್ತ ಅರಬ್ ರಾಷ್ಟ್ರದಿಂದ (ಯುಎಇ) ಹೊರಟು ಹೊರ್ಮುಜ್ ಜಲಸಂಧಿ ದಾಟಿದ ಎಂಎಸ್‌ಜಿ ಹೆಸರಿನ ಹಡಗು, ಗುರುವಾರ ಇಲ್ಲಿನ ವಾಣಿಜ್ಯ ಬಂದರು ತಲುಪಿತು.

'ಗ್ಯಾಬೊನ್ ದೇಶದ ಧ್ವಜವುಳ್ಳ ಈ ಹಡಗು ಯುಎಇಯ ಶಾರ್ಜಾ ಬಂದರಿನಿಂದ 6 ಸಾವಿರ ಟನ್ ಬಿಟುಮಿನ್ ತಂದಿದೆ. 10 ದಿನಗಳ ಹಿಂದೆ ಅಲ್ಲಿಂದ ಪ್ರಯಾಣ ಬೆಳೆಸಿತ್ತು' ಎಂದು ಬಂದರು ಜಲಸಾರಿಗೆ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.



ಕಾರವಾರ ವಾಣಿಜ್ಯ ಬಂದರಿಗೆ ಬಿಟುಮಿನ್ ಹೊತ್ತು ತಂದಿರುವ ಎಂಎಸ್‌ಜಿ ಸರಕು ಸಾಗಣೆ ಹಡಗು

ಮಾರ್ಚ್ 13ರಂದು ಯುಎಇಯಿಂದ ಚೆಂಗ್ ಎಕ್ಸ್ ಹೆಸರಿನ ಹಡಗು 3,100 ಟನ್ ಬಿಟುಮಿನ್ ತಂದಿತ್ತು. ಆ ಬಳಿಕ ಒಂದು ತಿಂಗಳಿನಿಂದ ಯಾವುದೇ ಹಡಗು ಬಂದಿರಲಿಲ್ಲ. ಪಶ್ಚಿಮ ಏಷ್ಯಾ ಸಂಘರ್ಷ ಆರಂಭಗೊಂಡ ಬಳಿಕ ಕಾರವಾರ ವಾಣಿಜ್ಯ ಬಂದರಿಗೆ ಬಂದಿರುವ ಮೂರನೇ ಹಡಗು ಇದು. 'ಯುದ್ಧ ನಡೆದಿರದಿದ್ದರೆ, ಈ ಅವಧಿಯಲ್ಲಿ ಸರಾಸರಿ 10ರಿಂದ 15 ಹಡಗುಗಳು ಬಿಟುಮಿನ್ ಹೊತ್ತು ಬಂದರಿಗೆ ಬರುತ್ತಿದ್ದವು' ಎಂದು ಅವರು ತಿಳಿಸಿದರು.

ವಿಮಾನಗಳ ರೆಕ್ಕೆಗಳು ಪರಸ್ಪರ ಡಿಕ್ಕಿ

ನವದೆಹಲಿ (ಪಿಟಿಐ): ದೆಹಲಿ ವಿಮಾನ ನಿಲ್ದಾಣದ 'ಟ್ಯಾಕ್ಸಿವೇ'ನಲ್ಲಿ ಗುರುವಾರ ಮಧ್ಯಾಹ್ನ ಆಕಾಸಾ ಏರ್ ಮತ್ತು ಸ್ಪೈಸ್‌ಜೆಟ್ ವಿಮಾನಗಳ ರೆಕ್ಕೆಗಳು ಪರಸ್ಪರ ಡಿಕ್ಕಿಯಾಗಿವೆ. ಇದರಿಂದ ಎರಡೂ ವಿಮಾನಗಳಿಗೆ ಹಾನಿಯಾಗಿದ್ದು, ಕೂಡಲೇ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ.

'ವಿಮಾನ ನಿಲ್ದಾಣದ ಟರ್ಮಿನಲ್ 1ರಲ್ಲಿ ಮಧ್ಯಾಹ್ನ 2.15ರ ಸುಮಾರಿಗೆ ಈ ಘಟನೆ ನಡೆದಿದೆ. ಈ ವೇಳೆ, ಆಕಾಸಾ ಏರ್ ವಿಮಾನವು ಟೇಕ್–ಆಫ್‌ಗೆ ತೆರಳುತ್ತಿತ್ತು. ಸ್ಪೈಸ್‌ಜೆಟ್ ವಿಮಾನವು ನಿಲುಗಡೆ ಸ್ಥಳದತ್ತ ಸಾಗುತ್ತಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಕಾಸಾ ಏರ್‌ನ ಕ್ಯೂಪಿ–1406 ವಿಮಾನವು ದೆಹಲಿಯಿಂದ ಹೈದರಾಬಾದ್‌ಗೆ ಕಾರ್ಯಾಚರಣೆ ನಡೆಸುತ್ತಿತ್ತು. ಸ್ಪೈಸ್‌ಜೆಟ್ ವಿಮಾನವು ಲೇಹ್‌ನಿಂದ ಬಂದಿತ್ತು.

ಲೈಂಗಿಕ ದೌರ್ಜನ್ಯ ಪ್ರಕರಣ: ಎಟಿಎಸ್, ಎನ್‌ಐಎ ನೆರವು ಕೇಳಿದ ಪೊಲೀಸರು

ಪ್ರಜಾವಾಣಿ ವಾರ್ತೆ

ನಾಸಿಕ್: ಟಾಟಾ ಕನ್ಸಲ್ಟೆನ್ಸಿ ಸರ್ವೀಸ್‌ನ(ಟಿಸಿಎಸ್) ಉದ್ಯೋಗಿಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಮತ್ತು ಬಲವಂತದ ಮತಾಂತರ ಮಾಡಲಾಗಿದೆ ಎಂಬ ಆರೋಪಗಳ ಕುರಿತ ತನಿಖೆಗೆ ನಾಸಿಕ್ ಪೊಲೀಸರು ರಾಜ್ಯ ಗುಪ್ತಚರ ವಿಭಾಗ(ಎಸ್‌ಐಡಿ), ಭಯೋತ್ಪಾದನಾ ನಿಗ್ರಹ ದಳ(ಎಟಿಎಸ್) ಮತ್ತು ರಾಷ್ಟ್ರೀಯ ತನಿಖಾ ದಳದ(ಎನ್‌ಐಎ) ಸಹಾಯವನ್ನು ಕೋರಿದ್ದಾರೆ.

ಪ್ರಕರಣದ ಕುರಿತ ಮಾಹಿತಿ ಸಂಗ್ರಹಕ್ಕೆ ರಾಷ್ಟ್ರೀಯ ಮಹಿಳಾ ಆಯೋಗವು ಸತ್ಯ ಶೋಧನಾ ಸಮಿತಿಯನ್ನು ಕಳುಹಿಸಲು ನಿರ್ಧರಿಸಿದೆ.

'ಎಸ್‌ಐಡಿ, ಎಟಿಎಸ್ ಮತ್ತು ಎನ್‌ಐಎಗೆ ಪ್ರಕರಣದ ಎಲ್ಲ ದಾಖಲೆಗಳನ್ನು ನೀಡಲಾಗಿದೆ. ಆರೋಪಿಗಳಿಗೆ ಅಕ್ರಮ ಚಟುವಟಿಕೆ ನಡೆಸಲು ಅಂತರ ರಾಷ್ಟ್ರೀಯ ಸಂಪರ್ಕ ಅಥವಾ ಬಾಹ್ಯ ಬೆಂಬಲ ಇದೆಯೇ ಎಂಬುವುದು ತನಿಖಾ ಸಂಸ್ಥೆಗಳು ಮಾಹಿತಿ ನೀಡಿದ ಬಳಿಕವಷ್ಟೆ ತಿಳಿಯಲಿದೆ' ಎಂದು ನಾಸಿಕ್ ಪೊಲೀಸ್ ಆಯುಕ್ತ ಸಂದೀಪ್ ಕಾರ್ಣಿಕ್ ಅವರು ತಿಳಿಸಿದ್ದಾರೆ.

'ಒಂಬತ್ತು ಕಿರಿಯ ಉದ್ಯೋಗಿಗಳು ನೀಡಿದ ದೂರಿನ ಆಧಾರದಲ್ಲಿ ಮಾರ್ಚ್ 26ರಿಂದ ಏಪ್ರಿಲ್ 3ರವರೆಗೆ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಂಬತ್ತು ಪ್ರಕರಣ ದಾಖಲಾಗಿದೆ' ಎಂದು ತಿಳಿಸಿದ್ದಾರೆ.

ಪ್ರಕರಣವು ಸೂಕ್ಷ್ಮವಾಗಿರುವುದರಿಂದ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತು ಡಿಐಜಿ ಸದಾನಂದ ದಾತೆ ಅವರು ನಾಸಿಕ್ ಪೊಲೀಸರಿಂದ ಪ್ರತಿನಿತ್ಯ ತನಿಖೆಯ ಮಾಹಿತಿ ಪಡೆಯುತ್ತಿದ್ದಾರೆ.

ಮಾಧ್ಯಮ ವರದಿಗಳ ಆಧಾರದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ. ನಿವೃತ್ತ ನ್ಯಾಯಮೂರ್ತಿ, ನಿವೃತ್ತ ಪೊಲೀಸ್ ಅಧಿಕಾರಿ, ಸುಪ್ರೀಂ ಕೋರ್ಟ್ ವಕೀಲರು ಮತ್ತು ಆಯೋಗದ ಸದಸ್ಯರನ್ನೊಳಗೊಂಡ ಸಮಿತಿಯು ನಾಸಿಕ್‌ನಲ್ಲಿರುವ ಟಿಸಿಎಸ್ ಕಂಪನಿಗೆ ಶುಕ್ರವಾರ ಭೇಟಿ ನೀಡಲಿದೆ.

ಬಲವಂತದ ಮತಾಂತರ: 'ಸುಪ್ರೀಂ'ಗೆ ಅರ್ಜಿ

ನವದೆಹಲಿ (ಪಿಟಿಐ): ಟಿಸಿಎಸ್ ಕಚೇರಿಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಮತ್ತು ಮತಾಂತರದ ಆರೋಪ ಕೇಳಿಬಂದಿರುವುದರಿಂದ ಬಲವಂತದ ಮತಾಂತರವನ್ನು ಭಯೋತ್ಪಾದನಾ ಕಾಯ್ದೆಯಡಿ ಪರಿಗಣಿಸುವಂತೆ ನಿರ್ದೇಶನ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಗುರುವಾರ ಅರ್ಜಿಯೊಂದು ಸಲ್ಲಿಕೆಯಾಗಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಲವಂತದ ಮತಾಂತರ ನಿಯಂತ್ರಣಕ್ಕೆ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಬೇಕೆಂದು ವಕೀಲರಾದ ಅಶ್ವಿನಿ ದುಬೆ ಅವರು ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಲೆಬನಾನ್ ಮೇಲೆ ದಾಳಿ ಮುಂದುವರಿಸಿದ ಇಸ್ರೇಲ್; ನಾಲ್ಕು ಸಾವು

ಟ್ರಂಪ್ ವಿರುದ್ಧದ ನಿರ್ಣಯ ತಿರಸ್ಕಾರ

ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧಕ್ಕೆ ತಡೆ ಹಾಕುವ ಡೆಮಾಕ್ರಟಿಕ್ ಪಕ್ಷದ ಪ್ರಯತ್ನವನ್ನು ರಿಪಬ್ಲಿಕನ್ ಪಕ್ಷದ ಸಂಸದರು ತಿರಸ್ಕರಿಸಿದ್ದಾರೆ.

'ಯುದ್ಧ ಅಧಿಕಾರ'ವನ್ನು ಅಮೆರಿಕದ ಅಧ್ಯಕ್ಷರಿಗೆ ಬಿಟ್ಟುಕೊಡುವಂತೆ ರಿಪಬ್ಲಿಕನ್ ಸಂಸದರು ಮತ ಚಲಾಯಿಸಿದ್ದಾರೆ.

'ಅಧ್ಯಕ್ಷರಿಗೆ ಇರುವ ಯುದ್ಧ ಅಧಿಕಾರ' ವಿಷಯದಲ್ಲಿ ಟ್ರಂಪ್ ವಿರುದ್ಧ ಈ ವರ್ಷ ಮಂಡನೆ ಆಗುತ್ತಿರುವ ನಾಲ್ಕನೆಯ ನಿರ್ಣಯ ಇದಾಗಿದೆ. ಈ ಬಾರಿ ಡೆಮಾಕ್ರಟಿಕ್ ಪಕ್ಷದ ಪರವಾಗಿ 47 ಹಾಗೂ ರಿಪಬ್ಲಿಕನ್ ಪರವಾಗಿ 52 ಮತಗಳು ಚಲಾವಣೆಗೊಂಡಿವೆ.

ಯುದ್ಧ ಅಧಿಕಾರವನ್ನು ಅಧ್ಯಕ್ಷರಿಗೆ ಬಿಟ್ಟುಕೊಡಬೇಕು ಎನ್ನುವುದರ ಪರವಾಗಿ ರಿಪಬ್ಲಿಕನ್ ಸಂಸದರು ಮತ ಚಲಾಯಿಸಿದ್ದರೂ, ಹೆಚ್ಚಿನ ಸಂಸದರು ಯುದ್ಧ ಆದಷ್ಟು ಬೇಗ ಕೊನೆಗೊಳ್ಳಬೇಕು ಎಂಬ ಅಭಿಪ್ರಾಯ ಹೊಂದಿದ್ದಾರೆ.

'ಯುದ್ಧದ ಅಧಿಕಾರವನ್ನು ಅಮೆರಿಕದ ಅಧ್ಯಕ್ಷರಿಗೆ ನೀಡುವುದು ಕಾನೂನುಬಾಹಿರ ಮತ್ತು ನ್ಯಾಯಸಮ್ಮತ ಅಲ್ಲ' ಎಂದು ಡೆಮಾಕ್ರಟಿಕ್ ಪಕ್ಷದ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ.

ಯುದ್ಧದ ಸಂದರ್ಭದಲ್ಲಿ ಟ್ರಂಪ್ ನಾಯಕತ್ವದಲ್ಲಿ ಹೆಚ್ಚಿನ ವಿಶ್ವಾಸ ಹೊಂದಿರುವುದಾಗಿ ಸಂಸದರು ಹೇಳಿದ್ದಾರೆ.

'ಪಶ್ಚಿಮ ಏಷ್ಯಾ ಸಂಘರ್ಷದ ವಿಷಯದಲ್ಲಿ ಗಡುವಿನ ನಂತರ ಈಗ ಅಂತಿಮ ನಿರ್ಧಾರ ಕೈಗೊಳ್ಳುವ ಸಮಯ ಹತ್ತಿರ ಬಂದಿದೆ' ಎಂದು ರಿಪಬ್ಲಿಕನ್ ಸಂಸದ ಥಾಮ್ ಟೆಲ್ಲಿಸ್ ಹೇಳಿದ್ದಾರೆ.


ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಲೆಬನಾನ್‌ನ ಕೆಫರ್ ಟಿಬ್ನಿಟ್ ಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ದಾಳಿ ಬಳಿಕ ದಟ್ಟ ಹೊಗೆ ಎದ್ದಿರುವುದು — ಎಎಫ್‌ಪಿ ಚಿತ್ರ

ಲೆಬನಾನ್ ಜತೆಗೆ ನಡೆಯುತ್ತಿರುವ ಮಾತುಕತೆಯು ಹಿಜ್ಬುಲ್ಲಾ ಬಂಡುಕೋರರ ನಿಶಸ್ತ್ರೀಕರಣ ಮತ್ತು ಸುಸ್ಥಿರ ಶಾಂತಿ ಮರುಸ್ಥಾಪನೆ ಎಂಬ ಎರಡು ಗುರಿಗಳನ್ನು ಒಳಗೊಂಡಿದೆ

ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

ಲೆಬನಾನ್ ಮೇಲೆ ಇಸ್ರೇಲ್ ದಾಳಿ

ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಗುರುವಾರ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಲೆಬನಾನ್‌ನ ನಾಲ್ವರು ರಕ್ಷಣಾ ಕಾರ್ಯಕರ್ತರು ಮೃತಪಟ್ಟಿದ್ದಾರೆ. ಆರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಉಭಯ ದೇಶಗಳು ವಾಷಿಂಗ್ಟನ್‌ನಲ್ಲಿ ಐತಿಹಾಸಿಕ ಮಾತುಕತೆ ನಡೆಸಿದ ಬೆನ್ನಲ್ಲೇ ದಾಳಿ ನಡೆದಿದೆ.

ದಾಳಿ ಬಗ್ಗೆ ಪರಿಶೀಲಿಸುವುದಾಗಿ ಇಸ್ರೇಲ್ ಹೇಳಿದೆ. 'ಇದು ಅಂತರರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಹೇಳಿದೆ.

ಕದನ ವಿರಾಮ–ಲೆಬನಾನ್ ಸ್ವಾಗತ

ಬೈರೂತ್ (ಎಪಿ): ಇಸ್ರೇಲ್ ಹಾಗೂ ತಮ್ಮ ದೇಶದ ನಡುವೆ ಕದನ ವಿರಾಮ ಏರ್ಪಟ್ಟಿರುವುದನ್ನು ಲೆಬನಾನ್‌ನ ಪ್ರಧಾನಿ ನವಾಫ್ ಸಲಾಂ ಸ್ವಾಗತಿಸಿದ್ದಾರೆ.

'ಹೊರ್ಮುಜ್ ಮುಕ್ತಗೊಳಿಸಿ'

ದುಬೈ(ಎಪಿ): ಹೊರ್ಮುಜ್ ಜಲಸಂಧಿ ವಿಷಯದಲ್ಲಿ ಇರಾನ್ ಸಾರ್ವಭೌಮತೆ, ಭದ್ರತೆ ಮತ್ತು ಕಾನೂನುಬದ್ಧ ಹಕ್ಕುಗಳನ್ನು ಗೌರವಿಸುವುದರ ಜತೆಯಲ್ಲೇ, ಈ ಮಾರ್ಗದಲ್ಲಿ ಎಲ್ಲ ದೇಶಗಳಿಗೆ ಸಂಚಾರ ಸ್ವಾತಂತ್ರ್ಯ ಮತ್ತು ಸುರಕ್ಷತೆಯನ್ನು ಖಾತರಿಪಡಿಸಬೇಕು' ಎಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ, ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರಿಗೆ ದೂರವಾಣಿ ಕರೆ ಮೂಲಕ ಮನವಿ ಮಾಡಿದ್ದಾರೆ.

'ಒಪ್ಪಂದ ಸನ್ನಿಹಿತ'

ಒಂದನೇ ಪುಟದಿಂದ...

ಇರಾನ್ ಜೊತೆಗಿನ ಕದನವಿರಾಮವು ಇದೇ ಏಪ್ರಿಲ್ 21ಕ್ಕೆ ಕೊನೆಗೊಳ್ಳಲಿದ್ದು, ಅದನ್ನು ವಿಸ್ತರಿಸುವ ಸಾಧ್ಯತೆ ಕಾಣುತ್ತಿಲ್ಲ. ಅದಕ್ಕೂ ಮುಂಚಿತವಾಗಿಯೇ ಒಪ್ಪಂದ ಏರ್ಪಡುವ ಸಾಧ್ಯತೆಯಿದೆ.

ಅಮೆರಿಕ ಹಾಗೂ ಇರಾನ್ ನಡುವಿನ ಸಭೆಯು ಈ ವಾರಾಂತ್ಯದಲ್ಲಿ ನಡೆಯಲಿದೆ.

'ಇರಾನ್ ಜೊತೆಗೆ ಒಪ್ಪಂದ ಏರ್ಪಡದಿದ್ದರೆ, ಯುದ್ಧವು ಮತ್ತೆ ಆರಂಭಗೊಳ್ಳಲಿದೆ. ಹೊರ್ಮುಜ್ ಜಲಸಂಧಿಯಲ್ಲಿ ಅಮೆರಿಕದ ನಿರ್ಬಂಧವೂ ಮುಂದುವರಿಯಲಿದೆ' ಎಂದು ಟ್ರಂಪ್ ಈ ವೇಳೆ ಸ್ಪಷ್ಟಪಡಿಸಿದ್ದಾರೆ.

ಇಸ್ರೇಲ್, ಅಮೆರಿಕ ಗುರಿ ಒಂದೇ; ನೆತನ್ಯಾಹು

ಜೆರುಸಲೇಂ (ಪಿಟಿಐ): 'ಇಸ್ರೇಲ್ ಮತ್ತು ಅಮೆರಿಕದ ಗುರಿಗಳು ಒಂದೇ, ಯಾವುದೇ ಸನ್ನಿವೇಶಕ್ಕೂ ಸಿದ್ಧ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

'ಇರಾನ್ ಯುರೇನಿಯಂ ಸಮೃದ್ಧೀಕರಣವನ್ನು ತಡೆಯುವುದು ಮತ್ತು ಕಡಲ ಮಾರ್ಗವನ್ನು ಮುಕ್ತಗೊಳಿಸುವುದು ಅಮೆರಿಕ ಮತ್ತು ಇಸ್ರೇಲ್‌ನ ಪ್ರಮುಖ ಗುರಿಗಳಾಗಿವೆ' ಎಂದು ನೆತನ್ಯಾಹು ಪುನರುಚ್ಚರಿಸಿದ್ದಾರೆ.

'ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಇರಾನ್‌ನಿಂದ ಪೂರ್ಣವಾಗಿ ತೆಗೆದುಹಾಕುತ್ತೇವೆ ಹಾಗೂ ಆ ದೇಶದ ಯುರೇನಿಯಂ ಸಮೃದ್ಧೀಕರಣ ಸಾಮರ್ಥ್ಯವನ್ನು ನಾಶ ಪಡಿಸುತ್ತೇವೆ. ಆದರೆ, ಇದು ಹೇಗೆ ಎನ್ನುವುದನ್ನು ಇಷ್ಟು ಬೇಗ ಹೇಳಲು ಆಗುವುದಿಲ್ಲ' ಎಂದು ಅವರು ಹೇಳಿದ್ದಾರೆ.

ದಿಗ್ಬಂಧನ ತೆರವುಗೊಳಿಸದಿದ್ದರೆ ಅಡ್ಡಿ: ಅಮೆರಿಕದ ನೌಕಾ ದಿಗ್ಬಂಧನಕ್ಕೆ ಪ್ರತಿಯಾಗಿ ಪಶ್ಚಿಮ ಏಷ್ಯಾ ವಲಯದ ವ್ಯಾಪಾರಕ್ಕೆ ಅಡ್ಡಿಪಡಿಸುವುದಾಗಿ ಇರಾನ್ ಬೆದರಿಕೆ ಒಡ್ಡಿದೆ.

'ಇರಾನ್ ಬಂದರುಗಳ ಮೇಲೆ ಅಮೆರಿಕ ಹೇರಿರುವ ದಿಗ್ಬಂಧನ ತೆರವುಗೊಳಿಸದಿದ್ದರೆ ಕೊಲ್ಲಿ ದೇಶಗಳ ವ್ಯಾಪಾರಕ್ಕೆ ಅಡ್ಡಿಪಡಿಸುವುದಾಗಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ ಹೇಳಿದೆ.

ಶ್ವೇತಭವನಕ್ಕೆ ಆಹ್ವಾನ: ಕದನ ವಿರಾಮಕ್ಕೆ ಒಪ್ಪಿಕೊಂಡ ನಂತರ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಅವರನ್ನು ಶ್ವೇತಭವನಕ್ಕೆ ಆಹ್ವಾನಿಸಿದ್ದೇನೆ' ಎಂದು ಟ್ರಂಪ್ ಟ್ರೂಥ್ ಸೋಷಿಯಲ್ ತಾಣದಲ್ಲಿ ಹೇಳಿದ್ದಾರೆ.

'ಅಮ್ಮನ ಮಮತೆ'
ಚಿಕ್ಕಮಗಳೂರಿನಲ್ಲಿ ಇಟ್ಟಿಗೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬರು ತನ್ನ ಮಗುವನ್ನು ಸಮಾಧಾನಪಡಿಸಿದ ದೃಶ್ಯ




ಕ್ಷೇತ್ರ ಮರುವಿಂಗಡಣೆಯಲ್ಲಿ ತಾರತಮ್ಯ ಇಲ್ಲ: ಪ್ರಧಾನಿ ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ಷೇತ್ರ ಮರುವಿಂಗಡಣೆ ಸಂದರ್ಭದಲ್ಲಿ ದೊಡ್ಡ ಅಥವಾ ಸಣ್ಣ, ಉತ್ತರ ಅಥವಾ ದಕ್ಷಿಣ, ಪೂರ್ವ ಅಥವಾ ಪಶ್ಚಿಮದ ಯಾವುದೇ ರಾಜ್ಯಗಳ ವಿರುದ್ಧ ತಾರತಮ್ಯ ಮಾಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು. ಈ ಸುಧಾರಣೆ ವಿರೋಧಿಸುವವರನ್ನು ದೇಶದ ಮಹಿಳೆಯರು ಕ್ಷಮಿಸುವುದಿಲ್ಲ ಎಂದು ಅವರು ಎಚ್ಚರಿಸಿದರು.

ಲೋಕಸಭೆಯಲ್ಲಿ ಮೂರು ಮಸೂದೆಗಳ ಮೇಲಿನ ಚರ್ಚೆಯ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಅವರು, ಕ್ಷೇತ್ರ ಪುನರ್ ವಿಂಗಡಣೆಯಿಂದ ಯಾವುದೇ ರಾಜ್ಯದ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆ ಆಗುವುದಿಲ್ಲ ಎಂದರು.


ಮೋದಿ

ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿಯನ್ನು ಆದಷ್ಟು ಬೇಗ ಜಾರಿಗೆ ತರುವ ಬಗ್ಗೆ ಒಮ್ಮತಕ್ಕೆ ಕರೆ ನೀಡಿದ ಅವರು, '2029ರಲ್ಲಿ ಮಹಿಳಾ ಮೀಸಲಾತಿ ಕಾನೂನನ್ನು ಅನುಷ್ಠಾನಗೊಳಿಸಿದ ಕೀರ್ತಿಯನ್ನು ಪಡೆಯಲು ಆಡಳಿತ ಪಕ್ಷ ಬಯಸುವುದಿಲ್ಲ. ಯಶಸ್ಸು ಎಲ್ಲ ನಾಗರಿಕರಿಗೆ ಮತ್ತು ಅಂತಿಮವಾಗಿ ಭಾರತದ ಪ್ರಜಾಪ್ರಭುತ್ವಕ್ಕೆ ಸಲ್ಲುತ್ತದೆ' ಎಂದರು.

'ನೀವು ಮಸೂದೆಯನ್ನು ವಿರೋಧಿಸಿದರೆ, ನಾನು ರಾಜಕೀಯ ಲಾಭ ಪಡೆಯುವುದು ಸಹಜ. ಆದರೆ, ನೀವು ಜೊತೆಯಾಗಿ ಸಾಗಿದರೆ, ಯಾರಿಗೂ ಯಾವುದೇ ರಾಜಕೀಯ ಲಾಭ ಸಿಗುವುದಿಲ್ಲ' ಎಂದು ವಿಪಕ್ಷ ಸದಸ್ಯರನ್ನು ಉದ್ದೇಶಿಸಿ ಹೇಳಿದರು. 'ಇಲ್ಲಿ ಯಾರಾದರೂ ತಮ್ಮ ಫೋಟೊ ಪ್ರಕಟಿಸಬಹುದು. ಶ್ರೇಯಸ್ಸು ಪಡೆಯಲು ನಾನು ನಿಮಗೆ ಖಾಲಿ ಚೆಕ್ ನೀಡುತ್ತೇನೆ' ಎಂದು ಅವರು ಹೇಳಿದರು.

'ಖಾತರಿ (ಗ್ಯಾರಂಟಿ)' ಎಂಬ ಪದದ ಅಗತ್ಯವಿದ್ದರೆ, ನಾನು 'ಖಾತರಿ' ಎಂಬ ಪದ ಬಳಸುತ್ತೇನೆ. ನೀವು ಭರವಸೆಯ ಬಗ್ಗೆ ಮಾತನಾಡಿದರೆ, ನಾನು 'ಭರವಸೆ' ಎಂಬ ಪದ ಬಳಸುತ್ತೇನೆ. ತಮಿಳಿನಲ್ಲಿ ಇದಕ್ಕಿಂತ ಉತ್ತಮವಾದ ಪದವಿದ್ದರೆ, ನಾನು ಅದನ್ನು ಬಳಸಲು ಸಿದ್ಧನಿದ್ದೇನೆ. ಉದ್ದೇಶ ಸ್ಪಷ್ಟವಾಗಿದ್ದರೆ, ನಾವು ಪದಗಳೊಂದಿಗೆ ಆಟವಾಡುವ ಅಗತ್ಯವಿಲ್ಲ' ಎಂದು ಮೋದಿ ಹೇಳಿದರು.

ಈ ವಿಷಯವನ್ನು ರಾಜಕೀಯ ತಕ್ಕಡಿಯಲ್ಲಿ ತೂಗಬೇಡಿ ಎಂದು ಮನವಿ ಮಾಡುತ್ತಿದ್ದೇನೆ. ಇದು ರಾಷ್ಟ್ರೀಯ ಹಿತಾಸಕ್ತಿಯ ನಿರ್ಧಾರ. ದೇಶದಾದ್ಯಂತ ಮತ್ತು ಪ್ರಪಂಚದಾದ್ಯಂತದ ಮಹಿಳೆಯರು ನಮ್ಮನ್ನು ಗಮನಿಸುತ್ತಿದ್ದಾರೆ. ನಮ್ಮ ಉದ್ದೇಶದಲ್ಲಿ ಯಾವುದೇ ದೋಷವಿದ್ದರೆ, ಈ ದೇಶದ ಮಹಿಳೆಯರು ಎಂದಿಗೂ ಕ್ಷಮಿಸುವುದಿಲ್ಲ' ಎಂದು ಅವರು ಹೇಳಿದರು.

ಪ್ರಜಾಪ್ರಭುತ್ವ ನಾಶ: ಪ್ರಿಯಾಂಕಾ ಕಳವಳ



ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕಾರವಾದರೆ, ಭಾರತದಲ್ಲಿ ಪ್ರಜಾಪ್ರಭುತ್ವ ಅಂತ್ಯಗೊಳ್ಳುತ್ತದೆ ಎಂದು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಕಳವಳ ವ್ಯಕ್ತಪಡಿಸಿದರು.

ಚುನಾವಣಾ ಆಯೋಗ ಮತ್ತು ನ್ಯಾಯಾಂಗದ ಮೇಲೆ ಒತ್ತಡ ಹೇರುವ ಮೂಲಕ ಸರ್ಕಾರವು ಪ್ರಜಾಪ್ರಭುತ್ವ ಕೊನೆಗೊಳಿಸಲು ಪ್ರಾರಂಭಿಸಿದೆ. ಆದರೆ, ಈಗ ಸಂವಿಧಾನ ತಿದ್ದುಪಡಿ ಮಸೂದೆಯೊಂದಿಗೆ ಪ್ರಜಾಪ್ರಭುತ್ವದ ಮೇಲೆ ಬಹಿರಂಗ ದಾಳಿ ನಡೆಸಲಾಗಿದೆ ಎಂದು ಅವರು ಕಿಡಿಕಾರಿದರು.

'ಧರ್ಮಾಧಾರಿತ ಮೀಸಲಾತಿಗೆ ಅವಕಾಶವಿಲ್ಲ'

ಮುಸ್ಲಿಂ ಮಹಿಳೆಯರಿಗೆ ಕೋಟಾ: ಎಸ್‌ಪಿ ಸಂಸದನ ಬೇಡಿಕೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮುಸ್ಲಿಂ ಮಹಿಳೆಯರಿಗೆ ಕೋಟಾ ನೀಡಬೇಕೆಂಬ ಸಮಾಜವಾದಿ ಪಕ್ಷದ ಸಂಸದ ಧರ್ಮೇಂದ್ರ ಯಾದವ್ ಬೇಡಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಧರ್ಮದ ಆಧಾರದಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡಲು ಸಾಧ್ಯವಿಲ್ಲ. ಅಂತಹ ಮೀಸಲಾತಿ ಸಂವಿಧಾನಬಾಹಿರ' ಎಂದರು.

ಲೋಕಸಭೆಯಲ್ಲಿ ಮೂರು ಮಸೂದೆಗಳ ಮಂಡನೆ ವಿರೋಧಿಸಿದ ಯಾದವ್, 'ಕ್ಷೇತ್ರ ಪುನರ್ ವಿಂಗಡಣೆಯನ್ನು ಮಹಿಳಾ ಮೀಸಲಾತಿಯೊಂದಿಗೆ ಜೋಡಿಸುವುದು ಸಂವಿಧಾನದ ಆಶಯಕ್ಕೆ ವಿರುದ್ಧ' ಎಂದು ಪ್ರತಿಪಾದಿಸಿದರು.

'ಕಾಶ್ಮೀರ ಹಾಗೂ ಅಸ್ಸಾಂನಲ್ಲಿ ಮಾಡಿದ್ದನ್ನು ಮಹಿಳಾ ಮೀಸಲಾತಿ ಹೆಸರಿನಲ್ಲಿ ಇಡೀ ದೇಶದಲ್ಲಿ ಮಾಡಲು ಸರ್ಕಾರ ಹೊರಟಿದೆ. ಒಬಿಸಿ ಮಹಿಳೆಯರಿಗೆ, ಮುಸ್ಲಿಂ ಮಹಿಳೆಯರಿಗೆ ಯಾವುದೇ ಕೋಟಾ ಇಲ್ಲದಿದ್ದರೆ ಸಮಾಜವಾದಿ ಪಕ್ಷವು ಈ ಮಸೂದೆಯನ್ನು ಬೆಂಬಲಿಸುವುದಿಲ್ಲ ಎಂದರು.

ಯಾದವ್ ಅವರ ಬೇಡಿಕೆಯನ್ನು ಸಂವಿಧಾನಬಾಹಿರ ಎಂದು ಕರೆದ ಶಾ, 'ನಮ್ಮ ಸಂವಿಧಾನವು ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಅವಕಾಶ ನೀಡುವುದಿಲ್ಲ. ಇದು ನಮ್ಮ ಸರ್ಕಾರದ ನಿಲುವು' ಎಂದು ಸ್ಪಷ್ಟಪಡಿಸಿದರು.

ಜನಗಣತಿಯ ಜತೆಗೆ ಜಾತಿ ಗಣತಿಯನ್ನೂ ನಡೆಸಲಾಗುವುದು ಎಂದು ಪುನರುಚ್ಚರಿಸಿದ ಅವರು, 'ಇದೀಗ ಮನೆಗಳ ಎಣಿಕೆ ನಡೆಯುತ್ತಿದೆ ಮತ್ತು ಮನೆಗಳಲ್ಲಿ ಯಾವುದೇ ಜಾತಿ ಇಲ್ಲ' ಎಂದರು.

ಮುಸ್ಲಿಂ ಮಹಿಳೆಯರ ಬಗ್ಗೆ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಉಲ್ಲೇಖಿಸಿದಾಗ ಶಾ, 'ಸಮಾಜವಾದಿ ಪಕ್ಷವು ತನ್ನ ಎಲ್ಲ ಟಿಕೆಟ್‌ಗಳನ್ನು ಮುಸ್ಲಿಂ ಮಹಿಳೆಯರಿಗೆ ನೀಡಿದರೆ, ನಾವು ಆಕ್ಷೇಪ ವ್ಯಕ್ತಪಡಿಸುವುದಿಲ್ಲ' ವ್ಯಂಗ್ಯವಾಡಿದರು.

'ಎಷ್ಟು ಮಹಿಳಾ ಸಿ.ಎಂ.ಗಳಿದ್ದಾರೆ'

'21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಿಜೆಪಿ ಸರ್ಕಾರವಿದೆ. ಅವರಲ್ಲಿ ಎಷ್ಟು ಮಂದಿ ಮಹಿಳಾ ಮುಖ್ಯಮಂತ್ರಿಗಳಿದ್ದಾರೆ? ದೆಹಲಿಯಲ್ಲಿರುವವರು ಅರ್ಧ ಮುಖ್ಯಮಂತ್ರಿ (ರೇಖಾ ಗುಪ್ತಾ). ಅವರಿಗೆ ಹಕ್ಕುಗಳು ಹಾಗೂ ಅಧಿಕಾರಗಳು ಇವೆಯೇ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಪ್ರಶ್ನಿಸಿದರು.

ಮಹಿಳಾ ಮೀಸಲಾತಿಗೆ ಮೊದಲು ಜನಗಣತಿಯನ್ನು ಕೈಗೆತ್ತಿಕೊಳ್ಳುವ ಅಗತ್ಯ ಒತ್ತಿ ಹೇಳಿದ ಅವರು, 'ಮೊದಲು ಜನಗಣತಿ ನಡೆಸಬೇಕು. ಇದರಿಂದ ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳು ದೊರೆಯುತ್ತವೆ. ಜನರು ಜನಗಣತಿ ಅಥವಾ ಜಾತಿ ಜನಗಣತಿಯಿಂದ ವಂಚಿತರಾಗಬಾರದು. ಇದಲ್ಲದೆ, ಈ ಮೀಸಲಾತಿಯಲ್ಲಿ ಮುಸ್ಲಿಂ ಮತ್ತು ಒಬಿಸಿ ಮಹಿಳೆಯರನ್ನು ಸೇರಿಸಬೇಕು' ಎಂದು ಅವರು ಆಗ್ರಹಿಸಿದರು.

'850 ಕ್ಷೇತ್ರಗಳು–ನಾಗ್ಪುರದ ಶಿಫಾರಸೇ'

'ಕ್ಷೇತ್ರ ಪುನರ್ ವಿಂಗಡಣೆಯ ಬಳಿಕ ಕ್ಷೇತ್ರಗಳ ಸಂಖ್ಯೆ 850ಕ್ಕೆ ಏರಲಿದೆ ಎಂದು ಸರ್ಕಾರ ಹೇಳಿದೆ. ಇದಕ್ಕೆ ಮಾನದಂಡವೇನು? ಈ ಸಂಖ್ಯೆ ನಾಗ್ಪುರದಿಂದ ಬಂದಿದೆಯಾ ಅಥವಾ ಆಕಾಶದಿಂದ ಬಿದ್ದಿದೆಯಾ' ಎಂದು ಲೋಕಸಭೆಯ ವಿರೋಧ ಪಕ್ಷದ ಉಪನಾಯಕ ಗೌರವ್ ಗೊಗೊಯ್ ವ್ಯಂಗ್ಯವಾಗಿ ಪ್ರಶ್ನಿಸಿದರು.

ಮಹಿಳಾ ಮೀಸಲಾತಿ ಹೆಸರಿನಲ್ಲಿ ಸರ್ಕಾರವು ಕ್ಷೇತ್ರ ಪುನರ್ ವಿಂಗಡಣೆಯನ್ನು ಬುಲ್ಡೋಜ್ ಮಾಡಲು ಬಯಸುತ್ತಿದೆ ಎಂದು ಆರೋಪಿಸಿದ ಅವರು, ಮಹಿಳಾ ಕೋಟಾ ಕಾನೂನನ್ನು ಜಾರಿಗೆ ತರುವ ನೈಜ ಕಾಳಜಿ ಸರ್ಕಾರಕ್ಕೆ ಇದ್ದರೆ, ಲೋಕಸಭೆಯ ಪ್ರಸ್ತುತ ಬಲದ ಆಧಾರದಲ್ಲೇ ಅದನ್ನು ತಕ್ಷಣವೇ ಜಾರಿಗೊಳಿಸಬೇಕು ಎಂದು ಅವರು ಆಗ್ರಹಿಸಿದರು.

ಬಿಜೆಪಿ ತನ್ನ ಪ್ರಭಾವವನ್ನು ಹೆಚ್ಚಿಸಲು ಕ್ಷೇತ್ರ ಪುನರ್ ವಿಂಗಡಣೆಯನ್ನು ರಾಜಕೀಯ ಅಸ್ತ್ರವಾಗಿ ಬಳಸುತ್ತಿದೆ ಅವರು ದೂಷಿಸಿದರು.

ಈ ಮಸೂದೆಗಳು ಮಹಿಳಾ ವಿರೋಧಿ, ಜಾತಿ ಜನಗಣತಿ ವಿರೋಧಿ, ಸಂವಿಧಾನ ವಿರೋಧಿ ಮತ್ತು ದೇಶದ ಒಕ್ಕೂಟ ವ್ಯವಸ್ಥೆ ವಿರೋಧಿ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ರಾಜ್ಯಕ್ಕೆ ನಷ್ಟ ಇಲ್ಲ'

ಕ್ಷೇತ್ರ ಪುನರ್ ವಿಂಗಡಣೆ ಬಳಿಕ ಲೋಕಸಭೆಯ ಸದಸ್ಯ ಬಲ 815ಕ್ಕೆ ಏರಿಕೆಯಾಗಲಿದ್ದು, ಅದರಲ್ಲಿ 272 ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿರುತ್ತವೆ. ಈ ಕೋಟಾ ಅನುಷ್ಠಾನದಿಂದಾಗಿ ಪುರುಷರಿಗಾಗಲಿ ಅಥವಾ ಯಾವುದೇ ರಾಜ್ಯಕ್ಕೆ ನಷ್ಟ ಉಂಟಾಗುವುದಿಲ್ಲ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಸ್ಪಷ್ಟಪಡಿಸಿದರು.

ಲೋಕಸಭೆ, ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳಾ ಕೋಟಾದೊಳಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಿಗೆ ಮೀಸಲಾತಿ ಇರುತ್ತದೆ ಎಂದರು.

ರಾಜ್ಯ ವಿಭಜನೆ: ತೇಜಸ್ವಿ ವಿವಾದ



ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆ ವಿರೋಧಿಸಿ ಕಾಂಗ್ರೆಸ್ ಮುಖಂಡರು ನವದೆಹಲಿಯಲ್ಲಿ ಗುರುವಾರ ಪ್ರತಿಭಟಿಸಿದರು — ಪಿಟಿಐ ಚಿತ್ರ

ಆಂಧ್ರ ಪ್ರದೇಶ ಹಾಗೂ ತೆಲಂಗಾಣ ವಿಭಜನೆಯನ್ನು ಭಾರತ–ಪಾಕಿಸ್ತಾನ ವಿಭಜನೆಗೆ ಹೋಲಿಸಿ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ನೀಡಿದ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ತೇಜಸ್ವಿ ಹೇಳಿಕೆಯನ್ನು ಕಾಂಗ್ರೆಸ್ ಹಾಗೂ ಬಿಆರ್‌ಎಸ್ ನಾಯಕರು ಖಂಡಿಸಿದ್ದಾರೆ.

ಲೋಕಸಭೆಯಲ್ಲಿ ಮೂರು ಮಸೂದೆಗಳ ಮೇಲಿನ ಚರ್ಚೆ ಸಂದರ್ಭದಲ್ಲಿ ಮಾತನಾಡಿದ ತೇಜಸ್ವಿ ಸೂರ್ಯ, 'ನಿಮಗೆ ನೆನಪಿರಬಹುದು. ಕೇಂದ್ರದ ಯುಪಿಎ ಸರ್ಕಾರವು ಅವಿಭಜಿತ ಆಂಧ್ರ ಪ್ರದೇಶವನ್ನು ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಾಗಿ ವಿಭಜಿಸಿತು. ಇದು ಬ್ರಿಟಿಷರು ನಡೆಸಿದ್ದ ಭಾರತ–ಪಾಕಿಸ್ತಾನ ವಿಭಜನೆಗಿಂತ ಕೆಟ್ಟದಾಗಿತ್ತು. ಕಾಂಗ್ರೆಸ್‌ನವರು ಇಂತಹ ಪರಂಪರೆ ಹೊಂದಿದ್ದಾರೆ' ಎಂದು ಟೀಕಿಸಿದರು. ಅವರ ಹೇಳಿಕೆಯನ್ನು ಕಡತದಿಂದ ತೆಗೆದು ಹಾಕಬೇಕು. ತೇಜಸ್ವಿ ಕ್ಷಮೆಯಾಚಿಸಬೇಕು ಎಂದು ಕಾಂಗ್ರೆಸ್ ನಾಯಕರು ಒತ್ತಾಯಿಸಿದ್ದಾರೆ.

ರಾಜ್ಯಕ್ಕೆ ಅನ್ಯಾಯವಾದರೆ ನಾನೇ ಧ್ವನಿ ಎತ್ತುವೆ: ತೇಜಸ್ವಿ

'ಕ್ಷೇತ್ರ ಪುನರ್ ವಿಂಗಡಣೆಯಿಂದಾಗಿ ಕರ್ನಾಟಕಕ್ಕೆ ಗುಲಗಂಜಿಯಷ್ಟು ಅನ್ಯಾಯವಾದರೆ ನಾನೇ ಮೊದಲು ಧ್ವನಿ ಎತ್ತುತ್ತೇನೆ' ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

'ಈಗಿನ ಲೋಕಸಭೆಯಲ್ಲಿ ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯ ಶೇ 23.7ರಷ್ಟು ಇದೆ. ಕ್ಷೇತ್ರ ಪುನರ್ ವಿಂಗಡಣೆಯ ಬಳಿಕವೂ ಈ ಪ್ರಾತಿನಿಧ್ಯ ಶೇ 23.7 ಇರಲಿದೆ. ಕ್ಷೇತ್ರ ಪುನರ್ ವಿಂಗಡಣೆಯಿಂದ ಕೇರಳ ಹಾಗೂ ತಮಿಳುನಾಡಿನಂತಹ ರಾಜ್ಯಗಳಿಗೆ ಹೆಚ್ಚು ಅನುಕೂಲವಾಗಲಿದೆ. ಆದರೆ, ಕಳೆದ ಮೂರು ದಿನಗಳಿಂದ ವಿರೋಧ ಪಕ್ಷಗಳು ಸುಳ್ಳು ಅಂಕಿ ಅಂಶಗಳನ್ನು ಹೇಳಿ ದಕ್ಷಿಣ ಭಾರತದ ಜನರನ್ನು ದಾರಿ ತಪ್ಪಿಸುತ್ತಿವೆ. ಜಿಎಸ್‌ಡಿಪಿ ಆಧಾರದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ನಡೆಸಬೇಕೆಂಬ ತೆಲಂಗಾಣದ ಮುಖ್ಯಮಂತ್ರಿಯ ಹೇಳಿಕೆ ಮೂರ್ಖತನದ್ದು' ಎಂದು ಕಿಡಿಕಾರಿದರು.



ತಮಿಳುನಾಡಿನ ನಾಮಕ್ಕಲ್‌ನಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು 'ಕ್ಷೇತ್ರ ಪುನರ್‌ವಿಂಗಡಣೆ ಮಸೂದೆ'ಯ ಪ್ರತಿಯನ್ನು ಸುಟ್ಟುಹಾಕಿದರು –ಪಿಟಿಐ ಚಿತ್ರ

ಮಸೂದೆ ಪ್ರತಿ ಸುಟ್ಟ ಸ್ಟಾಲಿನ್

ಚೆನ್ನೈ/ನಾಮಕ್ಕಲ್ (ಪಿಟಿಐ): 'ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಯು ಕರಾಳ ಶಾಸನ' ಎಂದು ಆರೋಪಿಸಿರುವ ತಮಿಳು ನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಗುರುವಾರ ಮಸೂದೆಯ ಪ್ರತಿಯನ್ನು ಸುಟ್ಟು ಹಾಕಿದ್ದಾರೆ.

'ಕೇಂದ್ರ ಸರ್ಕಾರವು ತಮಿಳಿಗರನ್ನು ಅವರ ಸ್ವಂತ ನೆಲದಲ್ಲೇ ನಿರಾಶ್ರಿತರನ್ನಾಗಿ ಮಾಡಲು ಪ್ರಯತ್ನಿಸುತ್ತಿದೆ' ಎಂದೂ ಆರೋಪಿಸಿದ್ದಾರೆ.

ಸಂಸತ್ತಿನಲ್ಲಿ ವಿಶೇಷ ಅಧಿವೇಶನ ಆರಂಭವಾಗುವ ಕೆಲ ಗಂಟೆಗಳ ಮುನ್ನ ಸ್ಟಾಲಿನ್ ಅವರು ಕಪ್ಪು ಬಾವುಟ ಹಾರಿಸಿ, ಮಸೂದೆಯ ಪ್ರತಿಯನ್ನು ಸುಟ್ಟುಹಾಕಿದ್ದಾರೆ.

ನಾಮಕ್ಕಲ್‌ನಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ಸ್ಟಾಲಿನ್, 'ನಾವು ಹೋರಾಡೋಣ, ಒಟ್ಟಾಗಿ ಗೆಲ್ಲೋಣ' ಎಂಬ ಘೋಷಣೆಗಳನ್ನೂ ಹಾಕಿದ್ದಾರೆ.

'ರಾಜ್ಯದಾದ್ಯಂತ ಪ್ರತಿರೋಧದ ಜ್ವಾಲೆ ಹರಡಲಿ. ಫ್ಯಾಸಿಸ್ಟ್ ಬಿಜೆಪಿಯ ಅಹಂಕಾರವು ಕೊನೆಗೊಳ್ಳಲಿ. ಅಂದು ತಮಿಳುನಾಡಿನಿಂದ ಎದ್ದ ಹಿಂದಿ ಹೇರಿಕೆ ವಿರುದ್ಧದ ಪ್ರತಿರೋಧದ ಕಿಚ್ಚು ದೆಹಲಿಯನ್ನೇ ಸುಟ್ಟು ಹಾಕಿತ್ತು. ದೆಹಲಿಯು ಮಣಿದ ನಂತರವೇ ಆ ಕಿಚ್ಚು ಶಾಂತವಾಗಿತ್ತು' ಎಂದು ಸ್ಟಾಲಿನ್ ತಿಳಿಸಿದ್ದಾರೆ.

'ಇಂದು, ಈ ಕರಾಳ ಶಾಸನದ ವಿರುದ್ಧ ಕಪ್ಪು ಬಾವುಟ ಹಾರಿಸುವ ಮೂಲಕ ನಾನು ಆ ಕಿಚ್ಚನ್ನು ಮತ್ತೆ ಹೊತ್ತಿಸಿದ್ದೇನೆ. ಅದು ಈಗ ದ್ರಾವಿಡ ನೆಲದಲ್ಲಿ ಹರಡಲಿದೆ. ಅದು ಏಳಲಿದೆ, ಜ್ವಾಲೆಯಾಗಿ ಉರಿಯಲಿದೆ. ಬಿಜೆಪಿಯ ಅಹಂಕಾರ ಮಣಿಸಲಿದೆ' ಎಂದಿದ್ದಾರೆ.

'ಪ್ರಾತಿನಿಧ್ಯ ಕಡಿಮೆ ಮಾಡಲು ಯತ್ನ'

ಮದುರೈ (ಪಿಟಿಐ): ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಯನ್ನು ವಿರೋಧಿಸಿ ತಮಿಳುನಾಡಿನ ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರು ಕಪ್ಪು ಬಣ್ಣದ ಅಂಗಿ ಧರಿಸುವ ಮೂಲಕ, ತಮ್ಮ ಪಕ್ಷದ ಅಭ್ಯರ್ಥಿ ಪರ ಗುರುವಾರ ಪ್ರಚಾರ ನಡೆಸಿದರು.

'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ರಾಜ್ಯದ ಪ್ರಾತಿನಿಧ್ಯವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ' ಎಂದು ಆರೋಪಿಸಿದರು. ಉದಯನಿಧಿ ಸಹ ಪ್ರಸ್ತಾವಿತ ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಯ ಪ್ರತಿಯನ್ನು ಸುಟ್ಟುಹಾಕಿದರು.

'ಮಸೂದೆ ಅಂಗೀಕಾರಗೊಂಡರೆ ಸುಪ್ರೀಂ ಕೋರ್ಟ್ ಮೊರೆ': 'ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಯು ಸಂಸತ್ತಿನಲ್ಲಿ ಅಂಗೀಕಾರಗೊಂಡರೆ, ಅದರ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋಗುತ್ತೇವೆ. ದಕ್ಷಿಣ ರಾಜ್ಯಗಳ ಹಿತದೃಷ್ಟಿಯಿಂದ ಈ ಕ್ರಮ ಅಗತ್ಯ' ಎಂದು ಡಿಎಂಕೆ ಕಾನೂನು ವಿಭಾಗದ ಕಾರ್ಯದರ್ಶಿ ಎನ್.ಆರ್. ಎಳಂಗೊ ಗುರುವಾರ ತಿಳಿಸಿದ್ದಾರೆ.

'ವಿಪಕ್ಷಗಳಿಂದ ಚುನಾವಣೆ ಬಹಿಷ್ಕಾರ'

ನವದೆಹಲಿ (ಪಿಟಿಐ): ಲೋಕಸಭೆಗೆ ಡೆಪ್ಯುಟಿ ಸ್ಪೀಕರ್ ನೇಮಕ ಮಾಡದಿರುವುದು ಸೇರಿ ಪ್ರಧಾನಿ ಮೋದಿ ನೇತೃತ್ವದ ಸರ್ಕಾರದ ಕಾರ್ಯವೈಖರಿ ಪ್ರತಿಭಟಿಸಿ ರಾಜ್ಯಸಭಾ ಉಪಸಭಾಪತಿ ಚುನಾವಣೆ ಬಹಿಷ್ಕರಿಸಲು ವಿರೋಧ ಪಕ್ಷಗಳು ನಿರ್ಧರಿಸಿವೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಈ ಕುರಿತು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಮೊದಲನೆಯದಾಗಿ ಏಳು ವರ್ಷಗಳು ಕಳೆದರೂ ಲೋಕಸಭೆಗೆ ಡೆಪ್ಯುಟಿ ಸ್ಪೀಕರ್ ನೇಮಕ ಮಾಡಿಲ್ಲ. ಈ ರೀತಿ ಹಿಂದೆಂದೂ ಆಗಿರಲಿಲ್ಲ' ಎಂದಿದ್ದಾರೆ.

'ಎರಡನೆಯದಾಗಿ ಉಪಸಭಾಪತಿ ಹರಿವಂಶ್ ಅವರ ಅವಧಿ ಏಪ್ರಿಲ್ 9ಕ್ಕೆ ಅಂತ್ಯಗೊಂಡಿತ್ತು. ಮಾರನೇ ದಿನವೇ ರಾಷ್ಟ್ರಪತಿಯವರು ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದರು. ಈಗ ಅವರು ಮೂರನೇ ಅವಧಿಗೆ ಉಪಸಭಾಪತಿ ಸ್ಥಾನದ ಎನ್‌ಡಿಎ ಅಭ್ಯರ್ಥಿಯಾಗಿದ್ದಾರೆ' ಎಂದಿದ್ದಾರೆ.

'ಕೊನೆಯದಾಗಿ, ವಿರೋಧ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸದೆ ಈ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಮೂರು ಕಾರಣಗಳು ಹಾಗೂ ಕೇಂದ್ರದ ಕಾರ್ಯವೈಖರಿಗೆ ಪ್ರತಿಭಟನೆ ವ್ಯಕ್ತಪಡಿಸುವ ಉದ್ದೇಶದಿಂದ ಉಪಸಭಾಪತಿ ಚುನಾವಣೆಯನ್ನು ಬಹಿಷ್ಕರಿಸಲು ವಿಪಕ್ಷಗಳು ನಿರ್ಧರಿಸಿವೆ' ಎಂದು ಜೈರಾಮ್ ರಮೇಶ್ ಹೇಳಿದ್ದಾರೆ.

ಏಪ್ರಿಲ್ 17ರಂದು ರಾಜ್ಯಸಭಾ ಉಪಸಭಾಪತಿ ಚುನಾವಣೆ ನಡೆಯಲಿದೆ.

ಸಾಮಾನ್ಯ ಜಾತಿಗಳಿಗಿಂತ ಮೂರು ಪಟ್ಟು ಹಿಂದುಳಿದಿರುವ ಎಸ್ಸಿ–ಎಸ್ಟಿ: ಸಮೀಕ್ಷೆ

ಹೈದರಾಬಾದ್: 'ತೆಲಂಗಾಣದಲ್ಲಿ ಪರಿಶಿಷ್ಟ ಜಾತಿ (ಎಸ್ಸಿ) ಪರಿಶಿಷ್ಟ ಪಂಗಡ (ಎಸ್ಟಿ) ಸಮುದಾಯವು ಸಾಮಾನ್ಯ ವರ್ಗದ ಜನರಿಗಿಂತಲೂ ಮೂರು ಪಟ್ಟು ಹಿಂದುಳಿದಿದೆ. ಹಿಂದುಳಿದ ವರ್ಗದ ಸಮುದಾಯ ಜನರು ರಾಜ್ಯದ ಸರಾಸರಿಗಿಂತಲೂ ಶೇಕಡ 2.7ರಷ್ಟು ಹಿಂದುಳಿದಿದ್ದಾರೆ' ಎಂದು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ ಹಾಗೂ ಜಾತಿ ಆಧಾರಿತ ಸಮೀಕ್ಷೆ–2024ರಲ್ಲಿ ಕಂಡುಬಂದಿದೆ.

ವರದಿಯು ಬುಧವಾರ ಬಿಡುಗಡೆಯಾಗಿದೆ.

ಒಟ್ಟು ಜನಸಂಖ್ಯೆಯಲ್ಲಿ ಮುಸಲ್ಮಾನರು ಸೇರಿ ಹಿಂದುಳಿದ ವರ್ಗದ ಪ್ರಮಾಣ ಶೇ 56.4 (2.35 ಕೋಟಿ). ಉಳಿದಂತೆ ಪರಿಶಿಷ್ಟ ಜಾತಿ ಶೇ 17.4 (62.25 ಲಕ್ಷ), ಸಾಮಾನ್ಯ ವರ್ಗ ಶೇ 11.9 (42.42 ಲಕ್ಷ), ಪರಿಶಿಷ್ಟ ಪಂಗಡ ಶೇ 10.4 (37.14 ಲಕ್ಷ) ದಷ್ಟು ಜನರಿದ್ದಾರೆ.

ಮಹಿಳಾ ಮೀಸಲು ಅಗ್ನಿಪರೀಕ್ಷೆ

ಒಂದನೇ ಪುಟದಿಂದ...

ಸಂವಿಧಾನ ತಿದ್ದುಪಡಿ ಮಸೂದೆಗೆ ಅಂಗೀಕಾರ ಪಡೆಯಲು ಸದನದ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ಅಗತ್ಯ. ಎನ್‌ಡಿಎ ಮೈತ್ರಿಕೂಟವು ಸರಳ ಬಹುಮತ ಹೊಂದಿದೆ. ಇತರ ಪಕ್ಷಗಳ ಬೆಂಬಲ ಪಡೆಯದ ಹೊರತು ಅಥವಾ ವಿಪಕ್ಷದ ಸದಸ್ಯರು ಸದನಕ್ಕೆ ಗೈರಾಗುವಂತೆ ನೋಡಿಕೊಳ್ಳದ ಹೊರತು ಮಸೂದೆಗೆ ಅಂಗೀಕಾರ ಪಡೆಯುವುದು ಕಷ್ಟ. ಲೋಕಸಭೆಯಲ್ಲಿ ಅಂಗೀಕಾರ ಪಡೆದ ಬಳಿಕವಷ್ಟೇ ಮಸೂದೆ ರಾಜ್ಯಸಭೆಗೆ ಹೋಗಲಿದೆ.

ಮಸೂದೆಗಳು ಲೋಕಸಭೆಯಲ್ಲಿ ಅಂಗೀಕಾರ ಪಡೆಯಲು ಸಮಾಜವಾದಿ ಪಕ್ಷ (37 ಸಂಸದರು), ಟಿಎಂಸಿ (28 ಸಂಸದರು) ಅಥವಾ ಡಿಎಂಕೆ (22 ಸಂಸದರು) ಪೈಕಿ ಕನಿಷ್ಠ ಎರಡು ಪ್ರಮುಖ ವಿರೋಧ ಪಕ್ಷಗಳು ಗೈರುಹಾಜರಾಗಬೇಕಾಗುತ್ತದೆ. ಸಂವಿಧಾನ ತಿದ್ದುಪಡಿ ಮಸೂದೆ ವಿರುದ್ಧ ಮತ ಚಲಾಯಿಸುವುದಾಗಿ 237 ಸದಸ್ಯರನ್ನು ಹೊಂದಿರುವ 'ಇಂಡಿಯಾ' ಮೈತ್ರಿಕೂಟವು ಈಗಾಗಲೇ ಘೋಷಿಸಿದೆ. ಅಕಾಲಿದಳವು ಮತ ಚಲಾಯಿಸುತ್ತದೆಯೋ ಅಥವಾ ಗೈರುಹಾಜರಾಗುತ್ತದೆಯೋ ಎಂಬುದು ಸ್ಪಷ್ಟವಾಗಿಲ್ಲ. ಕ್ಷೇತ್ರ ಮರುವಿಂಗಡಣೆಯನ್ನು ಬೆಂಬಲಿಸುವುದಾಗಿ ಬಿಆರ್‌ಎಸ್, ವೈಎಸ್‌ಆರ್ ಕಾಂಗ್ರೆಸ್ ಪ್ರಕಟಿಸಿವೆ.

ಪಶ್ಚಿಮ ಬಂಗಾಳ ಚುನಾವಣೆಯ ಸಂದರ್ಭದಲ್ಲಿ ಸಂಸದರನ್ನು ಸದನಕ್ಕೆ ಕಳುಹಿಸಲು ಟಿಎಂಸಿ ಹಿಂದೇಟು ಹಾಕಿತ್ತು. ಇದಕ್ಕೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಸಂಸದರನ್ನು ಸದನಕ್ಕೆ ಕಳುಹಿಸಲು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರೊಂದಿಗೆ ಮಾತುಕತೆ ನಡೆಸುವಂತೆ ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಸಲಹೆ ನೀಡಿದ್ದರು. ಶುಕ್ರವಾರ ನಡೆಯುವ ಮತದಾನದ ಸಂದರ್ಭದಲ್ಲಿ ಟಿಎಂಸಿಯ ಕನಿಷ್ಠ 20 ಸಂಸದರು ಸದನದಲ್ಲಿ ಹಾಜರಿರಬೇಕು ಎಂದು ಮೈತ್ರಿಕೂಟದ ನಾಯಕರು ಒತ್ತಡ ಹೇರಿದ್ದಾರೆ. ಒಂದು ವೇಳೆ, ಮತದಾನದ ಸಂದರ್ಭದಲ್ಲಿ 237 ಸಂಸದರು ಹಾಜರಿರದಿದ್ದರೆ ವಿಪಕ್ಷದ ಒಡಕು ಮತ್ತೊಮ್ಮೆ ಬಯಲಾಗಲಿದೆ.

ಕ್ಯಾಂಡಿಡೇಟ್ಸ್ ಟೂರ್ನಿಯ ಕೊನೆಯ ಹಂತದಲ್ಲಿ ಪುಟಿದೆದ್ದ ವೈಶಾಲಿ

ತಮ್ಮನ ನೆರಳಿನಿಂದ ಹೊರಬಂದ ಗಟ್ಟಿಗಿತ್ತಿ

• ನಾಗೇಶ್ ಶೆಣೈ

ಬೆಂಗಳೂರು: ಗ್ರ್ಯಾಂಡ್‌ಮಾಸ್ಟರ್ ವೈಶಾಲಿ ರಮೇಶಬಾಬು ಅವರು ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡಲು ಇಳಿದಾಗ ಎಂಟು ಮಂದಿ ಆಟಗಾರ್ತಿಯರಲ್ಲಿ ಕೊನೆಯ ಶ್ರೇಯಾಂಕ (ರೇಟಿಂಗ್ 2470) ಹೊಂದಿದ್ದರು. ಅವರ ಮೊದಲ ನಾಲ್ಕು ಪಂದ್ಯಗಳು ಡ್ರಾ ಆಗಿದ್ದವು. ಐದನೇ ಪಂದ್ಯದಲ್ಲಿ ಚೀನಾದ ಝು ಜಿನೆರ್ ಎದುರು ಸೋತಿದ್ದರು. ಆದರೆ ನಂತರ ಅವರ ಚೇತರಿಕೆ ಅಮೋಘವಾಗಿತ್ತು. ಬುಧವಾರ ರಾತ್ರಿ ಅವರು ಅರ್ಹವಾಗಿಯೇ ಚಾಂಪಿಯನ್ ಆದರು.

ಸೈಪ್ರಸ್ ದೇಶದ ಕರಾವಳಿಯ ಪೆಯಿಯಾ ನಗರದ ರಿಸಾರ್ಟ್‌ನಲ್ಲಿ ನಡೆದ ಈ ಟೂರ್ನಿಯ ಓಪನ್ ವಿಭಾಗದಲ್ಲಿ ವಿಶ್ವಕಪ್ ಚಾಂಪಿಯನ್ ಸಿಂದರೋವ್ ಅವರು ಟೂರ್ನಿಯುದ್ದಕ್ಕೂ ಪ್ರಾಬಲ್ಯ ಮೆರೆದರು. ಆದರೆ ಮಹಿಳೆಯರ ವಿಭಾಗದಲ್ಲಿ ಕೊನೆಯವರೆಗೂ ಅಗ್ರಸ್ಥಾನಕ್ಕೆ ಪೈಪೋಟಿಯಿತ್ತು.

ವೈಶಾಲಿ ಅವರ ಚೇತರಿಕೆ ಅಮೋಘ. ಮೊದಲ ಐದು ಸುತ್ತುಗಳಲ್ಲಿ ಕೇವಲ ಎರಡು ಪಾಯಿಂಟ್. ಕೊನೆಯ 9 ಪಂದ್ಯಗಳಲ್ಲಿ ಐದರಲ್ಲಿ ಜಯ, ಮೂರು ಡ್ರಾ, ಒಂದು ಸೋಲು. ಕೊನೆಯ ನಾಲ್ಕು ಸುತ್ತುಗಳಲ್ಲಿ ಅಗ್ರಸ್ಥಾನ ಹಂಚಿಕೊಂಡಿದ್ದ ಅವರು ಅಂತಿಮ ಸುತ್ತಿನಲ್ಲಿ ಕ್ಯಾತರಿನಾ ಲಾಗ್ನೊ ಅವರನ್ನು ಸೋಲಿಸಿ ಅರ್ಹವಾಗಿಯೇ ಚಾಂಪಿಯನ್ (14 ಸುತ್ತುಗಳಲ್ಲಿ 8.5 ಅಂಕ) ಆದರು.

ಇದು ಅವರಲ್ಲಿದ್ದ ಆತ್ಮವಿಶ್ವಾಸ, ಗಟ್ಟಿ ಮನೋಬಲಕ್ಕೆ ಕನ್ನಡಿಯಾಗಿತ್ತು. ತಾಯಿ ನಾಗಲಕ್ಷ್ಮಿ ಅವರು ಟೂರ್ನಿಗೆ ಬಂದಿದ್ದು ಅವರಿಗೆ ಮಾನಸಿಕ ಬೆಂಬಲವಾಯಿತು.

ನಾರ್ವೆ (ಸ್ಟಾವೆಂಜರ್) ಟೂರ್ನಿಯ ಚಾಂಪಿಯನ್ ಅನ್ನಾ ಮುಝಿಚುಕ್, ವಿಶ್ವ ರ್‍ಯಾಪಿಡ್ ಚಾಂಪಿಯನ್ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ, ವಿಶ್ವ ಬ್ಲಿಟ್ಝ್ ಚಾಂಪಿಯನ್ ಬಿಬಿಸಾರಾ ಅಸೌಬಯೇವಾ, ಚೀನಾದ ಝು ಜಿನೆರ್ ಮೊದಲಾದ ಘಟಾನುಘಟಿಗಳು ಕಣದಲ್ಲಿದ್ದರು. ಕೊನೆಯ ಸುತ್ತು ಇರುವಾಗ ಅಗ್ರಸ್ಥಾನ ಹಂಚಿಕೊಂಡಿದ್ದ ಕಜಾಕಸ್ತಾನದ ಅಸೌಬಯೇವಾ ಕೊನೆಯ ಸುತ್ತಿನಲ್ಲಿ ಭಾರತದ ದಿವ್ಯಾ ದೇಶಮುಖ್ ಜೊತೆ ಡ್ರಾ ಮಾಡಿಕೊಂಡಿದ್ದು ಸಹ ವೈಶಾಲಿ ಹಾದಿ ಸುಗಮಗೊಳಿಸಿತು.


ತಾಯಿ ನಾಗಲಕ್ಷ್ಮಿ ಜೊತೆ ವೈಶಾಲಿ ಎಕ್ಸ್ ಚಿತ್ರ

ವೈಶಾಲಿ ಅವರು ಈ ವರ್ಷದ ಕೊನೆಗೆ ವಿಶ್ವ ಚಾಂಪಿಯನ್, ಚೀನಾದ ಜು ವೆನ್‌ಜುನ್ ಅವರಿಗೆ ಚಾಲೆಂಜರ್ ಆಗಲಿದ್ದಾರೆ. ಇದೇ ಮೊದಲ ಬಾರಿ ಭಾರತದ ಇಬ್ಬರು ವಿಶ್ವ ಚಾಂಪಿಯನ್‌ಷಿಪ್ ಪಟ್ಟದ ಹೋರಾಟದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪುರುಷರ ವಿಭಾಗದಲ್ಲಿ ಡಿ.ಗುಕೇಶ್ ಈಗಾಗಲೇ ವಿಶ್ವ ಚಾಂಪಿಯನ್ ಆಗಿದ್ದು, ಅವರಿಗೆ ಸಿಂದರೋವ್ ಚಾಲೆಂಜರ್ ಆಗಿದ್ದಾರೆ.

ತಮ್ಮನ ನೆರಳು: ವಿಶ್ವ ಮಟ್ಟದಲ್ಲಿ ಬೇಗನೇ ಪ್ರವರ್ಧಮಾನಕ್ಕೆ ಬಂದ ತಮ್ಮನ (ಪ್ರಜ್ಞಾನಂದ) ನೆರಳಿನಲ್ಲಿಯೇ ಬೆಳೆದ ವೈಶಾಲಿ ಇತ್ತೀಚಿನ ವರ್ಷಗಳಲ್ಲಿ ಉತ್ತಮ ಸಾಧನೆ ತೋರಿದ್ದಾರೆ. ಎರಡು ಬಾರಿ ಫಿಡೆ ಮಹಿಳಾ ಗ್ರ್ಯಾಂಡ್ ಸ್ವಿಸ್ (2023, 2025) ಟೂರ್ನಿ ಜಯಿಸಿದ್ದು, ಅದರ ಆಧಾರದಲ್ಲಿಯೇ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆದಿದ್ದರು. ಈಗಿನ ಸಾಧನೆ ಅವರಿಗೆ ಸೋದರನ ಪ್ರಭಾವಳಿಯಿಂದ ಹೊರಬರಲು ನೆರವಾಗಲಿದೆ.

ಮುಖ್ಯಾಂಶಗಳು

- ಅಂತಿಮ ಸುತ್ತಿನಲ್ಲಿ ಕ್ಯಾತರಿನಾ ಲಾಗ್ನೊ ಅವರನ್ನು ಸೋಲಿಸಿದ ವೈಶಾಲಿ
- ಚೀನಾದ ಜು ವೆನ್‌ಜುನ್ ಅವರಿಗೆ ಚಾಲೆಂಜರ್ ಆಗಲಿರುವ ಭಾರತದ ಗ್ರ್ಯಾಂಡ್‌ಮಾಸ್ಟರ್

ವಯೋವರ್ಗ ಟೂರ್ನಿಗಳಲ್ಲಿ ಉತ್ತಮ ಸಾಧನೆಯೊಡನೆ ತೋರಿದ್ದ ವೈಶಾಲಿ 2021ರಲ್ಲಿ ಇಂಟರ್‌ನ್ಯಾಷನಲ್ ಮಾಸ್ಟರ್ (ಐಎಂ) ಆಗಿದ್ದರು. ಮೊದಲ ಬಾರಿ ವಿಶ್ವದ ಗಮನ ಸೆಳೆದಿದ್ದು 24 ವರ್ಷದ ಚೆನ್ನೈನ ಆಟಗಾರ್ತಿ ಮಹಿಳಾ ಗ್ರ್ಯಾಂಡ್ ಚೆಸ್ ಗೆಲ್ಲುವ ಮೂಲಕ ಮೊದಲ ಬಾರಿಗೆ ವಿಶ್ವ ಮಟ್ಟದಲ್ಲಿ ಪ್ರಸಿದ್ಧಿಗೆ ಬಂದರು. ಅದೇ ವರ್ಷದ ಡಿಸೆಂಬರ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ದೇಶದ ಮೂರನೇ ಆಟಗಾರ್ತಿ ಎನಿಸಿದರು. ಅವರಿಗಿಂತ ಮೊದಲು ಕೋನೇರು ಹಂಪಿ ಮತ್ತು ದ್ರೋಣವಲ್ಲಿ ಹಾರಿಕಾ ಗ್ರ್ಯಾಂಡ್‌ಮಾಸ್ಟರ್ ಆಗಿದ್ದರು.

2022ರಲ್ಲಿ ಮಹಾಬಲಿಪುರಂನಲ್ಲಿ ನಡೆದ ಚೆಸ್ ಒಲಿಂಪಿಯಾಡ್‌ನಲ್ಲಿ ಐತಿಹಾಸಿಕ ಕಂಚು ಗೆದ್ದ ತಂಡದಲ್ಲಿ ಆಡಿದ್ದರು. ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಓಪನ್ ಮತ್ತು ಮಹಿಳಾ ವಿಭಾಗದಲ್ಲಿ ತಲಾ ಎಂಟು ಮಂದಿ ಮಾತ್ರ ಅರ್ಹತೆ ಪಡೆಯುತ್ತಾರೆ. ಇಲ್ಲಿನ ಸಾಧನೆ ವೈಶಾಲಿ ಅವರ ಉತ್ಸಾಹ, ಮನೋಬಲ ಹೆಚ್ಚಿಸಲು ನೆರವಾಗಲಿದೆ.

ಕೋನೇರು ಹಂಪಿ ಅವರು ಪಶ್ಚಿಮ ಏಷ್ಯಾದಲ್ಲಿ ಸಂಘರ್ಷವಿದ್ದ ಕಾರಣ, ಭೌಗೋಳಿಕವಾಗಿ ಆ ಭಾಗಕ್ಕೆ ತಾಗಿಕೊಂಡೇ ಇದ್ದ ಸೈಪ್ರಸ್‌ನಲ್ಲಿ ಆಡಲು ಹಿಂಜರಿದಿದ್ದರು.

ಪಶ್ಚಿಮ ಬಂಗಾಳ: ಚುನಾವಣಾ ಆಯೋಗಕ್ಕೆ 'ಸುಪ್ರೀಂ' ಸೂಚನೆ

ಅರ್ಜಿ ಇತ್ಯರ್ಥವಾದವರಿಗೆ ಮತದ ಹಕ್ಕು

ಪ್ರಜಾವಾಣಿ ವಾರ್ತೆ

ನವದೆಹಲಿ: ಮತದಾರರ ಪಟ್ಟಿಯಿಂದ ತಮ್ಮ ಹೆಸರುಗಳನ್ನು ತಪ್ಪಾಗಿ ಕೈಬಿಡಲಾಗಿದೆ ಎಂದು ಆಕ್ಷೇಪಿಸಿದ್ದ ಮತದಾರರ ಅರ್ಜಿಗಳನ್ನು ಇತ್ಯರ್ಥಪಡಿಸಿದ್ದಲ್ಲಿ ಅಂಥವರಿಗೆ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಮತ ಚಲಾಯಿಸಲು ಅವಕಾಶ ನೀಡುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಏಪ್ರಿಲ್ 21 ಹಾಗೂ 27ರ ಒಳಗಾಗಿ ಇಂತಹ ಅರ್ಜಿಗಳನ್ನು ಇತ್ಯರ್ಥಪಡಿಸಬೇಕು ಹಾಗೂ ಇಂಥ ಮತದಾರರ ಹೆಸರುಗಳನ್ನು ಒಳಗೊಂಡ ಪೂರಕ ಪರಿಷ್ಕೃತ ಪಟ್ಟಿಯನ್ನು ಬಿಡುಗಡೆ ಮಾಡಬೇಕು ಎಂದೂ ಸುಪ್ರೀಂ ಕೋರ್ಟ್ ಸೂಚಿಸಿದೆ. ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 23 ಹಾಗೂ 29ರಂದು ಮತದಾನ ನಡೆಯಲಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರನ್ನು ಒಳಗೊಂಡ ಪೀಠವು ಏಪ್ರಿಲ್ 13ರಂದು ಹೊರಡಿಸಿರುವ ಆದೇಶದಲ್ಲಿ ಈ ಸೂಚನೆ ನೀಡಿದೆ.

ಸಂವಿಧಾನದ 142ನೇ ವಿಧಿಯಡಿ ದತ್ತವಾದ ಅಧಿಕಾರ ಬಳಸಿ ಚುನಾವಣಾ ಆಯೋಗಕ್ಕೆ ನ್ಯಾಯಪೀಠ ಈ ನಿರ್ದೇಶನ ನೀಡಿದೆ.

'ತಮ್ಮ ಹೆಸರುಗಳನ್ನು ಪುನಃ ಮತದಾರರ ಪಟ್ಟಿಯಲ್ಲಿ ಸೇರಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಮೇಲ್ಮನವಿ ನ್ಯಾಯಮಂಡಳಿಯು ಮತದಾನದ ದಿನಾಂಕಕ್ಕೂ ಮೊದಲು ಇತ್ಯರ್ಥಪಡಿಸಿದಲ್ಲಿ, ಅಂಥ ಮತದಾರರಿಗೆ ತಮ್ಮ ಹಕ್ಕು ಚಲಾಯಿಸಲು ಅವಕಾಶ ನೀಡಬೇಕು. ಇವರ ಹೆಸರುಗಳನ್ನು ಪೂರಕ ಪರಿಷ್ಕೃತ ಮತದಾರರ ಪಟ್ಟಿಯಲ್ಲಿ ಸೇರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಪೀಠ ಹೇಳಿದೆ.

ಅಧಿಕಾರಿಗಳ ವರ್ಗಾವಣೆ ಪ್ರಶ್ನಿಸಿದ್ದ ಅರ್ಜಿ ವಜಾ

ಚುನಾವಣೆ ನಡೆಯುತ್ತಿರುವ ಹೊತ್ತಿನಲ್ಲಿ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಆಯೋಗವು ಆಡಳಿತ ವರ್ಗ ಮತ್ತು ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾ ಮಾಡಿದ್ದು, 'ಪಶ್ಚಿಮ ಬಂಗಾಳ ಸರ್ಕಾರ ಮತ್ತು ಚುನಾವಣಾ ಆಯೋಗದ ಮಧ್ಯೆ ನಂಬಿಕೆ ಕೊರತೆ ಇದೆ' ಎಂದಿದೆ.

'ಚುನಾವಣೆ ನಡೆಯುತ್ತಿರುವ ರಾಜ್ಯವೊಂದರ ಅಧಿಕಾರಿಗಳನ್ನು ವರ್ಗಾವಣೆ ಮಾಡುವಾಗ ಅಲ್ಲಿನ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಬೇಕೇ ಬೇಡವೇ ಎನ್ನುವ ಪ್ರಶ್ನೆಯೊಂದಿದೆ. ಈ ಬಗ್ಗೆ ಈ ಅರ್ಜಿಯ ವೇಳೆ ವಿಚಾರಣೆ ನಡೆಸುವುದು ಸೂಕ್ತ ಅಲ್ಲ. ಆದರೆ, ಈ ಕಾನೂನಾತ್ಮಕ ವಿಚಾರದ ಕುರಿತು ವಿಚಾರಣೆ ನಡೆಸಬೇಕಿದೆ' ಎಂದು ನ್ಯಾಯಾಲಯ ಹೇಳಿತು.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ಪಿಐಎಲ್ ಸಲ್ಲಿಸಿದ್ದ ಅರ್ಕ ಕುಮಾರ್ ನಾಗ್ ಪರ ವಕೀಲ ಕಲ್ಯಾಣ ಬ್ಯಾನರ್ಜಿ ವಾದಿಸಿದರು. ಇವರು ಟಿಎಂಸಿ ಸಂಸದರೂ ಹೌದು.

'ಎಸ್‌ಐಆರ್ ವಿಚಾರದಲ್ಲಿ ನ್ಯಾಯಾಂಗ ಅಧಿಕಾರಿಗಳನ್ನು ನಾವೇ ನೇಮಿಸಬೇಕಾಯಿತು. ಯಾಕೆಂದರೆ, ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗದ ಮಧ್ಯೆ ನಂಬಿಕೆಯೇ ಇಲ್ಲ' ಎಂದು ಪೀಠ ಹೇಳಿತು.

'ಚುನಾವಣೆ ಕಾರಣ ನೀಡಿ ರಾತ್ರೋರಾತ್ರಿ 1,100 ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಯಿತು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನೂ ವರ್ಗಾಯಿಸಲಾಯಿತು. ಇದು ಮೊದಲ ಬಾರಿಗೆ ನಡೆದಿದ್ದು' ಎಂದು ಬ್ಯಾನರ್ಜಿ ವಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಇದೇ ಮೊದಲ ಬಾರಿಗೇನು ಇಂಥದ್ದು ನಡೆದಿದ್ದು ಅಲ್ಲ ಮತ್ತು ಪಶ್ಚಿಮ ಬಂಗಾಳದಲ್ಲಿ ಮಾತ್ರವೇ ಇದು ನಡೆದಿದ್ದೂ ಅಲ್ಲ' ಎಂದಿತು.

ಫುಟ್‌ಬಾಲ್: ಕರ್ನಾಟಕ ಬಾಲಕಿಯರಿಗೆ ಪ್ರಶಸ್ತಿ

ಬೆಂಗಳೂರು: ಸುಭತ್ರಾ ಎ. ಅವರ ಅಮೋಘ ಆಟದ ನೆರವಿನಿಂದ ಕರ್ನಾಟಕ ಬಾಲಕಿಯರ ತಂಡವು 13 ವರ್ಷದೊಳಗಿನ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿಗೆ ಪ್ರಶಸ್ತಿ ಜಯಿಸಿತು.

ಪಂಜಾಬ್‌ನ ಮಹಿಲ್‌ಪುರದಲ್ಲಿ ಗುರುವಾರ ನಡೆದ ಫೈನಲ್‌ನಲ್ಲಿ ಕರ್ನಾಟಕ ತಂಡವು ಟೈ ಬ್ರೇಕರ್‌ನಲ್ಲಿ 5–4ರಿಂದ ಆತಿಥೇಯ ಪಂಜಾಬ್ ತಂಡವನ್ನು ಮಣಿಸಿತು. ನಿಗದಿಯ ಅವಧಿಯ ಪಂದ್ಯವು 1–1 ಗೋಲುಗಳಿಂದ ಸಮಬಲಗೊಂಡಿತ್ತು.

ಕರ್ನಾಟಕದ ಪರ ಸುಭತ್ರಾ ಅವರು 31ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶದಲ್ಲಿ ಗೋಲು ಬಾರಿಸಿದರು. ಪಂಜಾಬ್ ತಂಡದ ತನ್ವೀರ್ ಕೌರ್ ಅವರು 38ನೇ ನಿಮಿಷದಲ್ಲಿ ಫೀಲ್ಡ್ ಗೋಲು ಗಳಿಸಿದರು.

ಟೈ ಬ್ರೇಕರ್‌ನಲ್ಲಿ ಕರ್ನಾಟಕದ ತಂಡದ ಅನ್ವಿ ಜೋಶಿ, ಮಧುಮಿತಾ ಕೆ, ರಿಚಾ ಭಾಟಿಯಾ, ತಕ್ಷ್ವಿ ಮಹಾಜನ್ ಮತ್ತು ಸುಭಾತ್ರಾ ಚೆಂಡನ್ನು ಗುರಿ ಸೇರಿಸಿದರು. ಪಂಜಾಬ್‌ನ ನಾಲ್ಕು ಮಂದಿ ಮಾತ್ರ ಈ ಪ್ರಯತ್ನದಲ್ಲಿ ಯಶಸ್ವಿಯಾದರು.



ಟ್ರೋಫಿಯೊಂದಿಗೆ ಕರ್ನಾಟಕ ಬಾಲಕಿಯರ ತಂಡ. (ಹಿಂದಿನ ಸಾಲು) ಎಡದಿಂದ; ಸುಭತ್ರಾ ಎ, ಅನ್ಯಾ ಸಕ್ಸೇನಾ, ಮಧುಮಿತಾ ಕೆ, ಡಿ. ಲಿಡಿಯಾ (ಮ್ಯಾನೇಜರ್), ಅವಂತಿಕಾ ಕಾರ್ತಿಕ್, ಏಕ್ತಾ ಕೃಷ್ಣ ಪಾಟೀಲ (ಕೋಚ್), ಅನ್ವಿ ಜೋಶಿ, ರಿಚಾ ಭಾಟಿಯಾ, ಇರಾ ಸಿಂಗ್ ಕಪಾನಿ. (ಮುಂದಿನ ಸಾಲು) ಆದಿತಿ ಕೆ, ತ್ರಿಶಾ ಅಮರೇಶ್ ಕುಲಕರ್ಣಿ, ರುಕ್ಷಾನಾ, ಗೌರಿ ನಿಂಗನಗೌಡ ಪಾಟೀಲ, ಎಸ್. ಲಕ್ಷ್ಮಿ ಬಾಯಿ, ತಕ್ಷ್ವಿ ಮಹಾಜನ್, ಪ್ರಣೀತಾ ವಿ.ಆರ್.



ಪಂಜಾಬ್ ಕಿಂಗ್ಸ್ ಅಜೇಯ ಓಟ

ಅಬ್ಬರಿಸಿದ ಪ್ರಭಸಿಮ್ರನ್, ಶ್ರೇಯಸ್
• ಕ್ವಿಂಟನ್ ಶತಕಕ್ಕೆ ಒಲಿಯದ ಗೆಲುವು



ಚೆಂಡನ್ನು ಬೌಂಡರಿಗೆ ಅಟ್ಟಿದ ಪ್ರಭಸಿಮ್ರನ್ ಸಿಂಗ್ ಚಿತ್ರಗಳು: ಪಿಟಿಐ/ಎಎಫ್‌ಪಿ

ಮುಂಬೈ (ಪಿಟಿಐ): ಪ್ರಭಸಿಮ್ರನ್ ಸಿಂಗ್ ಮತ್ತು ಶ್ರೇಯಸ್ ಅಯ್ಯರ್ ಅವರ ಶತಕದ ಜೊತೆಯಾಟದ ಮುಂದೆ ಕ್ವಿಂಟನ್ ಡಿ ಕಾಕ್ ಅವರ ಅಜೇಯ ಶತಕ ಫಲ ನೀಡಲಿಲ್ಲ. ಅವರಿಬ್ಬರ ಮಿಂಚಿನ ಬ್ಯಾಟಿಂಗ್ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವು ಐಪಿಎಲ್‌ನಲ್ಲಿ ಅಜೇಯ ಓಟವನ್ನು ಮುಂದುವರಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ತಂಡವು ಏಳು ವಿಕೆಟ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿ, ಪಾಯಿಂಟ್ಸ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿತು. ಹಾರ್ದಿಕ್ ಪಾಂಡ್ಯ ಪಡೆಯು ಸತತ ನಾಲ್ಕನೇ ಸೋಲು ಅನುಭವಿಸಿತು.

ಟಾಸ್ ಗೆದ್ದ ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಕ್ವಿಂಟನ್ (ಅಜೇಯ 112; 60ಎ, 4X8, 6X7) ಮತ್ತು ನಮನ್ (50 31ಎ, 4X3, 6X3) ಅವರ ಬ್ಯಾಟಿಂಗ್ ಬಲದಿಂದ ಮುಂಬೈ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 195 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಪಂಜಾಬ್ ತಂಡವು ಪ್ರಿಯಾಂಶ್ ಆರ್ಯ (15) ಮತ್ತು ಕೂಪರ್ ಕನೋಲಿ (17) ಅವರನ್ನು ಬೇಗನೆ ಕಳೆದುಕೊಂಡಿತು. ಆರಂಭಿಕ ಆಟಗಾರ ಪ್ರಭಸಿಮ್ರನ್ ಸಿಂಗ್ (ಔಟಾಗದೇ 80;39ಎ, 4x11, 6x2) ಮತ್ತು ಶ್ರೇಯಸ್ (66;35ಎ, 4x5, 6x4) ಸೊಗಸಾದ ಇನಿಂಗ್ಸ್ ಕಟ್ಟಿದರು. ಮೂರನೇ ವಿಕೆಟ್‌ಗೆ 66 ಎಸೆತಗಳಲ್ಲಿ ಬಿರುಸಿನ 139 ರನ್ ಸೇರಿಸಿ ತಂಡವನ್ನು ಗೆಲುವಿತ್ತ ಮುನ್ನಡೆಸಿದರು.

ಜಯಕ್ಕೆ 11 ಬೇಕಿದ್ದಾಗ ಶ್ರೇಯಸ್ ಔಟಾದರು. ಮಾರ್ಕಸ್ ಸ್ಟೋಯಿನಿಸ್ (ಔಟಾಗದೇ 10;5ಎ) ಗೆಲುವಿನ ಗಡಿ ದಾಟಿಸಿದರು. ಪಂಜಾಬ್ ತಂಡವು ಇನ್ನೂ 21 ಎಸೆತಗಳು ಬಾಕಿ ಇರುವಂತೆ 3 ವಿಕೆಟ್‌ಗೆ 198 ರನ್ ಗಳಿಸಿ ಸಂಭ್ರಮಿಸಿತು. ಈ ಪಂದ್ಯದಲ್ಲೂ ವೇಗಿ ಜಸ್‌ಪ್ರೀತ್ ಬೂಮ್ರಾ ಒಂದೂ ವಿಕೆಟ್ ಗಳಿಸಲಿಲ್ಲ.

ಕ್ವಿಂಟನ್ ಶತಕ: ಎಡಗೈ ವೇಗಿ ಅರ್ಷದೀಪ್ ಸಿಂಗ್ (22ಕ್ಕೆ3) ಎರಡನೇ ಓವರ್‌ನಲ್ಲಿ ರಿಯಾನ್ ರಿಕೆಲ್ಟನ್ (2; 8ಎ) ಮತ್ತು ಸೂರ್ಯಕುಮಾರ್ ಯಾದವ್ ಅವರ ವಿಕೆಟ್ ಕಬಳಿಸಿದರು. ಇದರಿಂದಾಗಿ ತಂಡವು 15 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ಕ್ವಿಂಟನ್ ಅವರ ಜೊತೆಗೂಡಿದ ನಮನ್, ಇನಿಂಗ್ಸ್ ಚೇತರಿಕೆಗೆ ಕಾರಣರಾದರು. ಗಾಯಗೊಂಡಿರುವ ರೋಹಿತ್ ಶರ್ಮಾ ಬದಲಿಗೆ ಸ್ಥಾನ ಪಡೆದ ಕ್ವಿಂಟನ್ ಮತ್ತು ನಮನ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 122 (68ಎ) ರನ್ ಸೇರಿಸಿದರು.


ಮೂರು ವಿಕೆಟ್ ಪಡೆದ ಅರ್ಷದೀಪ್ ಸಿಂಗ್

ಕ್ವಿಂಟನ್ 2022ರ ನಂತರ ಐಪಿಎಲ್‌ನಲ್ಲಿ ಗಳಿಸಿದ ಮೊದಲ ಶತಕ ಇದಾಗಿದೆ. ಪ್ರಸಕ್ತ ಟೂರ್ನಿಯಲ್ಲಿ ದಾಖಲಾದ ಎರಡನೇ ಶತಕವೂ ಇದಾಗಿದೆ. ಈಚೆಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸಂಜು ಸ್ಯಾಮ್ಸನ್ ಶತಕ ದಾಖಲಿಸಿದ್ದರು.

14ನೇ ಓವರ್‌ನಲ್ಲಿ ನಮನ್ ವಿಕೆಟ್ ಗಳಿಸಿದ ಮಧ್ಯಮವೇಗಿ ಶಶಾಂಕ್ ಸಿಂಗ್ ಸಂಭ್ರಮಿಸಿದರು. ಜೊತೆಯಾಟ ಮುರಿದ ಕಾರಣ ರನ್ ಹರಿವು ತುಸು ಕಡಿಮೆಯಾಯಿತು. ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ 12 ಎಸೆತಗಳಲ್ಲಿ 14 ರನ್ ಹೊಡೆದರು.

ಎಡಗೈ ವೇಗಿ ಮಾರ್ಕೊ ಯಾನ್ಸೆನ್ ಅವರು ಹಾಕಿದ ಓವರ್‌ನಲ್ಲಿ ಹಾರ್ದಿಕ್ ಸಿಕ್ಸರ್ ಹೊಡೆಯುವ ಪ್ರಯತ್ನ ಮಾಡಿದರು. ಆದರೆ ಬೌಂಡರಿ ಲೈನ್‌ನಲ್ಲಿ ಶ್ರೇಯಸ್ ಅಯ್ಯರ್ ಅವರ ಸಾಹಸಮಯ ಪ್ರಯತ್ನದಿಂದ ಇನ್ನೊಬ್ಬ ಫೀಲ್ಡರ್ ಝೇವಿಯರ್ ಬಾರ್ಟಲೆಟ್ ಅವರಿಗೆ ಕ್ಯಾಚ್ ಆದರು. ಬೌಂಡರಿಗೆರೆಯಾಚೆ ಬೀಳಲಿದ್ದ ಚೆಂಡನ್ನು ಗಾಳಿಯಲ್ಲಿ ಹಾರಿದ ಶ್ರೇಯಸ್ ಕ್ಯಾಚ್ ಮಾಡಿದ ತಕ್ಷಣ ಸನಿಹದಲ್ಲಿದ್ದ ಬಾರ್ಟ್‌ಲೆಟ್ ಅವರತ್ತ ಎಸೆದರು. ತಾವು ಬೌಂಡರಿಗೆರೆಯಾಚೆ (ಮುಂಬೈ ಡಗ್‌ಔಟ್ ಸಮೀಪ) ಬಿದ್ದರು. ಬಾರ್ಟ್‌ಲೆಟ್ ಚೆಂಡನ್ನು ಭದ್ರವಾಗಿ ಕೈತುಂಬಿಕೊಂಡರು.

ತಿಲಕ್ ವರ್ಮಾ ಅವರ ವೈಫಲ್ಯ ಮುಂದುವರಿಯಿತು. ಕ್ವಿಂಟನ್ 53 ಎಸೆತಗಳಲ್ಲಿ ಶತಕದ ಗಡಿ ದಾಟಿದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 6ಕ್ಕೆ195 (ಕ್ವಿಂಟನ್ ಡಿ ಕಾಕ್ ಔಟಾಗದೇ 112, ನಮನ್ ಧೀರ್ 50, ಹಾರ್ದಿಕ್ ಪಾಂಡ್ಯ 14, ಅರ್ಷದೀಪ್ ಸಿಂಗ್ 22ಕ್ಕೆ3, ಮಾರ್ಕೊ ಯಾನ್ಸೆನ್ 30ಕ್ಕೆ1, ಶಶಾಂಕ್ ಸಿಂಗ್ 19ಕ್ಕೆ1). **ಪಂಜಾಬ್ ಕಿಂಗ್ಸ್:** 16.3 ಓವರ್‌ಗಳಲ್ಲಿ 3 ವಿಕೆಟ್‌ಗೆ 198 (ಪ್ರಭಸಿಮ್ರನ್ ಸಿಂಗ್ ಔಟಾಗದೇ 80, ಶ್ರೇಯಸ್ ಅಯ್ಯರ್ 66; ಎ.ಎಂ. ಗಜನ್‌ಫರ್ 31ಕ್ಕೆ 2, ಶಾರ್ದೂಲ್ ಠಾಕೂರ್ 38ಕ್ಕೆ 1). ಪಂದ್ಯದ ಆಟಗಾರ: ಅರ್ಷದೀಪ್ ಸಿಂಗ್

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	5	4	0	1	9	1.067
ಆರ್‌ಸಿಬಿ	5	4	1	0	8	1.503
ಆರ್ ಆರ್	5	4	1	0	8	0.889
ಎಸ್‌ಆರ್‌ಎಚ್	5	2	3	0	4	0.576
ಡಿ ಸಿ	4	2	2	0	4	0.322
ಜಿ ಟಿ	4	2	2	0	4	- 0.029
ಎಲ್‌ಎಸ್‌ಜಿ	5	2	3	0	4	- 0.804
ಸಿಎಸ್‌ಕೆ	5	2	3	0	4	- 0.846
ಎಂ ಐ	5	1	4	0	2	- 1.076
ಕೆಕೆಆರ್	5	0	4	1	1	- 1.383

ಆರೇಂಜ್ ಕ್ಯಾಪ್–ವಿರಾಟ್ ಕೊಹ್ಲಿ, ಆರ್‌ಸಿಬಿ (228 ರನ್)
ಪರ್ಪಲ್ ಕ್ಯಾಪ್–ಪ್ರಸಿದ್ಧ ಕೃಷ್ಣ, ಜಿಟಿ (10 ವಿಕೆಟ್)

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಖಲೀಲ್‌ಗೆ ಗಾಯ: ಟೂರ್ನಿಯಿಂದ ಔಟ್

ನವದೆಹಲಿ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ಎಡಗೈ ವೇಗದ ಬೌಲರ್ ಖಲೀಲ್ ಅಹ್ಮದ್ ಅವರು ಪೃಷ್ಠದ ನೋವಿನಿಂದ ಇಂಡಿಯನ್ ಪ್ರೀಮಿಯರ್ ಲೀಗ್‌ನಿಂದ ಹೊರಬಿದ್ದಿದ್ದಾರೆ.

ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಏಪ್ರಿಲ್ 14ರಂದು ನಡೆದ ಪಂದ್ಯದಲ್ಲಿ ಅವರು ಬೆನ್ನಿನ ಕೆಳಭಾಗದಲ್ಲಿ ನೋವಿಗೆ ಒಳಗಾಗಿದ್ದರು. ಅವರು ಈ ಟೂರ್ನಿಯಲ್ಲಿ ಚೆನ್ನೈ ಪರ ಉತ್ತಮ ಪ್ರದರ್ಶನ ನೀಡಿದ್ದರು. ಹೀಗಾಗಿ ಅವರ ನಿರ್ಗಮನ ತಂಡಕ್ಕೆ ಹಿನ್ನಡೆಯಾಗಿದೆ.

ಅವರಿಗೆ ಗ್ರೇಡ್ 2 ಮಟ್ಟದ ನೋವು ಇದೆ. ಇದಕ್ಕೆ 10–12 ವಾರಗಳ ಪುನಶ್ಚೇತನ ಅವಧಿ ಬೇಕಾಗುತ್ತದೆ ಎಂದು ಐಪಿಎಲ್ ಮೂಲ ತಿಳಿಸಿದೆ.

ಬಿಸಿಸಿಐಗೆ ದೂರು ನೀಡಿದ ಸಿಎಸ್‌ಕೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಪ್ರಿಲ್ 5ರಂದು ನಡೆದ ಐಪಿಎಲ್ ಪಂದ್ಯಕ್ಕೆ ಸಂಬಂಧಿಸಿದಂತೆ ಚೆನ್ನೈ ಸೂಪರ್ ಕಿಂಗ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಬಿಸಿಸಿಐಗೆ ಔಪಚಾರಿಕ ದೂರು ನೀಡಿದೆ.

ಪಂದ್ಯದ ಸಮಯದಲ್ಲಿ ‘ದೋಸೆ, ಇಡ್ಲಿ, ಸಾಂಬಾರ್, ಚಟ್ನಿ, ಚಟ್ನಿ...’ ಹಾಡನ್ನು ತಂಡವೊಂದರ ಮನಸ್ಥಿತಿ ಕುಗ್ಗಿಸುವ ಸಲುವಾಗಿ ಬಳಕೆ ಮಾಡಲಾಗಿದೆ. ಅಲ್ಲದೆ, ತಮಿಳುನಾಡಿನ ಗುರುತನ್ನು ಅಣಕಿಸುವುದಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಿದೆ.

ಗುಜರಾತ್ ಟೈಟನ್ಸ್–ನೈಟ್‌ರೈಡರ್ಸ್ ಮುಖಾಮುಖಿ ಇಂದು

ಮೊದಲ ಜಯದ ತವಕದಲ್ಲಿ ಕೋಲ್ಕತ್ತ

ಅಹಮದಾಬಾದ್ (ಪಿಟಿಐ): ಈ ಸಲದ ಐಪಿಎಲ್ ಟೂರ್ನಿಯಲ್ಲಿ ಒಂದೂ ಪಂದ್ಯದಲ್ಲಿ ಜಯ ಸಾಧಿಸದ ಏಕೈಕ ತಂಡವೆಂದರೆ ಕೋಲ್ಕತ್ತ ನೈಟ್ ರೈಡರ್ಸ್.

ಇದುವರೆಗೆ ಐದು ಪಂದ್ಯಗಳಲ್ಲಿ ಆಡಿದ್ದರೂ ಜಯದ ಮುಖ ನೋಡಿಲ್ಲ. ಅದರಲ್ಲಿ ನಾಲ್ಕು ಸೋತಿದೆ. ಒಂದು ಪಂದ್ಯ ಮಳೆಯಿಂದ ರದ್ದಾಗಿತ್ತು. ಆದ್ದರಿಂದ ಒಂದು ಅಂಕ ಪಡೆದಿದೆ.

ಮೂರು ಬಾರಿಯ ಚಾಂಪಿಯನ್ ತಂಡವಾಗಿರುವ ಕೋಲ್ಕತ್ತ ಶುಕ್ರವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ.

ಪ್ಲೇ ಆಫ್ ಪ್ರವೇಶಿಸುವ ಆಸೆ ಜೀವಂತವಾಗುಳಿಯಬೇಕಾದರೆ ಈ ಪಂದ್ಯದಿಂದಲೇ ಗೆಲುವಿನ ಓಟ ಆರಂಭಿಸುವ ಅನಿವಾರ್ಯತೆ ಅಜಿಂಕ್ಯ ರಹಾನೆ ನಾಯಕತ್ವದ ಬಳಗಕ್ಕೆ ಇದೆ. ಆರನೇ ಸ್ಥಾನದಲ್ಲಿರುವ ಗುಜರಾತ್ ತಂಡವು ಆಡಿದ ನಾಲ್ಕು ಪಂದ್ಯಗಳಲ್ಲಿ 2 ಗೆದ್ದು ಇನ್ನೆರಡಲ್ಲಿ ಸೋತಿದೆ. ಅಲ್ಲದೇ ತವರಿನಂಗಳದಲ್ಲಿ ಆಡುತ್ತಿರುವ ಶುಭಮನ್ ಗಿಲ್ ಬಳಗವೇ ಕೋಲ್ಕತ್ತಕ್ಕಿಂತ ಬಲಿಷ್ಠವಾಗಿ ಕಾಣುತ್ತಿದೆ.

ಇಂದಿನ ಪಂದ್ಯ
ಗುಜರಾತ್ ಟೈಟನ್ಸ್ V/s ಕೋಲ್ಕತ್ತ ನೈಟ್ ರೈಡರ್ಸ್
ತಾಣ: ಅಹಮದಾಬಾದ್
ಆರಂಭ: ರಾತ್ರಿ 7.30
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್


ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಅಜಿಂಕ್ಯ ರಹಾನೆ


ಗುಜರಾತ್ ಟೈಟನ್ಸ್ ನಾಯಕ ಶುಭಮನ್ ಗಿಲ್

ಕೋಲ್ಕತ್ತ ತಂಡದ ಸ್ಪಿನ್ ಜೋಡಿ ಸುನಿಲ್ ನಾರಾಯಣ ಮತ್ತು ವರುಣ್ ಚಕ್ರವರ್ತಿ ಅವರು ತಮ್ಮ ನೈಜ ಸಾಮರ್ಥ್ಯ ಸಾಬೀತುಪಡಿಸಬೇಕಿದೆ. ಇದುವರೆಗೆ ಅವರ ಜಾದೂ ನಡೆದಿಲ್ಲ. ಲಯಕ್ಕಾಗಿ ಪರದಾಡುತ್ತಿದ್ದಾರೆ. ಬ್ಲೆಸಿಂಗ್ ಮುಝರಬಾನಿ, ವೈಭವ್ ಅರೋರಾ, ಅನುಕೂಲ್ ರಾಯ್ ಅವರು ತಕ್ಕಮಟ್ಟಿಗೆ ತಮ್ಮ ಹೊಣೆ ನಿಭಾಯಿಸುತ್ತಿದ್ದಾರೆ. ಬ್ಲೆಸಿಂಗ್ ಅವರು ಸನ್‌ರೈಸರ್ಸ್ ಎದುರು ನಾಲ್ಕು ವಿಕೆಟ್ ಗಳಿಸಿದ್ದರು.

ಬ್ಯಾಟಿಂಗ್ ವಿಭಾಗದಲ್ಲಿಯೂ ಅಂಗಕ್ರಿಷ್ ರಘುವಂಶಿ ಅವರನ್ನು ಬಿಟ್ಟರೆ ಉಳಿದವರು ಸ್ಥಿರ ಪ್ರದರ್ಶನ ನೀಡುತ್ತಿಲ್ಲ. ಅಜಿಂಕ್ಯ, ಫಿನ್ ಅಲೆನ್, ರಿಂಕು ಸಿಂಗ್, ಕ್ಯಾಮರಾನ್ ಗ್ರೀನ್ ಹಾಗೂ ರಮಣದೀಪ್ ಸಿಂಗ್ ಅವರ ಬ್ಯಾಟ್‌ನಿಂದ ರನ್‌ಗಳು ಹರಿಯುತ್ತಿಲ್ಲ. ಗುಜರಾತ್ ತಂಡದ ಯಶಸ್ವಿ ಬೌಲರ್ ಆಗಿರುವ ಕನ್ನಡಿಗ ಪ್ರಸಿದ್ಧ ಕೃಷ್ಣ, ಅಶೋಕ ಶರ್ಮಾ, ಕಗಿಸೊ ರಬಾಡ ಹಾಗೂ ಸ್ಪಿನ್ನರ್ ರಶೀಧ್ ಖಾನ್ ಅವರನ್ನು ಎದುರಿಸಿ ನಿಲ್ಲುವ ಸವಾಲು ಕೋಲ್ಕತ್ತ ಬ್ಯಾಟರ್‌ಗಳಿಗೆ ಇದೆ.

ಆತಿಥೇಯರ ಬ್ಯಾಟಿಂಗ್ ಪಡೆಯೂ ಬಲಿಷ್ಠವಾಗಿದೆ. ಗಿಲ್, ಜೋಸ್ ಬಟ್ಲರ್, ಸಾಯಿ ಸುದರ್ಶನ್ ಅವರು ಉತ್ತಮವಾಗಿ ಆಡಿದ್ದಾರೆ. ಬಟ್ಲರ್ ಅವರು ಲಯಕ್ಕೆ ಮರಳಿರುವುದು ತಂಡದ ಬಲ ಹೆಚ್ಚಿಸಿದೆ. ಕೋಲ್ಕತ್ತ ಬೌಲಿಂಗ್ ಪಡೆಯ ಸಾಮರ್ಥ್ಯಕ್ಕೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಮುಂಬೈ ಕ್ರಿಕೆಟ್ ಸಂಸ್ಥೆಯಿಂದ ಆಟಗಾರರ ಗುತ್ತಿಗೆ ಪದ್ಧತಿ ಆರಂಭ

ಮುಂಬೈ (ಪಿಟಿಐ): ಮುಂಬೈ ಕ್ರಿಕೆಟ್ ಸಂಸ್ಥೆಯು (ಎಂಸಿಎ) ಆಟಗಾರರ ಗುತ್ತಿಗೆ ಪದ್ಧತಿಯನ್ನು ಆರಂಭಿಸಿದೆ. ಈ ಪದ್ಧತಿಯನ್ನು ಮೊದಲು ಆರಂಭಿಸಿದ ರಾಜ್ಯ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಎ ಶ್ರೇಣಿಯ ಆಟಗಾರರು ವಾರ್ಷಿಕ ₹ 12 ಲಕ್ಷದಿಂದ 20 ಲಕ್ಷದವರೆಗೆ, ಬಿ ಶ್ರೇಣಿಯ ಆಟಗಾರರು ₹ 8 ಲಕ್ಷದಿಂದ 12 ಲಕ್ಷದವರೆಗೆ ಹಾಗೂ ಸಿ ಶ್ರೇಣಿಯ ಆಟಗಾರು ₹ 8 ಲಕ್ಷದವರೆಗೆ ಪಡೆಯಲಿದ್ದಾರೆ.

ಆಟಗಾರರನ್ನು ಅವರು ಆಡುವ ಮಾದರಿಗಳು, ಅನುಭವ ಮತ್ತು ಶಾಧನೆಯ ಆಧಾರದಲ್ಲಿ ಈ ಗುತ್ತಿಗೆಗೆ ಆಯ್ಕೆ ಮಾಡಲಾಗುತ್ತದೆ.

‘ಈ ಉಪಕ್ರಮದಿಂದಾಗಿ ದೇಶಿ ಆಟಗಾರರಿಗೆ ಆರ್ಥಿಕ ಭದ್ರತೆ ಮತ್ತು ವೃತ್ತಿಪರ ಚೌಕಟ್ಟು ದೊರೆಯಲಿದೆ. ಉದಯೋನ್ಮುಖ ಕ್ರಿಕೆಟಿಗರಿಗೆ ದೀರ್ಘಕಾಲದ ಅವಕಾಶವೂ ಸಿಗಲಿದೆ’ ಎಂದು ಎಂಸಿಎ ಪ್ರಕಟಣೆಯಲ್ಲಿ ತಿಳಿಸಿದೆ.

ಡೋಪಿಂಗ್ ನಿಯಂತ್ರಣಕ್ಕೆ ಭಾರತ ಪ್ರಾಮಾಣಿಕ ಯತ್ನ: ಬಾಂಕಾ

ನವದೆಹಲಿ (ಪಿಟಿಐ): ‘ಭಾರತದಲ್ಲಿ ಗಂಭೀರವಾಗಿರುವ ಡೋಪಿಂಗ್ ಪಿಡುಗಿನ ಬಗ್ಗೆ ಯಾರೂ ಕಣ್ಣುಮುಚ್ಚಿ ಕೂತಿಲ್ಲ. ಇದನ್ನು ತಡೆಗಟ್ಟಲು ಪ್ರಾಮಾಣಿಕ ಪ್ರಯತ್ನಗಳಾಗುತ್ತಿವೆ’ ಎಂದು ವಿಶ್ವ ಉದ್ದೀಪನ ಮದ್ದುಸೇವನೆ ನಿಗ್ರಹ ಘಟಕದ (ವಾಡಾ) ಅಧ್ಯಕ್ಷ ವಿಟೋಲ್ಡ್ ಬಾಂಕಾ ಗುರುವಾರ ಒಪ್ಪಿಕೊಂಡರು.

ಜಾಗತಿಕ ಮಟ್ಟದಲ್ಲಿ ಉದ್ದೀಪನ ಮದ್ದು ಪೂರೈಕೆಗೆ ತಡೆಯೊಡ್ಡಲು ಇಂಟರ್‌ಪೋಲ್ ಸಮನ್ವಯದಿಂದ ನಡೆಯುತ್ತಿರುವ ‘ಅಪರೇಷನ್ ಅಪ್‌ಸ್ಟ್ರೀಮ್’ ಅನ್ನು ಅವರು ಪ್ರಸ್ತಾಪಿಸಿದರು. ನಾಲ್ಕು ದಿನಗಳ ಭಾರತ ಪ್ರವಾಸದಲ್ಲಿ ಎಡೆಬಿಡದ ಕಾರ್ಯಕ್ರಮಗಳ ನಂತರ ಅವರು ಮಾಧ್ಯಮ ಸಂವಾದದಲ್ಲಿ ಪಾಲ್ಗೊಂಡರು.

ಕಳಂಕಿತ ಕ್ರೀಡಾಪಟುಗಳಿಗೆ ಸಂಬಂಧಿಸಿ ‘ವಾಡಾ’ದ ಪಟ್ಟಿಯಲ್ಲಿ ಭಾರತ ಸತತ ಮೂರು ವರ್ಷಗಳಿಂದ ಅಗ್ರಸ್ಥಾನದಲ್ಲಿದೆ.

‘ಕ್ಷಮತೆವರ್ಧಕ ಮದ್ದು (ಪಿಇಡಿ) ಮತ್ತು ಸ್ಟಿರಾಯ್ಡ್‌ಗಳ ತಯಾರಿ ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದಿದೆ. ಇದು ಗಂಭೀರ ಸಮಸ್ಯೆ. ಇದರ ಬಗ್ಗೆ ಯಾರೂ ಸುಮ್ಮನೆ ಕುಳಿತಿಲ್ಲ. ಆದರೆ ಭಾರತ ಇದೇ ವೇಳೆ ವಿವಿಧ ಕ್ರೀಡೆಗಳಲ್ಲಿ ವಿಶ್ವ ಚಾಂಪಿಯನ್‌ಷಿಪ್, ಒಲಿಂಪಿಕ್ಸ್ ನಡೆಸಲು ಮುಂದಾಗಿದೆ. ಆದರೆ ವಾಡಾ ಮಾನದಂಡ ತಲುಪದೇ ಇದ್ದಲ್ಲಿ ಇದು ಸಾಧ್ಯವಿಲ್ಲ’ ಎಂದು ಅವರು ಹೇಳಿದರು.

ಭಾರತದಲ್ಲಿ 2030ರ ಕಾಮನ್ವೆಲ್ತ್ ಕ್ರೀಡೆಗಳ ಆತಿಥ್ಯ ನಿಗದಿಯಾಗಿದೆ. 2036ರ ಒಲಿಂಪಿಕ್ಸ್ ಆತಿಥ್ಯಕ್ಕೂ ಭಾರತ ಪ್ರಯತ್ನ ನಡೆಸುತ್ತಿದೆ.

ಅಪರೇಷನ್ ಅಪ್‌ಸ್ಟ್ರೀಮ್‌ನಡಿ 250 ದಾಳಿಗಳು ನಡೆದಿವೆ. 90 ಟನ್ ಕ್ಷಮತೆವರ್ಧಕ ಮದ್ದು ವಶಪಡಿಸಿಕೊಳ್ಳಲಾಗಿದೆ. ಇದರಿಂದಾಗಿ 1.8 ಶತಕೋಟಿ ಡೋಸ್‌ಗಳು ಮಾರುಕಟ್ಟೆಗೆ ಬರುವುದನ್ನು ತಡೆದಂತಾಗಿದೆ. 20 ದೇಶಗಳಲ್ಲಿ 88 ಅಕ್ರಮ ಲ್ಯಾಬ್‌ಗಳನ್ನು ಮುಚ್ಚಿಸಲಾಗಿದೆ.